ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಡಿಸೆಂಬರ್ 28 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 251 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



ಡಾ.ಮನಮೋಹನ್ ಸಿಂಗ್‌ಗೆ ಇಂದು ವಿದಾಯ

- ಇಂದು ಎಐಸಿಸಿ ಕೇಂದ್ರ ಕಚೇರಿಯಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ
- ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ವಿಪಕ್ಷ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶ್ರದ್ಧಾಂಜಲಿ

ನವದೆಹಲಿ, ಡಿ.27– ಗುರುವಾರ ನಿಧನರಾದ ಡಾ.ಮನಮೋಹನ್ ಸಿಂಗ್ ಅವರು ಅಂತ್ಯಕ್ರಿಯೆ ನಾಳೆ (ಡಿ.28) ಬೆಳಗ್ಗೆ 11.45ಕ್ಕೆ ಸಕಲ ಸರ್ಕಾರಿ ಗೌರವದೊಂದಿಗೆ ದೆಹಲಿಯ ನಿಗಮ ಬೋಧ್ ಘಾಟ್‌ನಲ್ಲಿ ನೆರವೇರಲಿದೆ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ.

ಅದಕ್ಕೂ ಮುನ್ನ ಬೆಳಗ್ಗೆ 8 ಗಂಟೆಗೆ ಕಾಂಗ್ರೆಸ್ ಕೇಂದ್ರ ಕಚೇರಿಗೆ ಪಾರ್ಥಿವ ಶರೀರವನ್ನು ತರಲಾಗುತ್ತಿದೆ. ಅಲ್ಲಿ ಬೆಳಗ್ಗೆ 8.30ರಿಂದ 9.30ರ ವರೆಗೂ ಸಾರ್ವಜನಿಕರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಅಲ್ಲಿಂದ ಬೆಳಗ್ಗೆ 9.30ಕ್ಕೆ ಅಂತಿಮ ಯಾತ್ರೆ ಶುರುವಾಗಲಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ತಿಳಿಸಿದ್ದಾರೆ. ಇಂದು ಬೆಳಗ್ಗೆ ಡಾ. ಮನಮೋಹನ್ ಸಿಂಗ್ ಅವರ ಪಾರ್ಥಿವ ಶರೀರಕ್ಕೆ ಅವರ ನಿವಾಸದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ಮೋದಿ, ಕಾಂಗ್ರೆಸ್ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಸೋನಿಯಾಗಾಂಧಿ, ರಾಹುಲ್‌ಗಾಂಧಿ ಸೇರಿದಂತೆ ಹಲವು ಗಣ್ಯರು ಅಂತಿಮ ನಮನ ಸಲ್ಲಿಸಿದರು. ತ್ರಿವರ್ಣ ಧ್ವಜ ಹೊದಿಸಿದ ಪಾರ್ಥಿವ ಶರೀರಕ್ಕೆ ಪಕ್ಷ ಬೇಧ ಮರೆತು ಅಂತಿಮ ಗೌರವ ಸಲ್ಲಿಸಿದರು. ಈ ವೇಳೆ ಸಿಂಗ್ ಅವರ ಪತ್ನಿ ಗುರುಶರಣ್ ಕೌರ್ ಮತ್ತಿತರ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು. ಅಮೆರಿಕದಲ್ಲಿರುವ ಮನಮೋಹನ್‌ಸಿಂಗ್ ಅವರ ಮಗಳಿಗಾಗಿ ಕುಟುಂಬ ಕಾಯುತ್ತಿದ್ದು, ಅವರು ಬಂದ ನಂತರ ನಾಳೆ ಪಾರ್ಥಿವ ಶರೀರದ ಅಂತ್ಯಕ್ರಿಯೆ ನಡೆಯಲಿದೆ. ಅಲ್ಲಿಯವರೆಗೂ ಅವರ ನವದೆಹಲಿಯ ನಿವಾಸದಲ್ಲಿಯೇ ಸಾರ್ವಜನಿಕರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ.

ಪ್ರಧಾನಿ ಮೋದಿ, ಸೋನಿಯಾ ಗಾಂಧಿ ಅಂತಿಮ ನಮನ: ಮಾಜಿ ಪ್ರಧಾನಮಂತ್ರಿ ಡಾ.ಮನಮೋಹನ್ ಸಿಂಗ್ ಅವರ ಪಾರ್ಥಿವ ಶರೀರ ದೆಹಲಿಯ ಅವರ ನಿವಾಸದಲ್ಲಿದ್ದು, ಗಣ್ಯಾತಿಗಣ್ಯರು ಸಿಂಗ್ ಅವರ ■ 6ನೇ ಪುಟಕ್ಕೆ



ಡಾ.ಮನಮೋಹನ್‌ಸಿಂಗ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಅಂತಿಮ ಗೌರವ ಸಲ್ಲಿಸಿದರು.

ಮಾರುತಿ 800 ಕಾರಿನ ಮೇಲೆ ಡಾ.ಮನಮೋಹನ್‌ಸಿಂಗ್‌ರಿಗೆ ಇನ್ನಿಲ್ಲದ ಪ್ರೀತಿ!

ಸರಳತೆ ನೆನೆದ ಮಾಜಿ ಭದ್ರತಾ ಸಿಬ್ಬಂದಿ



ಡಾ.ಮನಮೋಹನ್‌ಸಿಂಗ್ ಅಚ್ಚು ಮೆಚ್ಚಿನ ಕಾರಿದು. ಮಾಜಿ ಭದ್ರತಾ ಸಿಬ್ಬಂದಿ ಅರುಣ್ ಅಸ್ಸಿಂರನ್ನು ಕಾಣಬಹುದು.

ನವದೆಹಲಿ, ಡಿ.27–ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರ ಸರಳತೆ ಮತ್ತು ಮಾರುತಿ ಕಾರಿನ ಮೇಲಿನ ಪ್ರೀತಿಯನ್ನು ಅವರ ಮಾಜಿ ಭದ್ರತಾ ಅಧಿಕಾರಿ ಅರುಣ್ ಅಸ್ಸಿಂ ಸ್ಮರಿಸಿದ್ದಾರೆ. ಐಷಾರಾಮಿ ಬಿಎಂಡಬ್ಲ್ಯೂ ಕಾರನ್ನು ಬಿಟ್ಟು ಮಾರುತಿ 800 ಕಾರನ್ನೇ ಬಳಸಲು ಇಷ್ಟಪಡುತ್ತಿದ್ದ ಸಿಂಗ್, ಸಾಮಾನ್ಯರೊಂದಿಗಿನ ತಮ್ಮ ಸಂಪರ್ಕವನ್ನು ಪ್ರತಿಬಿಂಬಿಸುತ್ತಿದ್ದರು.

ದೇಶದ ಪ್ರಧಾನಿಯಾಗಿದ್ದರೂ ಡಾ. ಮನಮೋಹನ್ ಸಿಂಗ್ ಅವರು ವಿನಮ್ರವಾದ ನಡವಳಿಕೆ ಹಾಗೂ ಸರಳತೆಗೆ ಹೆಸರಾದವರು. ಇಂತಹ ನಾಯಕ ಲಕ್ಸುರಿ ಬಿಎಂಡಬ್ಲ್ಯೂ ಕಾರಿನ ಬದಲು ಸಾಮಾನ್ಯವಾದ ಮಾರುತಿ ಸುಜುಕಿ –800 ಕಾರನ್ನೇ ಬಹಳ ಇಷ್ಟಪಡುತ್ತಿದ್ದರಂತೆ. ಪ್ರಸ್ತುತ ಉತ್ತರ ಪ್ರದೇಶ ಕನೌಜ್‌ನ ಶಾಸಕರಾಗಿ ಸಚಿವರಾಗಿರುವ ಅರುಣ್ ಅಸ್ಸಿಂ ಅವರು ಹಿಂದೆ ಮನಮೋಹನ್‌ಸಿಂಗ್ ಪ್ರಧಾನಿಯಾಗಿದ್ದ ವೇಳೆ ಮೂರು ವರ್ಷಗಳ ಕಾಲ ಅವರ ಭದ್ರತಾ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು. ಅವರೀಗ ಮನಮೋಹನ್ ಸಿಂಗ್ ಅವರು ಸರಳತೆ ಬಗ್ಗೆ ಮಾತನಾಡಿದ್ದಾರೆ. ಮನಮೋಹನ್ ಸಿಂಗ್ ಅವರ ಬಳಿ ಇದ್ದಿದ್ದು ಒಂದೇ ಒಂದು ಕಾರು ಅದು ಮಾರುತಿ 800. ಪ್ರಧಾನಿಯವರಿಗೆ ಸರ್ಕಾರದಿಂದ ನೀಡಿದ ಐಷಾರಾಮಿ ಬಿಎಂಡಬ್ಲ್ಯೂ ಕಾರಿನ ಹಿಂದೆ ನಿಲ್ಲಿಸಿದ್ದ ಈ ಮಾರುತಿ 800 ಕಾರನ್ನು ಅವರು ಯಾವಾಗಲೂ ಕಾತುರದಿಂದಲೇ ನೋಡುತ್ತಿದ್ದರು. ನಾವು ಅದರ ಮೂಲಕ ಹಾದು ಹೋದಾಗಲೆಲ್ಲಾ ಅವರು ಅದನ್ನು ತನಗೆ ಸೇರಿದ್ದು ಎಂಬ ಭಾವನೆಯಿಂದಲೇ ನೋಡುತ್ತಿದ್ದರು. ಅವರು ನನಗೆ ಆಗಾಗ್ಗೆ ಅದರ ಬಗ್ಗೆ ಹೇಳುತ್ತಿದ್ದರು, ■ 6ನೇ ಪುಟಕ್ಕೆ

ಜಮ್ಮು ಕಾಶ್ಮೀರ ಕಣಿವೆಯಲ್ಲಿ ಪ್ರಪಾತಕ್ಕೆ ಉರುಳಿದ ಸೇನಾ ವಾಹನ ದುರಂತದಲ್ಲಿ ಕೊಡಗಿನ ಯೋಧನಿಗೆ ಗಂಭೀರ ಗಾಯ

ಮಡಿಕೇರಿ, ಡಿ.27–ಜಮ್ಮು ಕಾಶ್ಮೀರದ ಪೂಂಚ್ ಜಿಲ್ಲೆಯ ಮೆಂದಾರ್ ಕಣಿವೆಯಲ್ಲಿ ಡಿ.24ರಂದು ಸೇನಾ ವಾಹನ ಪ್ರಪಾತಕ್ಕೆ ಉರುಳಿದ ದುರಂತದಲ್ಲಿ ಕೊಡಗಿನ ಯೋಧ ಗಂಭೀರ ಗಾಯಗೊಂಡಿದ್ದಾರೆ. ಸೋಮವಾರಪೇಟೆ ತಾಲೂಕಿನ ಆಲೂರು ಸಿದ್ದಾಪುರದ ನಿವಾಸಿ ಪಳಂಗೋಟು ದಿವಂಗತ ಪ್ರಕಾಶ್ ಹಾಗೂ ಜಯ ದಂಪತಿ ಪುತ್ರ ದಿವಿನ್ (28) ಗಾಯಗೊಂಡ ಯೋಧ. ದಿವಿನ್ ಸ್ಥಿತಿ ಚಿಂತಾಜನಕವಾಗಿದ್ದು, ಶ್ರೀನಗರ ಸೇನಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಬಗ್ಗೆ ಭಾರತೀಯ ಸೇನೆಯಿಂದ ಕುಟುಂಬಸ್ಥರಿಗೆ ಮಾಹಿತಿ ನೀಡಲಾಗಿದೆ. ಸೇನೆಯಿಂದ ■ 6ನೇ ಪುಟಕ್ಕೆ



ಯೋಧ ದಿವಿನ್

ವಿಮೆ ಹಣಕ್ಕಾಗಿ ತಂದೆಯನ್ನೇ ಕೊಂದ ಮಗ

ಪಿರಿಯಾಪಟ್ಟಣ ತಾಲೂಕು ಕೊಪ್ಪದಲ್ಲಿ ಕರುಳು ಹಿಂಡುವ ಕೃತ್ಯ

ಬೈಲಕೊಪ್ಪ, ಡಿ. 27(ಆರ್‌ಕೆ)– ವಿಮೆ ಹಣದ ಆಸೆಗಾಗಿ ಜನ್ಮ ನೀಡಿದ ತಂದೆಯನ್ನೇ ಮಗ ದೊಣ್ಣೆಯಿಂದ ಹೊಡೆದು ಹತ್ಯೆಗೈದಿರುವ ಹೃದಯವಿದ್ರಾವಕ ಘಟನೆ ಪಿರಿಯಾಪಟ್ಟಣ ತಾಲೂಕು, ಕೊಪ್ಪ ಗ್ರಾಮದಲ್ಲಿ ಗುರುವಾರ ಸಂಜೆ ಸಂಭವಿಸಿದೆ.

ಗ್ರಾಮದ ಅಣ್ಣಪ್ಪ(48) ಕೊಲೆಯಾದವರಾಗಿದ್ದು, ಈ ವಿಷಯ ತಿಳಿಯುತ್ತಿದ್ದಂತೆಯೇ ಆಘಾತಗೊಂಡ ಅವರ ಸಹೋದರ ಧರ್ಮ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಣ್ಣಪ್ಪ ಅವರ ಮಗ ಕೆ.ಎ.ಪಾಂಡು, ತಾಲೂಕಿನ ಮಂಚದೇವನಹಳ್ಳಿಯ ಬಿದಿರುವನದ ಮುಂದೆ ದೊಣ್ಣೆಯಿಂದ ತಂದೆಯ ತಲೆಗೆ ಹೊಡೆದು ಕೊಲೆ ಮಾಡಿದ್ದಾನೆ ಎಂಬುದು ಪೊಲೀಸರ ಮಹಜರ್‌ನಿಂದ ತಿಳಿದು ಬಂದಿದೆ. ತಂದೆ ಹೆಸರಿನಲ್ಲಿರುವ ಜೀವ ವಿಮಾ ಹಣ ಪಡೆದುಕೊಳ್ಳಬಹುದೆಂದು ಯೋಚಿಸಿದ ಪಾಂಡು, 'ನಿನಗೆ ಟಿಬೇಟಿಯನ್ 1ನೇ ಕ್ಯಾಂಪಿನಲ್ಲಿ ಕೆಲಸ ಸಿಗುತ್ತದೆ. ಅಲ್ಲಿಗೆ ಹೋಗಿ ಎಂದು ಹೇಳಿದ. ಅಣ್ಣಪ್ಪ ಹೋಗುತ್ತಿದ್ದಾಗ ಹಿಂದಿನಿಂದ ಹೋದ ಆತ, ಬಿ.ಎಂ. ರಸ್ತೆಯ ಮಂಚದೇವನಹಳ್ಳಿಯ ಬಿದಿರುವನದ ಬಳಿ ದೊಣ್ಣೆಯಿಂದ ಅವರ ತಲೆಗೆ ಬಲವಾಗಿ ಹೊಡೆದು ಹತ್ಯೆಗೈದಿದ್ದಾನೆ. ನಂತರ ಆತ ಬೈಲಕುಪ್ಪೆ ಪೊಲೀಸ್ ಠಾಣೆಗೆ ತೆರಳಿ ನಮ್ಮ ತಂದೆಗೆ ಯಾವುದೋ ವಾಹನ ಡಿಕ್ಕಿ ಹೊಡೆದು ಪರಾರಿಯಾಗಿದ್ದು, ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ಪಾಂಡು ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಸ್ಥಳಕ್ಕೆ ತೆರಳಿದ ಪೊಲೀಸರು, ಮಹಜರು ನಡೆಸಿದಾಗ ಮೃತದೇಹ ಬಿದ್ದಿದ್ದ ಸ್ಥಳವು ರಸ್ತೆ ಅಂಚಿನಿಂದ 15 ಅಡಿ ದೂರದಲ್ಲಿರುವುದು ಕಂಡುಬಂದಿತು. ರಸ್ತೆ ಪಕ್ಕ ಮತ್ತು ಫುಟ್‌ಪಾತ್ ಮೇಲೆ ಯಾವುದೇ ವಾಹನ ಓಡಾಡಿರುವ ■ 6ನೇ ಪುಟಕ್ಕೆ



ಅಣ್ಣಪ್ಪ



ಕೆ.ಎ.ಪಾಂಡು

ಮಾಜಿ ಸೈನಿಕನ ಗುಂಡಿಗೆ ಕಾರ್ಮಿಕ ಬಲಿ

ವಿರಾಜಪೇಟೆ, ಡಿ.27–ಮಾಜಿ ಸೈನಿಕ, ಗುಂಡು ಹಾರಿಸಿ ಕೂಲಿ ಕಾರ್ಮಿಕನ ಹತ್ಯೆಗೈದ ಘಟನೆ ತಾಲೂಕಿನ ಚಂಬೆ ಬೆಳ್ಳೂರು ಗ್ರಾಮದಲ್ಲಿ ಶುಕ್ರವಾರ ಸಂಜೆ ನಡೆದಿದೆ.

ಕಾಫಿ ಬೆಳೆಗಾರರೊಬ್ಬರ ತೋಟದಲ್ಲಿ ಕಾರ್ಮಿಕನಾಗಿ ಕೆಲಸ ಮಾಡಿಕೊಂಡು ಅವರ ಲೈನ್ ಮನೆಯಲ್ಲಿ ವಾಸಿಸುತ್ತಿದ್ದ ಪಣಿಯರವರ ಪೊನ್ನು (23), ಮಾಜಿ ಯೋಧ ಚಿಣ್ಣಪ್ಪ ಹಾರಿಸಿದ ಗುಂಡಿಗೆ ಬಲಿಯಾಗಿದ್ದಾನೆ. ಇಂದು ಸಂಜೆ 5 ಗಂಟೆ ಸುಮಾರಿನಲ್ಲಿ ಚಿನ್ನಪ್ಪ ಅವರ ತೋಟದ ಹಲಸಿನ ಮರದ ಬಳಿ ಪಣಿ ಯರವರ ಪೊನ್ನು ಹೋದ ವೇಳೆ ಈತ ಹಲಸಿನಹಣ್ಣು ಕದಿಯಲು ಬಂದಿದ್ದಾನೆ ಎಂದು ಭಾವಿಸಿದ ಚಿಣ್ಣಪ್ಪ, ತನ್ನ ಬಳಿ ಇದ್ದ ಜಮ್ಮಾ ಬಂದೂಕಿನಿಂದ ಆತನ ಮೇಲೆ ಗುಂಡು ಹಾರಿಸಿದ್ದಾನೆ ಎನ್ನಲಾಗಿದ್ದು, ಪಣಿಯರವರ ಪೊನ್ನು ಸ್ಥಳದಲ್ಲೇ ಸಾವನ್ನಪ್ಪಿದ್ದು, ಆತನ ತಂದೆ ಪಣಿ ಯರವರ ತಮ್ಮ ನೀಡಿದ ದೂರನ್ನು ದಾಖಲಿಸಿಕೊಂಡಿರುವ ವಿರಾಜಪೇಟೆ ಗ್ರಾಮಾಂತರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಪ್ರವಾಸಿಗರಿಗೆ ಮೈಸೂರು ಅಚ್ಚು ಮೆಚ್ಚು


ದೇಶದ ಟಾಪ್ ಪ್ರವಾಸಿ ತಾಣಗಳಲ್ಲಿ ಮೈಸೂರಿಗೆ ಐದನೇ ಸ್ಥಾನ

ಟ್ರಾವೆಲ್ ಸರ್ಚ್ ಅಂಡ್ ಬುಕ್ಕಿಂಗ್ ಟ್ರೆಂಡ್ ವರದಿಯಲ್ಲಿ ಮೈಸೂರಿಗೆ ಹೆಮ್ಮೆಯ ಸ್ಥಾನ









ಬಾಪುಲಿಂಗರಾಜ್ ಅರಸ್

ಮೈಸೂರು, ಡಿ.27–ವಾರಾಂತ್ಯದಲ್ಲಿ ಪ್ರವಾಸ ಕೈಗೊಳ್ಳಲು ದೇಶ–ವಿದೇಶಿ ಪ್ರವಾಸಿಗರು ಆಯ್ಕೆ ಮಾಡಿಕೊಳ್ಳುವ ದೇಶದ ನೆಚ್ಚಿನ ಪ್ರವಾಸಿ ತಾಣಗಳಲ್ಲಿ ಈ ವರ್ಷ ಸಾಂಸ್ಕೃತಿಕ ನಗರಿ ಮೈಸೂರು ಟಾಪ್ 5 ರಲ್ಲಿ ಸ್ಥಾನ ಪಡೆದಿದೆ.

ಪ್ರಖ್ಯಾತ ಖಾಸಗಿ ಪ್ರವಾಸಿ ಸಂಸ್ಥೆ ಮೇಕ್ ಮೈ ಟ್ರಿಪ್ ನಡೆಸಿರುವ ಸಮೀಕ್ಷೆಯಲ್ಲಿ ಪ್ರವಾಸಿಗರ ನೆಚ್ಚಿನ ಪ್ರವಾಸಿ ತಾಣಗಳಲ್ಲಿ ಮೈಸೂರು ದೇಶದಲ್ಲೇ 5ನೇ ಸ್ಥಾನ ಪಡೆದಿದೆ. ಈ ಮೂಲಕ ಮೈಸೂರಿನ ಪ್ರವಾಸಿ ತಾಣದ ಹಿರಿಮೆ ಗರಿಮೆ ಮತ್ತಷ್ಟು ಹೆಚ್ಚಿದೆ. ಇನ್ನು ಮುಂದೆ ಮೈಸೂರಿಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಇಮ್ಮಡಿಗೊಳ್ಳುವ ಸಾಧ್ಯತೆ ಹೆಚ್ಚಿದೆ. ವರ್ಷಾಂತ್ಯಕ್ಕೆ ಇನ್ನು ಕೇವಲ ನಾಲ್ಕು ದಿನ ಮಾತ್ರ ಬಾಕಿ ಇದೆ. ಈ ಸಂದರ್ಭದಲ್ಲಿ 2024ರಲ್ಲಿ ಪ್ರವಾಸಿಗರು ತಮ್ಮ ನೆಚ್ಚಿನ ಯಾವ ಪ್ರವಾಸಿ ತಾಣ ಆಯ್ಕೆ ಮಾಡಿಕೊಂಡಿದ್ದಾರೆ ಎಂಬ ಬಗ್ಗೆ ಮೇಕ್ ಮೈ ಟ್ರಿಪ್‌ನ 2023–24ನೇ ಸಮೀಕ್ಷೆ ನಡೆಸಿ ವರದಿ ಬಿಡುಗಡೆ ಮಾಡಿದೆ. ಮೇಕ್ ಮೈ ಟ್ರಿಪ್ ಟ್ರಾವೆಲ್ ಸರ್ಚ್ ಅಂಡ್ ಬುಕ್ಕಿಂಗ್ ಟ್ರೆಂಡ್ ಹೆಸರಿನಲ್ಲಿ ವರದಿ ಬಿಡುಗಡೆ ಮಾಡಿದ್ದು, ಭಾರತ ಮಾತ್ರವಲ್ಲದೆ ವಿದೇಶದ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರು ಆಯ್ಕೆ ಮಾಡಿಕೊಂಡಿರುವ ಪ್ರವಾಸಿ ತಾಣಗಳ ಪಟ್ಟಿಯನ್ನು ಕೂಡ ನೀಡಿದೆ.

ಗೂಗಲ್ ಸರ್ಚ್ ಹಾಗೂ ದೇಶ ವಿದೇಶದ ಟ್ರಾವೆಲ್ ಏಜೆನ್ಸಿಗಳ ಮೂಲಕ ಮಾಹಿತಿ ಸಂಗ್ರಹ ಮಾಡಿದ್ದು, ಪ್ರವಾಸಿಗರು ಭಾರತದಲ್ಲಿ ಆಯ್ಕೆ ಮಾಡಿಕೊಂಡ ನೆಚ್ಚಿನ ಪ್ರವಾಸಿ ತಾಣಗಳು ಯಾವುವು ಎಂಬ ವಿವರ ನೀಡಿದೆ. ಈ ಮೂಲಕ ಮೈಸೂರು ಸೇರಿದಂತೆ ಪ್ರತಿಯೊಂದು ಪ್ರವಾಸಿ ತಾಣಕ್ಕೆ ಪ್ರವಾಸಿಗರ ಸಂಖ್ಯೆಯನ್ನು ಶೇಕಡವಾರು ಪ್ರಮಾಣದಲ್ಲಿ ರೇಟಿಂಗ್ ಕೂಡ ನೀಡಿದೆ. ಮೇಕ್ ಮೈ ಟ್ರಿಪ್ ಪ್ರಕಾರ ಹೆಚ್ಚು ಪ್ರವಾಸಿಗರು ಆಯ್ಕೆ ಮಾಡಿಕೊಂಡ ದೇಶದ ಮೊದಲ ಪ್ರವಾಸಿ ತಾಣವೆಂದರೆ ಅದು ಉತ್ತರಾಖಂಡದ ಜಿಮ್ ಕಾರ್ಬೆಟ್ ಆಗಿದೆ. ದೇಶದಲ್ಲಿ ಹುಲಿಗಳ ಸಂತತಿ ಹೆಚ್ಚಳಕ್ಕೆ ■ 6ನೇ ಪುಟಕ್ಕೆ

ಕರ್ನಾಟಕದ ಪ್ರವಾಸೋದ್ಯಮ ಇಲಾಖೆಯಲ್ಲಿರುವ ಡಾಟಾ ಪ್ರಕಾರ ಹೆಚ್ಚು ಪ್ರವಾಸಿಗರು ಭೇಟಿ ನೀಡುವ ಪ್ರವಾಸಿ ತಾಣಗಳಲ್ಲಿ ಮೈಸೂರು ಅಗ್ರ ಸ್ಥಾನದಲ್ಲಿದೆ. ಬೇಸಿಗೆ ರಜೆ, ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವ ಹಾಗೂ ಕ್ರಿಸ್ ಮಸ್ ಹಬ್ಬದ ಸಂದರ್ಭದಲ್ಲಿ ದಾಖಲೆ ಪ್ರಮಾಣದಲ್ಲಿ ಪ್ರವಾಸಿಗರು ಮೈಸೂರಿಗೆ ಭೇಟಿ ನೀಡುತ್ತಿದ್ದಾರೆ. ಬೆಂಗಳೂರಿನಿಂದ ಮೈಸೂರಿಗೆ ಹೆಚ್ಚು ಪ್ರವಾಸಿಗರು ಭೇಟಿ ನೀಡಲು ಬೆಂಗಳೂರು–ಮೈಸೂರು ಎಕ್ಸ್ ಪ್ರೆಸ್ ವೇ ಪ್ರಮುಖ ಕಾರಣವಾಗಿದೆ. ಗುಣಮಟ್ಟದ ರಸ್ತೆ ಇರುವುದರಿಂದ ಸಂಚಾರ ದಟ್ಟಣೆ ಕಿರಿಕಿರಿ ಇಲ್ಲದೆ ಕಡಿಮೆ ಸಮಯದಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಬರಲು ಸೌಲಭ್ಯ ಇರುವ ಕಾರಣ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಿದೆ. ಕರ್ನಾಟಕಕ್ಕೆ ಆಗಮಿಸುವ ಪ್ರವಾಸಿಗರು ಮೊದಲು ಮೈಸೂರು ಆಯ್ಕೆ ಮಾಡಿಕೊಳ್ಳುತ್ತಾರೆ. ತರುವಾಯ ಕರಾವಳಿ ಪ್ರದೇಶದ ಪ್ರವಾಸಿ ತಾಣಗಳಿಗೆ ಹೋಗುತ್ತಿದ್ದಾರೆ. ಮೇಕ್ ಮೈ ಟ್ರಿಪ್ ನೀಡಿರುವ ವರದಿ ಇನ್ನು ನನ್ನ ಗಮನಕ್ಕೆ ಬಂದಿಲ್ಲ. ಸಂಬಂಧಿಸಿದ ಅಧಿಕಾರಿಗಳಿಂದ ಈ ಬಗ್ಗೆ ಮಾಹಿತಿ ಪಡೆಯುತ್ತೇನೆ.



–ಎಂ.ಕೆ.ಸವಿತಾ, ಜಂಟಿ ನಿರ್ದೇಶಕರು, ಕರ್ನಾಟಕ ಪ್ರವಾಸೋದ್ಯಮ ಇಲಾಖೆ, ಮೈಸೂರು.

ಬದಲಾವಣೆ ಬಯಸಿ ಕೊಡಗು ಆಯ್ಕೆ ಮಾಡಿಕೊಂಡ ಪ್ರವಾಸಿಗರು

ಬದಲಾವಣೆ ಬಯಸಿ ಪ್ರವಾಸಿಗರು 2024ರಲ್ಲಿ ಹೆಚ್ಚು ಆಯ್ಕೆ ಮಾಡಿಕೊಂಡ ದೇಶದ ತಾಣಗಳಲ್ಲಿ ಕೊಡಗು ಕೂಡ ಸ್ಥಾನ ಪಡೆದಿದೆ. ಮೇಕ್ ಮೈ ಟ್ರಿಪ್‌ನ ಟ್ರಾವೆಲ್ ಸರ್ಚ್ ಅಂಡ್ ಬುಕ್ಕಿಂಗ್ ಟ್ರೆಂಡ್ ಈ ಬಗ್ಗೆ ವಿವರ ನೀಡಿದ್ದು, ಬೇರೆ ಪ್ರವಾಸಿ ತಾಣಗಳ ಜೊತೆಗೆ ಬದಲಾವಣೆ ಬಯಸಿ ಆಯ್ಕೆ ಮಾಡಿಕೊಂಡ ದೇಶದ ಪ್ರವಾಸಿ ತಾಣಗಳಲ್ಲಿ ಕೊಡಗು ಸ್ಥಾನ ಪಡೆದಿದೆ. ಸಾಮಾನ್ಯವಾಗಿ ತಾವು ಭೇಟಿ ನೀಡಲು ಉದ್ದೇಶಿಸಿದ್ದ ಪ್ರವಾಸಿ ತಾಣಗಳ ವೀಕ್ಷಣೆಯನ್ನು ಪ್ರವಾಸಿಗರು ಬದಲಾವಣೆ ಮಾಡಿಕೊಳ್ಳುತ್ತಾರೆ. ಈ ವರ್ಗದಲ್ಲಿ ಕೊಡಗು ಕೂಡ ಒಂದಾಗಿರುವುದು ಹೆಮ್ಮೆಯ ವಿಚಾರವಾಗಿದೆ. ಕೊಡಗಿನಂತೆ ಪ್ರವಾಸಿಗರು ಬದಲಾವಣೆ ಬಯಸಿ ಆಯ್ಕೆ ಮಾಡಿಕೊಂಡ ದೇಶದ ಪ್ರವಾಸಿ ತಾಣಗಳೆಂದರೆ ಅಮರನಾಥ್, ಕೇದರನಾಥ್, ಬದರಿನಾಥ್, ಜಿಮ್ ಕಾರ್ಬೆಟ್, ಉಜ್ಜಯಿನಿ, ಅಹಮದಾಬಾದ್, ಲಕ್ನೋ, ಅಯೋಧ್ಯೆ, ಡಾರ್ಜಿಲಿಂಗ್, ಇಂದೋರ್, ■ 6ನೇ ಪುಟಕ್ಕೆ

ನಾಳೆ ಮೈಸೂರಲ್ಲಿ ಪಿಂಚಣಿದಾರರ ಸಭೆ

ಮೈಸೂರು, ಡಿ.27(ಜಿಎ)–ಇಪಿಎಸ್ 95–ರಾಷ್ಟ್ರೀಯ ಹೋರಾಟ ಸಮಿತಿ, ಕರ್ನಾಟಕದ ವತಿಯಿಂದ ಡಿ.29 ರಂದು ಬೆಳಗ್ಗೆ 10.30ರಿಂದ ಮಧ್ಯಾಹ್ನ 1.30 ರವರೆಗೆ ನಗರದ ಬಂಬೂ ಬಜಾರ್‌ನಲ್ಲಿನ ಹೋಟೆಲ್ ರಿಯೋ ಮೆರಿಡಿಯನ್‌ನಲ್ಲಿ ಪಿಂಚಣಿದಾರರ ಸಭೆ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಜಿ.ಎಸ್.ಎಂ. ಸ್ವಾಮಿ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಸಮಿತಿಯ ಅಶೋಕ್ ರಾವತ್ ಹಾಗೂ ರಮಾಕಾಂತ ನರಗುಂದ ಅವರು ಪಾಲ್ಗೊಂಡು ಇಪಿಎಸ್–95 ಪಿಂಚಣಿ ಪಡೆಯುವುದು ಹೇಗೆ ಎಂಬುದರ ಬಗ್ಗೆ ಮಾಹಿತಿ ನೀಡಲಿದ್ದಾರೆ ಎಂದರು.

ಎಲ್ಲಾ ನಿವೃತ್ತ ಉದ್ಯೋಗಿಗಳು ಈ ಪಿಂಚಣಿ ಕೊಡುಗೆ ನೀಡಿದ್ದರೂ ಇವರಿಗೆ ಸರಾಸರಿ 1175 ರೂ., ಪಿಂಚಣಿ ದೊರೆಯುತ್ತಿದೆ. ಹೀಗಾಗಿ ಇವರ ಪರಿಸ್ಥಿತಿ ಕರುಣಾಜನಕವಾಗಿದ್ದು, ಎರಡು ಹೊತ್ತಿನ ಊಟ, ಆರೋಗ್ಯ ವೆಚ್ಚಗಳಿಗೇ ಏನೇನೂ ಸಾಲುತ್ತಿಲ್ಲ. ಆದ್ದರಿಂದ ಪಿಂಚಣಿ 7500ಕ್ಕೆ ಹೆಚ್ಚಿಸಬೇಕು, ಆರೋಗ್ಯ ಪ್ರಯೋಜನ ದೊರಕಿಸಿಕೊಡಬೇಕು. ವಿಧವೆಯರಿಗೆ ಶೇ.100 ರಷ್ಟು ಪಿಂಚಣಿ ನೀಡಬೇಕು ಎಂಬ ಮೊದಲಾದ ಬೇಡಿಕೆ ಈಡೇರಿಕೆಗಾಗಿ ಕೇಂದ್ರ ಸರ್ಕಾರವನ್ನು ಈ ವೇಳೆ ಒತ್ತಾಯಿಸಲಾಗುವುದು. ಈ ಸಭೆಯಲ್ಲಿ ವಿವಿಧ ಭಾಗಗಳಿಂದ ಸುಮಾರು ಒಂದೂವರೆ ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ರಮಾಕಾಂತ ನರಗುಂದ, ಬಾಲಕೃಷ್ಣ, ಆರ್.ಸುಬ್ಬಣ್ಣ, ಸಿ.ಎಸ್.ಮಂಜುನಾಥ್, ಶಂಕರ ಪ್ರಸಾದ್, ಎಂ.ಷಡಕ್ಷರಿ, ಹುಚ್ಚಪ್ಪ ಉಪಸ್ಥಿತರಿದ್ದರು.

ನಾಳೆ ವಿಶ್ವಮಾನವ ವಿಚಾರ ಕಾರ್ಯಕ್ರಮ



ಮೈಸೂರು, ಡಿ.27–ವಿಶ್ವಚೇತನ, ಯುಗದ ಕವಿ ಕುವೆಂಪು ಅವರ ಜನ್ಮ ದಿನದ ಪ್ರಯುಕ್ತ ಕನ್ನಡದ್ ಕನ್ನಡಿ ವತಿ ಯಿಂದ ಡಿ.29ರಂದು ಸಂಜೆ 4 ಗಂಟೆಗೆ ಮೈಸೂರಿನ ಸರಸ್ವತಿಪುರಂನಲ್ಲಿರುವ ದಿ ಹೆರಿಟೇಜ್ ಹೌಸ್‌ನಲ್ಲಿ ವಿಶ್ವಮಾನವ ವಿಚಾರ ಕಾರ್ಯಕ್ರಮ ಆಯೋಜಿಸ ಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆ ಅಲೈಯನ್ಸ್ ಇಂಟರ್ ನಾಷನಲ್ ಜಿಲ್ಲಾ 255ರ ಪ್ರಾಂತಿಯ ಸಮ್ಮೇಳನ

ಮೈಸೂರು, ಡಿ.27(ಜಿಎ)–ಮೈಸೂರಿನ ಅಲೈಯನ್ಸ್ ಕ್ಲಬ್ ಇಂಟರ್ ನ್ಯಾಷನಲ್ ಜಿಲ್ಲೆ 255ರ ಪ್ರಾಂತೀಯ ಸಮ್ಮೇಳನ ಡಿ.29 ರಂದು ಬೆಳಗ್ಗೆ 10ಗಂಟೆಗೆ ಹೂಟಗಳ್ಳಿ ಕೆಎಚ್‌ಬಿ ಕಾಲೋನಿಯ ಅನಂತೇಶ್ವರ ಭವನದಲ್ಲಿ ನಡೆಯಲಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಅಂತಾರಾಷ್ಟ್ರೀಯ ನಿರ್ದೇಶಕ ನಾಗರಾಜ ವಿ.ಬೈರಿ ಈ ವಿಷಯ ತಿಳಿಸಿ, ಸಮ್ಮೇಳನವು 'ಧ್ಯಾನದಿಂದ ಶಾಂತಿ ಮತ್ತು ಆರೋಗ್ಯ' ಧ್ಯೇಯ ವಾಕ್ಯದೊಂದಿಗೆ ನಡೆಯಲಿದ್ದು, ಪ್ರಾಂತೀಯ ಅಧ್ಯಕ್ಷೆ ಇಂದಿರಾ ವೆಂಕಟೇಶ್ ಅಧ್ಯಕ್ಷತೆ ವಹಿಸುವರು. ಸಮ್ಮೇಳನವನ್ನು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿವಿಯ ಮುಖ್ಯ ಸಂಚಾಲಕಿ ಬಿ.ಕೆ.ಲಕ್ಷ್ಮೀಜಿ ಉದ್ಘಾಟಿಸಲಿದ್ದಾರೆ. ಡಾ.ವಿಜಯ್‌ಕುಮಾರ್ ಬಲ್ಲೇನಹಳ್ಳಿ ಮುಖ್ಯ ಭಾಷಣ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್ ಆಗಮಿಸಲಿದ್ದಾರೆ. ಆಹ್ವಾನಿತರಾಗಿ ಕೆಎಂ.ಮುನಿಯಪ್ಪ, ಜಿ.ಪಿ.ದಿವಾಕರ್, ಅಜಂತ ರಂಗಸ್ವಾಮಿ ಪಾಲ್ಗೊಳ್ಳಲಿದ್ದಾರೆ. ಸಮ್ಮೇಳನದಲ್ಲಿ ಸುಮಾರು 350 ಮಂದಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಸಿರಿಬಾಲು, ಸುನಿಲ್‌ಕುಮಾರ್, ಬೆಟ್ಟೇಗೌಡ, ಕೃಷ್ಣೋಜಿರಾವ್, ಶ್ರೀಕಾಂತ್, ಇಂದಿರಾ ವೆಂಕಟೇಶ್ ಉಪಸ್ಥಿತರಿದ್ದರು.

ಇಂದಿನಿಂದ 'ಸಮಕಾಲೀನ ಯುಗದಲ್ಲಿ ಸಾಮಾಜಿಕ ನ್ಯಾಯದ ಬದಲಾದ ಮಜಲುಗಳು' ರಾಷ್ಟ್ರೀಯ ಕಾರ್ಯಾಗಾರ

ಮೈಸೂರು, ಡಿ.27(ಜಿಎ)–ರಾಜ್ಯ ಕಾನೂನು ವಿವಿ ವತಿಯಿಂದ ಡಿ. 28 ಮತ್ತು 29 ರಂದು ನಗರದ ಎಸ್‌ಬಿಆರ್‌ಆರ್ ಮಹಾಜನ ಕಾನೂನು ಮಹಾ ವಿದ್ಯಾಲಯದಲ್ಲಿ 'ಸಮಕಾಲೀನ ಯುಗದಲ್ಲಿ ಸಾಮಾಜಿಕ ನ್ಯಾಯದ ಬದಲಾದ ಮಜಲುಗಳು' ವಿಷಯ ಕುರಿತ ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕುಲಪತಿ ಡಾ.ಸಿ.ಬಸವರಾಜು ಈ ವಿಷಯ ತಿಳಿಸಿ, ಡಿ.28ರಂದು ಬೆಳಗ್ಗೆ 10ಕ್ಕೆ ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಉಚ್ಚ ನ್ಯಾಯಾಲಯದ ನ್ಯಾಯಾಮೂರ್ತಿಗಳಾದ ಇ.ಎಸ್. ಇಂದಿರೇಶ್ ಚಾಲನೆ ನೀಡುವರು. ರಾಜ್ಯ ಕಾನೂನು ಆಯೋಗದ ಮುಖ್ಯಸ್ಥರಾದ ಡಾ.ಅಶೋಕ ಬಿ. ಹಿಂಚಗೇರಿ ಹಾಗೂ ನ್ಯಾಯಮೂರ್ತಿಗಳಾದ ಟಿ.ಟಿ. ಶಿವಶಂಕರೇಗೌಡ, ಸಾಮಾಜಿಕ ನ್ಯಾಯದ ಕಾರ್ಯಕರ್ತರಾದ ವಾದೀರಾಜ್ ವೇದಿಕೆಯಲ್ಲಿ ಉಪಸ್ಥಿತರಿರಲಿದ್ದಾರೆ ತಿಳಿಸಿದರು. ಡಿ.29ರ ಮಧ್ಯಾಹ್ನ 3 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ರಾಜ್ಯ ಚುನಾವಣಾ ಆಯೋಗದ ಆಯುಕ್ತ ಜಿ.ಎಸ್.ಸಂಗ್ರೇಶಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಕರ್ನಾಟಕ ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ, ಪ್ರೊ.ಎನ್.ಕೆ.ಲೋಕನಾಥ್, ಪ್ರೊ.ಸುರೇಶ್ ವಿ.ನಾಡಗೌಡ ಆಗಮಿಸಲಿದ್ದಾರೆ. ಈ ಕಾರ್ಯಾಗಾರದಲ್ಲಿ ಸುಮಾರು 350 ಮಂದಿ ಪಾಲ್ಗೊಂಡು ಸಂಶೋಧನಾ ಪ್ರಬಂಧ ಮಂಡಿಸಲಿದ್ದಾರೆ. ಇಲ್ಲಿ ಕೈಗೊಂಡ ನಿರ್ಣಯಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ವಿವಿಧ ವಿದ್ಯಾಲಯಗಳ ಪ್ರಾಚಾರ್ಯರಾದ ಡಾ.ದೀಪು, ಡಾ. ವಾಣಿಶ್ರೀ, ಡಾ.ಮಹೇಶ್, ಡಾ.ಸಂದೀಪ್, ಸೌಮ್ಯ ಉಪಸ್ಥಿತರಿದ್ದರು.

ನಾಳೆ ನಾಲ್ಕನೇ ಮೈಸೂರು ಅಂತಾರಾಷ್ಟ್ರೀಯ ಫಿಲ್ಮ್ ಫೆಸ್ಟಿವಲ್

ನಟ ಡಾಲಿ ಧನಂಜಯ ಪೋಸ್ಟರ್ ಬಿಡುಗಡೆ



4ನೇ ಮೈಸೂರು ಅಂತಾರಾಷ್ಟ್ರೀಯ ಫಿಲ್ಮ್ ಫೆಸ್ಟಿವಲ್–2024ರ ಚಿತ್ರಸಂತೆಯ ಪ್ರಚಾರದ ಪೋಸ್ಟರ್ ಅನ್ನು ನಟ ಡಾಲಿ ಧನಂಜಯ ಬಿಡುಗಡೆ ಮಾಡಿದರು.

ಮೈಸೂರು,ಡಿ.27–ಮೈಸೂರಿನ ಜೆ.ಕೆ.ಮೈದಾನದಲ್ಲಿ ಡಿ.29ರಂದು ಬೆಳಗ್ಗೆ 9ರಿಂದ ರಾತ್ರಿ 10ರವರೆಗೂ ಮೇಕ್ ಸೊಸೈಟಿ ಸ್ಮೈಲ್ ಫೌಂಡೇಶನ್ ವತಿಯಿಂದ 4ನೇ ಮೈಸೂರು ಅಂತಾರಾಷ್ಟ್ರೀಯ ಫಿಲ್ಮ್ ಫೆಸ್ಟಿವಲ್–2024 ಮತ್ತು ಮೊದಲ ಬಾರಿಗೆ ಆಯೋಜಿಸಲಾಗುತ್ತಿರುವ ಚಿತ್ರಸಂತೆಯ ಪ್ರಚಾರದ ಪೋಸ್ಟರ್ ಅನ್ನು ಸ್ಯಾಂಡಲ್‌ವುಡ್‌ನ ಖ್ಯಾತ ಉದಯೋನ್ಮುಖ ನಟ ಮತ್ತು ರಂಗಭೂಮಿ ಕಲಾವಿದ ಡಾಲಿ ಧನಂಜಯ ಬಿಡುಗಡೆ ಮಾಡಿದರು.

ಈ ವೇಳೆ ಅವರು ಮಾತನಾಡಿ, ಚಿತ್ರಸಂತೆ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನಡೆಯುತ್ತಿರುವುದಕ್ಕೆ ಹರ್ಷ ವ್ಯಕ್ತಪಡಿಸಿ, ಹೆಚ್ಚಿನ ಕಲಾ ಪ್ರೇಮಿಗಳು ಆಗಮಿಸಿ ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.

ಈ ವರ್ಷ ವಿಶೇಷವಾಗಿ ಸಾರ್ವಜನಿಕರಿಗೆ ಗಾಯನ ಸ್ಪರ್ಧೆ, ಮಕ್ಕಳಿಗೆ ಅಲಂಕಾರಿಕ ಸ್ಪರ್ಧೆ ಹಾಗೂ ಚಿತ್ರಕಲಾ ಸ್ಪರ್ಧೆ ಆಯೋಜಿಸುತ್ತಿದ್ದು, ಪ್ರತಿ ವಿಭಾಗದ ಮೂರು ಸ್ಪರ್ಧೆಯ ವಿಜೇತರಿಗೆ ಆಕರ್ಷಕ ಬಹುಮಾನ ನೀಡಲಾಗುವುದು. ಸಿನಿ ಸಂತೆಯಲ್ಲಿ ವಿವಿಧ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ಮಳಿಗೆಗಳನ್ನು ತೆರೆಯಲಾಗುವುದು. ಮಾಹಿತಿಗಾಗಿ 6360959871/6364632425 ಸಂಪರ್ಕಿಸಬಹುದು.

ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ಸಂಪರ್ಕಾಧಿಕಾರಿ ಶಂಕರ್ ಎಸ್‌ಎನ್, ಉದ್ಯಮಿ ಗಗನ್ ದೀಪ್ ಸೇರಿದಂತೆ 4ನೇ ಮೈಸೂರು ಅಂತಾರಾಷ್ಟ್ರೀಯ ಫಿಲ್ಮ್ ಫೆಸ್ಟಿವಲ್ 2024ರ ಆಯೋಜಕಿ ರಂಜಿತಾ ಸುಬ್ರಹ್ಮಣ್ಯ, ಸಿನಿ ಸಂತೆ ನಿರ್ದೇಶಕಿ ಮತ್ತು ಸಂಸ್ಥಾಪಕಿ ಸಂಧ್ಯಾ ರಾಣಿ, ಐಶ್ವರ್ಯ ಜಿ ಪ್ರಸಾದ್, ಹರ್ಷ, ರೂಪ ಇನ್ನಿತರರು ಹಾಜರಿದ್ದರು.

ನಿಧನ



ಮೊಹಸಿನಾ ಖುದ್ದೂಸ್ ಸೈಯದ್

ಮೈಸೂರಿನ ತಿಲಕ್‌ನಗರದ ಅನ್ನೆಗುಂಡಿ ರಸ್ತೆ ನಿವಾಸಿ ದಿ.ಜಿ.ಗೌಸ್ ಶರೀಫ್ ಅವರ ಪುತ್ರಿ ಮೊಹಸಿನಾ ಖುದ್ದೂಸ್ ಸೈಯದ್ ಶುಕ್ರವಾರ ಬೆಳಗ್ಗೆ ನಿಧನರಾದರು. ಮೃತರು ಓರ್ವ ಪುತ್ರ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಪ್ಪತ್ತೊಂದನೆ ಶತಮಾನದಲ್ಲಿ ಭಾಷೆ, ಸಮುದಾಯ, ತತ್ವಶಾಸ್ತ್ರದ ಸಾವು

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ವಿಷಾದ



ಮೈಸೂರಿನ ಕಿರುರಂಗಮಂದಿರದಲ್ಲಿ ಆಯೋಜಿಸಿರುವ 'ನಿರಂತರ ರಂಗ ಉತ್ಸವ'ಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ವಿದ್ಯುಕ್ತ ಚಾಲನೆ ನೀಡಿದರು.

ಮೈಸೂರು, ಡಿ.27(ಎಸ್‌ಬಿಡಿ)– ಇಪ್ಪತ್ತೊಂದನೇ ಶತಮಾನದಲ್ಲಿ ಭಾಷೆ, ಸಮುದಾಯ ಹಾಗೂ ತತ್ವಶಾಸ್ತ್ರದ ಸಾವಾಗುತ್ತಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ವಿಷಾದ ವ್ಯಕ್ತಪಡಿಸಿದರು. ಮೈಸೂರಿನ ನಿರಂತರ ಫೌಂಡೇಷನ್ ವತಿಯಿಂದ ಆಯೋಜಿಸಿರುವ 'ನಿರಂತರ ರಂಗ ಉತ್ಸವ'ಕ್ಕೆ ಕಿರುರಂಗ ಮಂದಿರದ ಆವರಣದಲ್ಲಿ ಚಾಲನೆ ನೀಡಿ ಮಾತನಾಡಿದ ಅವರು, ಇಪ್ಪತ್ತೊಂದನೇ ಶತಮಾನದ ಮೊದಲ ಎರಡು ದಶಕದಲ್ಲಿ ಮೂರು ಪ್ರಮುಖ ಬೆಳವಣಿಗೆಯನ್ನು ಕಾಣುತ್ತಿದ್ದೇವೆ. ಅವುಗಳನ್ನು ರಂಗಭೂಮಿ ತನ್ನ ಆಂತರ್ಯಕ್ಕೆ ತೆಗೆದುಕೊಂಡು ಜನರ ಬಳಿ ಹೋಗಬೇಕಾದ ಅವಶ್ಯಕತೆ ಇದೆ ಎಂದು ಹೇಳಿದರು.

ಪ್ರಸ್ತುತ ಭಾಷೆಗಳು ಸಾಯುತ್ತಿವೆ. ಕರ್ನಾಟಕದಲ್ಲಿ ಕನ್ನಡ ಹೊರತಾಗಿ 230 ಭಾಷೆಗಳಿವೆ. ಯಾವ ಭಾಷೆಯ ಅಂಕಿ–ಸಂಖ್ಯೆ ತೆಗೆದುಕೊಂಡರೂ ಕೂಡ ಕಳೆದ ಇಪ್ಪತ್ತು ವರ್ಷಗಳಲ್ಲಿ ಅವುಗಳು ಪತನವಾಗುತ್ತಿವೆ. ಅಖಿಲ ಭಾರತ ಮಟ್ಟದಲ್ಲಿ ಕನ್ನಡದ ಬೆಳವಣಿಗೆ ಕೇವಲ ಶೇ.3ರಷ್ಟಿದೆ. ಆದರೆ ಹಿಂದಿ ಶೇ.66ರ ವೇಗದಲ್ಲಿ ಬೆಳೆಯುತ್ತಿದೆ. ಹಾಗಾಗಿ ಕನ್ನಡ ಭಾಷೆಯನ್ನು ಹೊಸಕಿ ಹಾಕುವುದು ಹಿಂದಿಗೆ ಹೆಚ್ಚು ಕಷ್ಟವಲ್ಲ ಎಂದರು. ಮೊದಲ ಜನಗಣತಿಯಲ್ಲಿ ಕೊರವ ಭಾಷಿಗರ ಸಂಖ್ಯೆಯನ್ನು 55 ಸಾವಿರ ಎಂದು ದಾಖಲಿಸಲಾಗಿತ್ತು. ಆದರೆ 2011ರಲ್ಲಿ ಕೇವಲ 2 ಸಾವಿರ ಆಯಿತು. ಮುಂದಿನ 20–30 ವರ್ಷಗಳಲ್ಲಿ ಆ ಭಾಷೆ ಕಣ್ಮರೆಯಾಗುತ್ತದೆ. 2001ರಲ್ಲಿ 1.66 ಲಕ್ಷವಿದ್ದ ಕೊಡವ ಭಾಷಿಗರ ಸಂಖ್ಯೆ 2011ರ ಹೊತ್ತಿಗೆ 1.36 ಲಕ್ಷಕ್ಕೆ ಇಳಿಕೆಯಾಯಿತು. ಅನೇಕ ಭಾಷೆಗಳ ಅಂಕಿ–ಸಂಖ್ಯೆ ಇಲ್ಲ. ಆದರೆ ಅವು ಸಾಯುತ್ತಿರುವುದಂತೂ ಸ್ಪಷ್ಟ, ದೇಶದ 19 ಸಾವಿರ ತಾಯ್ನುಡಿಗಳು ಹೀಗೆ ಪತನಮುಖಿಯಾಗುತ್ತಿವೆ. ಮುಂದಿನ ನೂರು ವರ್ಷದಲ್ಲಿ ಜಗತ್ತಿನ ಶೇ.5ರಷ್ಟು ಜನರ ಭಾಷೆ ಶೇ.95ರಷ್ಟು ಜನರನ್ನು ಆಳುತ್ತದೆ ಎಂದು ಕಳವಳ ವ್ಯಕ್ತಪಡಿಸಿದರು.

ಭಾಷೆ ಜೊತೆಗೆ ಸಮುದಾಯಗಳೂ ಸಾಯುತ್ತಿವೆ. ಮೈಸೂರು ಸುತ್ತಮುತ್ತ ಸುಮಾರು 18 ಬುಡಕಟ್ಟು ಜನಾಂಗಗಳಿದ್ದವು. ಆದರೆ ಮುಂದಿನ 50 ವರ್ಷಗಳಲ್ಲಿ ಅವರೆಲ್ಲಾ ತಮ್ಮ ಪರಂಪರೆಯಿಂದ ಹೊರಬಂದು ಮುಖ್ಯವಾಹಿನಿ ಸೇರುತ್ತಾರೆ. ದೇಶಾದ್ಯಂತ ಹಲವು ಬುಡಕಟ್ಟುಗಳು ನಾಶವಾಗಿವೆ. ಮತ್ತೊಂದು ಪ್ರಮುಖ ವಿಚಾರವೆಂದರೆ ತತ್ವಶಾಸ್ತ್ರವೂ ಸಾಯುತ್ತಿದೆ. ವಾದಗಳೇ ಇಲ್ಲದಂತಾಗಿವೆ. ಭಾಷೆಯ ಮೂಲಕ ತಲುಪುವ ಎತ್ತರ ಕ್ಷೀಣಿಸಿದೆ. ಭಾಷೆಯ ಮೂಲಕ ಮಹತ್ವದ ಚರ್ಚೆಗಳೇ ನಡೆಯುತ್ತಿಲ್ಲ. ಪುಸ್ತಕ ಹಾಗೂ ಒಳ್ಳೆಯ ನಾಟಕದ ಬಗ್ಗೆ ವಿಮರ್ಶೆಗಳಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಭಾಷೆಗಳು, ಸಮುದಾಯಗಳು ಹಾಗೂ ತತ್ವಶಾಸ್ತ್ರದ ಸಾವಿಗೆ ನಾವು ಸಾಕ್ಷಿಯಾಗಿದ್ದೇವೆ. ಆದರೆ ಜಾತಿ, ಮತ, ಧರ್ಮದ ಎಲ್ಲೆ ಮೀರಿದ ರಂಗಭೂಮಿ ಇವುಗಳನ್ನು ಒಗ್ಗಿಸಿಕೊಂಡು ಎತ್ತರಕ್ಕೆ ಕೊಂಡೊಯ್ಯಬೇಕು. ಭಾಷೆಗಳು ಉಳಿಯಲು, ಸಣ್ಣ ಸಮುದಾಯಗಳು ಉಸಿರಾಡಲು, ತತ್ವಶಾಸ್ತ್ರ ಹೊಸ ಕಳೆಯೊಂದಿಗೆ ಪ್ರಜ್ವಲಿಸಲು ಸಮರ್ಥ ಮಾಧ್ಯಮವಾದ ರಂಗಭೂಮಿ ಕೆಲಸ ಮಾಡಬೇಕಿದೆ ಎಂಬುದು ಕಳಕಳಿಯ ಮನವಿ ಎಂದರು.

ಕಾರ್ಯಕ್ರಮದಲ್ಲಿ ದಿವಂಗತ ನಾ.ರತ್ನ ಅವರ ಪುತ್ರಿಯಾದ ಸಿಡಬ್ಲ್ಯೂಸಿ ಕಾರ್ಯದರ್ಶಿ ಕವಿತಾ ರತ್ನ, ನಿರಂತರದ ಪ್ರಸಾದ್ ಕುಂದೂರ್ ವೇದಿಕೆಯಲ್ಲಿದ್ದರು. ರಂಗಾಯಣದ ಮಾಜಿ ನಿರ್ದೇಶಕ ಜನಾರ್ಧನ್ ಜನ್ನಿ, ನಿರಂತರದ ಶ್ರೀನಿವಾಸ್ ಸುಗುಣ, ಪ್ರೊ.ಕಾಳಚನ್ನೇಗೌಡರು, ಹಿರಿಯ ರಂಗಕರ್ಮಿ ರಾಮೇಶ್ವರಿ ವರ್ಮ ಮತ್ತಿತರರು ಉಪಸ್ಥಿತರಿದ್ದರು. ಉದ್ಘಾಟನಾ ಸಮಾರಂಭದ ಬಳಿಕ ಶ್ರೀರಂಗಪಟ್ಟಣದ ನಿರ್ದಿಗಂತ ತಂಡ 'ತಿಂಡಿಗೆ ಬಂದ ತುಂಡೆರಾಯ' ಪ್ರದರ್ಶಿಸಿತು. ಡಿ.30ರವರೆಗೂ ರಂಗ ಉತ್ಸವ ನಡೆಯಲಿದೆ.

ಅಲೆಮಾರಿ, ಆದಿವಾಸಿಗಳ ಸಮಸ್ಯೆ ಪರಿಹಾರಕ್ಕೆ ಕ್ರಮ: ಡಿಸಿ ಭರವಸೆ



ಮೈಸೂರಿನ ಜಿಪಂ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ಅಧ್ಯಕ್ಷತೆಯಲ್ಲಿ ಕುಂದು–ಕೊರತೆ ಸಭೆ ನಡೆಯಿತು.

ಮೈಸೂರು, ಡಿ.27(ಆರ್‌ಕೆ)–ಅಲೆಮಾರಿ ಹಾಗೂ ಆದಿವಾಸಿ ಸಮುದಾಯಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಒಂದು ತಿಂಗಳೊಳಗಾಗಿ ಪರಿಹರಿಸಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಆದಿವಾಸಿ, ಹಿಂದುಳಿದ ವರ್ಗಗಳ ಮತ್ತು ಅಲೆಮಾರಿ ಸಮುದಾಯಗಳ ಕುಂದು–ಕೊರತೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಲೆಮಾರಿ ಹಾಗೂ ಆದಿವಾಸಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಿದ್ದು, ಆಯಾ ತಾಲೂಕು ತಹಶೀಲ್ದಾರ್‌ಗಳ ಮೂಲಕ ಪರಿಹರಿಸಲಾಗುವುದು ಎಂದರು.


ತಹಶೀಲ್ದಾರ್‌ಗಳು ಹಾಗೂ ತಾಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಆದಿವಾಸಿಗಳ ಬಳಿಗೆ ತೆರಳಿ ಸಮಸ್ಯೆಗಳನ್ನು ಆಲಿಸಿ ತ್ವರಿತ ಗತಿಯಲ್ಲಿ ಬಗೆಹರಿಸಬೇಕು ಎಂದ ಅವರು, ಕೈಗೊಂಡ ಕ್ರಮದ ಬಗ್ಗೆ ತಮಗೆ ಅನುಪಾಲನಾ ವರದಿ ಸಲ್ಲಿಸುವಂತೆಯೂ ಸೂಚನೆ ನೀಡಿದರು.

ಪರಿಶಿಷ್ಟ ಜಾತಿ, ಪಂಗಡ, ಆದಿವಾಸಿ ಮತ್ತು ಹಿಂದುಳಿದ ವರ್ಗಗಳ ಕೊರಜ, ಹಕ್ಕಿ–ಪಿಕ್ಕಿ, ಎಳವ, ದೊಂಬರು, ಕೊರಮ, ಜೇನು ಕುರುಬ, ಸೋಲಿಗ ಸೇರಿದಂತೆ ಇನ್ನಿತರ ಸಮುದಾಯದ ಜನರಿಗೆ ನಿವೇಶನ, ಕುಡಿಯುವ ನೀರು, ಚರಂಡಿ, ಸ್ಮಶಾನ, ವಿದ್ಯುತ್ ಸೇರಿದಂತೆ ಹಲವು ಸಮಸ್ಯೆಗಳ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು. ಪರಿಶಿಷ್ಟ ಜಾತಿ, ಪಂಗಡ, ಆದಿವಾಸಿ, ಅಲೆಮಾರಿಗಳ ಮಹಾಸಭಾ ಅಧ್ಯಕ್ಷ ಡಾ.ಸಿ.ಎಸ್.ದ್ವಾರಕಾನಾಥ, ಜಿಲ್ಲಾ ಪಂಚಾಯ್ತಿ ಉಪ ಕಾರ್ಯದರ್ಶಿ ಕೆ.ಎಂ. ಸವಿತಾ, ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ. ಬಸವರಾಜು, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ, ವಾರ್ತಾ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್, ತಹಶೀಲ್ದಾರ್‌ಗಳು, ಇಓಗಳು ಸಭೆಯಲ್ಲಿ ಹಾಜರಿದ್ದರು.

ಶಿವಾನುಭವ ದಾಸೋಹ ಉಪನ್ಯಾಸ

ಮೈಸೂರು,ಡಿ.27–ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಆಶ್ರಯದಲ್ಲಿ ಶಿವಾನುಭವ ದಾಸೋಹ ಮಾಲಿಕೆಯ 320ನೆಯ ಕಾರ್ಯಕ್ರಮವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಡಿ.28ರಂದು ಸಂಜೆ 6ಕ್ಕೆ ಮೈಸೂರು ಜೆಎಸ್‌ಎಸ್ ಆಸ್ಪತ್ರೆ ಆವರಣದ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಏರ್ಪಡಿಸಲಾಗಿದೆ. ವಿಜಯಪುರ ಜಿಲ್ಲೆ ತಾಳಿಕೋಟೆಯ ಶ್ರೀ ಖಾಸ್ಗತ ವಿರಕ್ತ ಮಠದ ನಿಯೋಜಿತ ಉತ್ತರಾಧಿಕಾರಿಗಳಾದ ಶ್ರೀ ಸಿದ್ದಲಿಂಗ ದೇವರು ಅವರು 'ನೆಮ್ಮದಿ ಹುಡುಕಾಟದಲ್ಲಿ ಜೀವನದ ಸ್ವಾರಸ್ಯ' ಕುರಿತು ಉಪನ್ಯಾಸ ನೀಡಲಿದ್ದಾರೆ. ಜೆಎಸ್‌ಎಸ್ ಮಹಾವಿದ್ಯಾ ಪೀಠದ ತೋಟಗಾರಿಕೆ ವಿಭಾಗದ ನಿರ್ದೇಶಕ ಎನ್.ಎಂ.ಶಿವಶಂಕರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಕು.ಎನ್.ಚೂಡಾಮಣಿ ವಚನ ಗಾಯನ ನಡೆಸಿಕೊಡಲಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.12.2024 ಶನಿವಾರ, ಮಳೆ ನಕ್ಷತ್ರ: ಮೂಲ, 16.12.2024 ರಿಂದ 28.12.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಧನುರ್ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಅನೂರಾಧ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಸುಪ್ರಭ ನಾಗೇಶ್‌ರಾವ್ ಸೇವಾ ಪ್ರತಿಷ್ಠಾನ :** 5ನೇ ವರ್ಷದ ಪ್ರಸ್ತುತಿ ವಿಶ್ವ ಶಾಂತಿಗಾಗಿ ವಿಷ್ಣು ಸಹಸ್ರನಾಮ ಪಾರಾಯಣ, ಸ್ಥಳ: #622, 2ನೇ ಮೇನ್, 2ನೇ ಕ್ರಾಸ್, ಶಾರದಾದೇವಿನಗರ, ಬೆಳಗ್ಗೆ 5 ರಿಂದ ರಾತ್ರಿ 10 ರವರೆಗೆ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ಕುಂಭಾಭಿಷೇಕ ಪೂಜಾ ಮಹೋತ್ಸವ, ಬೆಳಗ್ಗೆಯಿಂದ ಮಹತೋಬಾರ ಶ್ರೀ ಧರ್ಮ ಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ.

■ **ಮೈಸೂರು ಅರಮನೆ ಮಂಡಳಿ:** ಬೆಳಗ್ಗೆ 10 ರಿಂದ ಅರಮನೆ ಫಲಪುಷ್ಪ ಪ್ರದರ್ಶನ–2024, ಸಂಜೆ 7 ರಿಂದ ಅರಮನೆ ವಿದ್ಯುತ್ ದೀಪಾಲಂಕಾರ, ಸ್ಥಳ: ಮೈಸೂರು ಅರಮನೆ ಆವರಣ.

■ **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಶ್ರೀ ಕನಕದಾಸ ನೌಕರರ ಸಂಘ :** ಸಂತಶ್ರೇಷ್ಠ ಶ್ರೀ ಕನಕದಾಸರ 537ನೇ ಜಯಂತ್ಯೋತ್ಸವ, ಸಾನ್ನಿಧ್ಯ : ಕಾಗಿನೆಲೆ ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ, ಜ್ಯೋತಿ ಬೆಳಗಿಸುವವರು : ಶಾಸಕ ಹರೀಶ್‌ಗೌಡ, ಮುಖ್ಯ ಅತಿಥಿಗಳು : ಶಾಸಕರಾದ ಡಿ. ರವಿಶಂಕರ್, ಅನಿಲ್ ಚಿಕ್ಕಮಾದು, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ. ಸುಬ್ರಮಣ್ಯ, ಡಾ. ಪಿ.ಎಸ್. ಲೋಹಿತ್, ಕೆ.ಎಸ್. ಶಿವರಾಮು, ಎಂ. ಮಲ್ಲಯ್ಯ, ವಿಭಾಗೀಯ ನಿಯಂತ್ರಣಾಧಿಕಾರಿಗಳಾದ ಬಿ. ಶ್ರೀನಿವಾಸ್, ಹೆಚ್.ಟಿ. ವೀರೇಶ್, ಆಡಳಿತಾಧಿಕಾರಿ ಸಿ.ಟಿ. ಮಂಜುನಾಥ್, ಘಟಕದ ವ್ಯವಸ್ಥಾಪಕ ಕೆ. ಶ್ರೀನಿವಾಸ್, ಸಂಘದ ಗೌರವಾಧ್ಯಕ್ಷ ಕೆ.ಎನ್. ಕೃಷ್ಣೇಗೌಡ, ಸ್ಥಳ:ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪ, ಕುವೆಂಪುನಗರ, ಬೆಳಗ್ಗೆ 10ಕ್ಕೆ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಇಂಪ್ಲಿಕೇಷನ್ಸ್ ಆಫ್ ಐಪಿಆರ್ ಇನ್ ರಿಸರ್ಚ್ ಅಂಡ್ ಇನ್ನೋವೇಷನ್ ಕುರಿತು ರಾಷ್ಟ್ರ ಮಟ್ಟದ ಕಾರ್ಯಾಗಾರ, ಮುಖ್ಯ ಅತಿಥಿಗಳು : ಡಾ. ಎ. ಸೆಲ್ವರಸು, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಪಿ. ವಿಶ್ವನಾಥ್, ಶ್ರೀಶೈಲ ರಾಮಣ್ಣವರ್, ಕಾಲೇಜು ಅಧ್ಯಕ್ಷ ಟಿ. ನಾಗರಾಜು, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಹಾಲ್, ಬೆಳಗ್ಗೆ 10ಕ್ಕೆ.

■ **ಶರಣು ವಿಶ್ವವಚನ ಫೌಂಡೇಷನ್ :** ಶರಣು ದಿನಚರಿ, ಬಸವಭಾನು ಸಂಚಿಕೆ ಬಿಡುಗಡೆ ಮತ್ತು ವಿವಿಧ ಪ್ರಶಸ್ತಿಗಳ ಪ್ರದಾನ ಸಮಾರಂಭ, ಉಪಸ್ಥಿತರು : ವಿಶ್ರಾಂತ ನ್ಯಾಯಾಧೀಶ ಅರಳಿ ನಾಗರಾಜ ಗಂಗಾವತಿ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ : ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ಡಾ. ವಚನ ಕುಮಾರಸ್ವಾಮಿ, ಪ್ರಾಸ್ತಾವಿಕ ನುಡಿ : ಶರಣ ವಿಶ್ವವಚನ ಫೌಂಡೇಷನ್ ಸಂಸ್ಥಾಪಕರಾದ ಶ್ರೀಮತಿ ರೂಪ ಕುಮಾರಸ್ವಾಮಿ, ಸ್ಥಳ: ಕನ್ನಡ ಸಾಹಿತ್ಯ ಭವನ, ವಿಜಯನಗರ, ಬೆಳಗ್ಗೆ 10ಕ್ಕೆ.


■ **ಸಂಧ್ಯಾ ಸುರಕ್ಷಾ ಟ್ರಸ್ಟ್, ಅಟಲ್‌ಜಿ ಸಂಸ್ಕಾರ ಭಾರತ್ ಪ್ರತಿಷ್ಠಾನ, ಜಿಲ್ಲಾ ಬ್ರಾಹ್ಮಣ ಮಹಾಸಭಾ, ಶಾಕಂಬರಿ ಧಾರ್ಮಿಕ ಶ್ರದ್ಧಾ ಕೇಂದ್ರ :** ನೂತನ ದಿನದರ್ಶಿಕೆ ಬಿಡುಗಡೆ, ಸನ್ಮಾನ ಸಮಾರಂಭ, ಉಪಸ್ಥಿತರು : ನಿವೃತ್ತ ನ್ಯಾಯಾಧೀಶ ಎನ್. ಸಂತೋಷ್ ಹೆಗ್ಡೆ, ಸಚಿವರಾದ ಆರ್. ದಿನೇಶ್ ಗುಂಡೂರಾವ್, ಶಾಸಕ ಟಿ.ಎಸ್. ಶ್ರೀವತ್ಸ, ಏಷ್ಯಾನೆಟ್ ಸುವರ್ಣವಾಹಿನಿ ಮುಖ್ಯಸ್ಥ ರವಿ ಹೆಗಡೆ, ಉದ್ಯಮಿ ಮಹೇಶ್ ಶೆಣೈ, ರಘುನಾಥ, ಇಳೈ ಆಳ್ವಾರ್ ಸ್ವಾಮೀಜಿ, ಡಾ. ಕೆ. ರಘುರಾಂ ವಾಜಪೇಯಿ, ನವೀನ್ ಕುಮಾರ್, ಸ್ಥಳ: ಗಾನಭಾರತಿ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಶರಣ ಸಾಹಿತ್ಯ ಪರಿಷತ್ತು, ಯುವ ಘಟಕ :** ದಾರ್ಶನಿಕರ ಚಿಂತನಾ ರಸಪ್ರಶ್ನೆ ಸ್ಪರ್ಧೆ, ಉದ್ಘಾಟನೆ : ಪತ್ರಕರ್ತೆ ಶ್ರೀಮತಿ ರಶ್ಮಿ ಕೋಟಿ, ಬಹುಮಾನ ಮತ್ತು ಪ್ರಮಾಣ ಪತ್ರ ವಿತರಣೆ : ಜೆಎಸ್‌ಎಸ್ ಪಬ್ಲಿಕ್ ಶಾಲೆ ಪ್ರಾಂಶುಪಾಲರಾದ ಶ್ರೀಮತಿ ಕೆ. ಸ್ಮಿತಾ ಕುರುಪ್, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕದ ಅಧ್ಯಕ್ಷ ಮ.ಗು. ಸದಾನಂದಯ್ಯ, ರಸ ಪ್ರಶ್ನೆ ನಡೆಸಿಕೊಡುವವರು : ಶ್ರೀಮತಿ ಕೆ. ಪೂಜಾ, ಶ್ರೀಮತಿ ಜಿ. ಪುಷ್ಪ, ಸ್ಥಳ: ಜೆಎಸ್‌ಎಸ್ ಪಬ್ಲಿಕ್ ಶಾಲೆ ಸಭಾಂಗಣ, ಜೆ.ಪಿ.ನಗರ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಹನುಮಂತೋತ್ಸವ ಸಮಿತಿ :** ಹನುಮ ಜಯಂತಿ ಪ್ರಯುಕ್ತ ಮೈಸೂರು ಹನುಮ ಹಬ್ಬ, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ, ಬೆಳಗ್ಗೆ 11ಕ್ಕೆ.

■ **ಡಿಜಿಟಿಎಂ ಇಂಗ್ಲೀಷ್ ಮಾಧ್ಯಮ ಶಾಲೆ :** ಡಿಜಿಟಿಎಂ ನೃತ್ಯ ವೈಭವ, ಶಾಲಾ ವಾರ್ಷಿಕೋತ್ಸವ, ಅಧ್ಯಕ್ಷತೆ : ಶಾಲೆ ಅಧ್ಯಕ್ಷ ಎನ್. ನರೇಂದ್ರ ಬಾಬು, ಮುಖ್ಯ ಅತಿಥಿಗಳು : ನಿವೃತ್ತ ನ್ಯಾಯಾಧೀಶ ಎನ್. ಸಂತೋಷ್ ಹೆಗ್ಡೆ, ಉದ್ಘಾಟನೆ : ಎಸ್‌ಜಿಡಿಎಂ ಟ್ರಸ್ಟ್ ಕಾರ್ಯದರ್ಶಿ ಡಿ.ಟಿ. ಸುಬ್ರಮಣ್ಯ, ಸ್ಥಳ: ಶ್ರೀ ಶಾರದಾ ರಂಗ ಮಂಟಪ, ಶಾಲೆ ಆವರಣ, ಸಂಜೆ 4.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI ಶೋಧ–ಅನುಶೋಧ– ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು : CSIR, CFTRI, Mysuru, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಗೀತಾ. ವೈಪುಟ್ಟಿ, ವ್ಯಾಖ್ಯಾನ–ಪ್ರೊ. ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಜೀವನ ಜೋಪಾನ–ಹೆಚ್‌ಐವಿ–ಅಂದು ಇಂದು, ಪ್ರಾಯೋಜಕರು– ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಮಂಡಳಿ, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ : ಅಬ್ದುಲ್ ರಶೀದ್, 9.00 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಮೈಸೂರು. ಎಂ. ನಾಗರಾಜ್ ಮತ್ತು ಡಾ. ಮೈಸೂರು ಎಂ. ಮಂಜುನಾಥ್–ಯುಗಳ ವೈಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.35 ಆಯುಷ್‌ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋ ಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ–ಕುಕ್ಕರಹಳ್ಳಿ ಸರ್ಕಾರಿ ಪ್ರೌಢಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ಹಾಸ್ಯ ನಾಟಕ 'ಕುಟುಂಬಾಯಣ', ರಚನೆ–ವೈ.ವಿ. ಗುಂಡೂರಾವ್, ನಿರ್ಮಾಣ–ಉಮೇಶ್. ಎಸ್.ಎಸ್., 4.30 ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಸಂತ ಉಡುಪಿಯ ಪೇಜಾವರ ಮಠದ ಶ್ರೀವಿಶ್ವೇಶತೀರ್ಥ ಸ್ವಾಮೀಜಿಯವರೊಂದಿಗೆ ಡಾ. ಎಂ.ಎಸ್.ವಿಜಯಾಹರನ್ ಅವರು ನಡೆಸಿದ್ದ ಸಂವಾದ, 6.50 ಕೃಷಿರಂಗ : ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಮಗ್ರ ಕೃಷಿಯ ಪ್ರಾಮುಖ್ಯತೆ ಈ ಕುರಿತು ಸಂವಾದ. ಭಾಗವಹಿಸುತ್ತಾರೆ. ಗುಂಡ್ಲುಪೇಟೆ ತಾಲೂಕು ಹಂಗಳ ಹೋಬಳಿ ಗೋಪಾಲಪುರ ಗ್ರಾಮದ ಕೃಷಿಕ ದಂಪತಿ ಜಿ.ಜಿ. ಮಲ್ಲಿಕಾರ್ಜುನಪ್ಪ ಮತ್ತು ಸಿ.ಕೆ.ರಾಣಿ. ಪ್ರಸ್ತುತಿ:ಎನ್. ಕೇಶವಮೂರ್ತಿ, 8.00 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 9.30 ಯುವವಾಣಿ–ಮೈಸೂರಿನ ಹಳೆಕೆಸರೆಯ ಬೆಥಾನಿಯಾ ಸಹೋದರರ ಸಭೆಯ ಯೌವನಸ್ಥರ ಬಳಗದ ಸದಸ್ಯರಿಂದ ಹೊಸವರ್ಷದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ 'ಹೊಸ ವರ್ಷ–ಹೊಸ ವರ್ಷ', 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ ಉಸ್ತಾದ್ ಮೊಯಿನುದ್ದೀನ್ ಖಾನ್ ಮತ್ತು ಮೊಮಿನ್ ಖಾನ್–ಸಾರಂಗಿ ಜುಗಲ್ ಬಂದಿ

■ **ಕಲಾಸುರುಚಿ:** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ–860, ಕಥೆ ಹೇಳುವವರು: ವಾಗ್ದೇವಿ ಪುರಾಣಿಕ್, ಸಹ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗ, ಸಂತ ಫಿಲೋಮಿನಾ ಕಾಲೇಜು, ಮೈಸೂರು, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪು ನಗರ, ಸಂಜೆ 4.30 ರಿಂದ.

■ **ಇಸ್ಕಾನ್ ಮೈಸೂರು :** ಶ್ರೀ ಶ್ರೀಕೃಷ್ಣ ಬಲರಾಮ ರಥಯಾತ್ರೆ, ಸಂಜೆ 4.30ಕ್ಕೆ ಅರಮನೆ ಆಂಜನೇಯ ದೇವಾಲಯದ ಬಳಿ ಉದ್ಘಾಟನೆ, ಸಂಜೆ 5.30 ರಿಂದ ಅರಮನೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಇಸ್ಕಾನ್ ದೇವಾಲಯದವರೆಗೆ ರಥಯಾತ್ರೆ, ರಾತ್ರಿ 8.30ಕ್ಕೆ ಸಂಕೀರ್ತನೆಯೊಂದಿಗೆ ಆರತಿ, ಸ್ಥಳ: ಅರಮನೆ ಆಂಜನೇಯಸ್ವಾಮಿ ದೇವಸ್ಥಾನ.

■ **ಮಹಾಜನ ಪ್ರೌಢಶಾಲೆ :** ವಾರ್ಷಿಕೋತ್ಸವ ಸಮಾರಂಭ, ಮುಖ್ಯ ಅತಿಥಿಗಳು: ಶಾಸಕ ಕೆ.ಹರೀಶ್‌ಗೌಡ, ಬಿಇಓ ಎಸ್. ರೇವಣ್ಣ, ಎಸ್. ನಾರಾಯಣ್, ಅಧ್ಯಕ್ಷತೆ: ಮಹಾಜನ ಎಜುಕೇಷನ್ ಸೊಸೈಟಿ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಸ್ಥಳ: ಸುಬ್ಬಲಕ್ಷ್ಮಿ ಹಾಲ್, ಮಹಾಜನ ಪ್ರೌಢಶಾಲೆ, ಸಂಜೆ 5ಕ್ಕೆ.

■ **ಜೆಎಸ್‌ಎಸ್ ಪ್ರೌಢಶಾಲೆ :** ಶಾಲೆ ವಾರ್ಷಿಕೋತ್ಸವ, ಸಾನ್ನಿಧ್ಯ: ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಕಾರ್ಯದರ್ಶಿ ಪ್ರೊ. ಎಸ್.ಪಿ. ಮಂಜುನಾಥ್, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಗೌರವ ಅತಿಥಿಗಳು: ಶಾಲಾ ಶಿಕ್ಷಣ ವಿಭಾಗದ ವಿಭಾಗೀಯ ಕಾರ್ಯದರ್ಶಿ ಡಾ. ಪಾಂಡುರಂಗ, ಸ್ಥಳ:ಶಾಲೆ ಆವರಣ, ಸಿದ್ಧಾರ್ಥನಗರ, ಸಂಜೆ 5.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಆತ್ಮಬೋಧ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ :** ಶಿವಾನುಭವ ದಾಸೋಹ ಮಾಲಿಕೆಯ 320ನೆಯ ಕಾರ್ಯಕ್ರಮ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿಜಯಪುರ ಜಿಲ್ಲೆ ತಾಳಿಕೋಟೆಯ ಶ್ರೀ ಖಾಸ್ಗತ ವಿರಕ್ತಮಠದ ನಿಯೋಜಿತ ಉತ್ತರಾಧಿಕಾರಿಗಳಾದ ಶ್ರೀ ಸಿದ್ದಲಿಂಗ ದೇವರು ಅವರಿಂದ 'ನೆಮ್ಮದಿ ಹುಡುಕಾಟದಲ್ಲಿ ಜೀವನದ ಸ್ವಾರಸ್ಯ' ಕುರಿತು ಉಪನ್ಯಾಸ, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠದ ತೋಟಗಾರಿಕೆ ವಿಭಾಗದ ನಿರ್ದೇಶಕ ಎನ್.ಎಂ. ಶಿವಶಂಕರಪ್ಪ, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಆವರಣದ ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಸಂಜೆ 6ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ (ಬೆಂಗಳೂರು), ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ :** ಬೆಂಗಳೂರು ಮಹಾರಾಣಿ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೆ.ಎಸ್. ಶ್ರೀಧರನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಸನಾತನ ಸಭಾ, ಜಯನಗರ, ಸಂಜೆ 6.15ರಿಂದ.

■ **ಶ್ರೀ ಕೃಷ್ಣ ಟ್ರಸ್ಟ್, ಶ್ರೀ ಕೃಷ್ಣ ಮಿತ್ರ ಮಂಡಳಿ :** ಹಿರಿಯ ಸ್ವಾಮೀಜಿ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ ಆರಾಧನೆ ಪ್ರಯುಕ್ತ, ಜ್ಞಾನ ಯಜ್ಞ ಸಂಭ್ರಮ ಕಾರ್ಯಕ್ರಮದಡಿ ಪಲಿಮಾರು ಮಠದ ಸಂಸ್ಥಾನಾಧೀಶರಾದ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರಿಂದ ಮಹಾಭಾರತದಲ್ಲಿ ಭೀಷ್ಮ ಪರ್ವ ಕುರಿತು ಪ್ರವಚನ, ಸ್ಥಳ: ಶ್ರೀ ಕೃಷ್ಣಧಾಮ, ಸಾಹುಕಾರ್ ಚೆನ್ನಯ್ಯ ರಸ್ತೆ, ಸರಸ್ವತಿಪುರಂ, ಸಂಜೆ 6.30 ರಿಂದ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಮೈಸೂರು ಮಹಾರಾಣಿ ಕಲಾ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕಿ, ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ವಿದ್ವನ್ಮಣಿ, ದರ್ಶನ ವಾರಿಧಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಂಜೆ 6.30ಕ್ಕೆ.

■ **ನಿರಂತರ ಫೌಂಡೇಷನ್ :** ನಿರಂತರ ರಂಗ ಉತ್ಸವ, ಉಪಸ್ಥಿತರು : ಹಿರಿಯ ರಂಗಕರ್ಮಿ ಶ್ರೀಮತಿ ರಾಮೇಶ್ವರಿ ವರ್ಮ, ಸಂಜೆ 7ಕ್ಕೆ ಉಸ್ತಾದ್ ಫಯಾಜ್ ಖಾನ್ ಸಂಗೀತ ಸಂಜೆ, ಸುಳ್ಯ, ಸ್ಥಳ: ಕಿರುರಂಗ ಮಂದಿರ, ರಂಗಾಯಣ.

ಮೈಸೂರು-ಕುಶಾಲನಗರ ಹೆದ್ದಾರಿ ಕಾಮಗಾರಿಗೆ

ಅರಣ್ಯ ಇಲಾಖೆ ಕೂಡಲೇ ಎನ್‌ಓಸಿ ನೀಡಲು ಮಾಜಿ ಸಂಸದ ಪ್ರತಾಪಸಿಂಹ ಮನವಿ

ಮೈಸೂರು, ಡಿ.27(ಎಸ್‌ಬಿಡಿ)– ಮೈಸೂರು–ಕುಶಾಲನಗರ ಚತುಷ್ಪಥ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ನಿರಾಪೇಕ್ಷಣಾ ಪ್ರಮಾಣ ಪತ್ರ(ಎನ್‌ಓಸಿ) ನೀಡುವಂತೆ ಮಾಜಿ ಸಂಸದ ಪ್ರತಾಪ್ ಸಿಂಹ, ಅರಣ್ಯ ಇಲಾಖೆಗೆ ಮನವಿ ಮಾಡಿದ್ದಾರೆ.

ಬೆಂಗಳೂರಿನಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಬ್ರಿಜೇಶ್ ಕುಮಾರ್ ದೀಕ್ಷಿತ್ ಅವರನ್ನು ಗುರುವಾರ ಭೇಟಿ ಮಾಡಿದ ಪ್ರತಾಪ್ ಸಿಂಹ, ಮೈಸೂರು ಮತ್ತು ಕೊಡಗು ಜನರಿಗೆ ಅನುಕೂಲವಾಗುವ ಮೈಸೂರು–ಕುಶಾಲನಗರ ಹೆದ್ದಾರಿ ಕಾಮಗಾರಿಗೆ ಶೀಘ್ರ ಎನ್‌ಓಸಿ ನೀಡುವಂತೆ ಒತ್ತಾಯಿಸಿದ್ದು, ಈ ಬಗ್ಗೆ ಅವರು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ರಾಷ್ಟ್ರೀಯ ಹೆದ್ದಾರಿ–275 ರ ಮೈಸೂರು–ಕುಶಾಲನಗರ ಭಾಗದ 93 ಕಿ.ಮೀ. ಉದ್ದದ ರಸ್ತೆ ಕಾಮಗಾರಿಯ ಯೋಜನೆಯನ್ನು 4 ಪ್ಯಾಕೇಜ್‌ಗಳಾಗಿ ವಿಂಗಡಿಸಲಾಗಿದೆ. ಈ 4 ಪ್ಯಾಕೇಜ್‌ಗಳನ್ನು 2023ರಲ್ಲಿ ನಾನು ಸಂಸದನಾಗಿದ್ದ ಅವಧಿಯಲ್ಲಿ ರೂ.4126 ಕೋಟಿ ವೆಚ್ಚದಲ್ಲಿ ಮಂಜೂರು ಮಾಡಲಾಗಿತ್ತು. ಈ ನಾಲ್ಕು ಪ್ಯಾಕೇಜ್‌ಗಳಿಗೆ ಪ್ರಧಾನ ಮಂತ್ರಿಗಳು 2023ರ ಮಾರ್ಚ್ 12ರಂದು ಮಂಡ್ಯದಲ್ಲಿ ಶಿಲಾನ್ಯಾಸ ಮಾಡಿದ್ದರು.



ಮಾಜಿ ಸಂಸದ ಪ್ರತಾಪ್ ಸಿಂಹ ಬೆಂಗಳೂರಿನಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಗಳಾದ ಬ್ರಿಜೇಶ್ ಕುಮಾರ್ ದೀಕ್ಷಿತ್ ಅವರನ್ನು ಭೇಟಿ ಮಾಡಿ, ಮೈಸೂರು–ಕುಶಾಲನಗರ ಹೆದ್ದಾರಿ ಕಾಮಗಾರಿಗೆ ಅರಣ್ಯ ಇಲಾಖೆಯ ಎನ್‌ಓಸಿಗೆ ಮನವಿ ಮಾಡಿದರು.

ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಪ್ಯಾಕೇಜ್–2ರಲ್ಲಿ ಸುಮಾರು ಶೇ.84, ಪ್ಯಾಕೇಜ್–3ರಲ್ಲಿ ಶೇ.80, ಪ್ಯಾಕೇಜ್–4ರಲ್ಲಿ ಶೇ.70 ಮತ್ತು ಪ್ಯಾಕೇಜ್–5ರಲ್ಲಿ ಶೇ.84ರಷ್ಟು ಕಾಮಗಾರಿ ಕೈಗೊಳ್ಳುವಷ್ಟು ಭೂಮಿ ಲಭ್ಯವಿದೆ. ಆದರೆ ಕಾಮಗಾರಿ ಪ್ರಾರಂಭಿಸಲು ಅರಣ್ಯ ಇಲಾಖೆ ವತಿಯಿಂದ ನಿರಾಕ್ಷೇಪಣಾ ಪ್ರಮಾಣ ಪತ್ರದ(NOC) ಅಗತ್ಯವಿರುತ್ತದೆ.

ಇದಕ್ಕೆ ಸಂಬಂಧಿಸಿದಂತೆ ನಾನು ಬೆಂಗಳೂರಿನಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಾದ ಬ್ರಿಜೇಶ್ ಕುಮಾರ್ ದೀಕ್ಷಿತ್ ಅವರನ್ನು ಖುದ್ದು ಭೇಟಿ ಮಾಡಿ, ಮೈಸೂರು ಮತ್ತು ಕೊಡಗು ಜನರಿಗೆ ಅನುಕೂಲವಾಗುವ, ಮಂಗಳೂರಿನ ಬಂದರು ಸಂಪರ್ಕವನ್ನು ಸುಧಾರಿಸುವ ಮತ್ತು ಶಿರಾಡಿ ಘಾಟ್‌ನ ರಸ್ತೆ ಮುಚ್ಚುವ ಸಮಯದಲ್ಲಿ ಪರ್ಯಾಯ ಮಾರ್ಗ ಒದಗಿಸುವ ಮೈಸೂರು–ಕುಶಾಲನಗರ ನಡುವಿನ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯನ್ನು ಕೈಗೊಳ್ಳಲು ತುರ್ತಾಗಿ ಎನ್‌ಓಸಿ ನೀಡುವಂತೆ ಮನವಿ ಮಾಡಲಾಯಿತು. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಅವರು, ಕೂಡಲೇ ಅನುಮೋದನೆ ನೀಡುವ ಭರವಸೆ ನೀಡಿದ್ದಾರೆ ಎಂದು ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಹೆದ್ದಾರಿ ಕಾಮಗಾರಿಗೆ ಎನ್‌ಓಸಿ ನೀಡುವಂತೆ ಅರಣ್ಯ ಸಚಿವರಿಗೆ ಸಂಸದ ಯದುವೀರ್ ಮನವಿ

ಮೈಸೂರು: ಮೈಸೂರು–ಕುಶಾಲನಗರ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ಅರಣ್ಯ ಇಲಾಖೆ ಎನ್‌ಓಸಿ ನೀಡುವಂತೆ ಹಾಲಿ ಸಂಸದ ಯದುವೀರ್ ಅವರು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರಲ್ಲಿ ಮನವಿ ಮಾಡಿದ್ದಾರೆ. ದೂರವಾಣಿ ಮೂಲಕ ಸಚಿವರನ್ನು ಸಂಪರ್ಕಿಸಿ, ಈ ಯೋಜನೆಯಿಂದ ಮೈಸೂರು ಹಾಗೂ ಕೊಡಗು ಜಿಲ್ಲೆಗಳ ಸಂಪರ್ಕ ಸುಧಾರಣೆ ಜೊತೆಗೆ ಪ್ರಯಾಣದ ಸಮಯ ಕಡಿಮೆಯಾಗುತ್ತದೆ.



ಉಭಯ ಜಿಲ್ಲೆಗಳ ಆರ್ಥಿಕ ಅಭಿವೃದ್ಧಿ ಅವಕಾಶಗಳು ಹೆಚ್ಚಾಗುತ್ತವೆ. ಉತ್ತಮ ಸಂಪರ್ಕ ಮತ್ತು ಸಮೃದ್ಧ ಕರ್ನಾಟಕಕ್ಕಾಗಿ ನಾವು ಒಟ್ಟಾಗಿ ಕೆಲಸ ಮಾಡುತ್ತಿರುವುದರಿಂದ ನಿಮ್ಮ ಬದ್ಧತೆ ನಿಜವಾಗಿಯೂ ಪ್ರಶಂಸನೀಯ ಎಂದು ಮನವಿ ಮಾಡಿದ್ದಾಗಿ ಸಂಸದರು ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ.

ಕುವೆಂಪು ಜನ್ಮ ದಿನೋತ್ಸವ

ಮೈಸೂರು: ಮೈಸೂರಿನ ಜೆ.ಪಿ.ನಗರದಲ್ಲಿರುವ ವಿಶ್ವಮಾನವ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ರಾಷ್ಟ್ರಕವಿ ಕುವೆಂಪು ಅವರ 121ನೇ ಜಯಂತಿಯ ಅಂಗವಾಗಿ ಜೆ.ಪಿ.ನಗರದಲ್ಲಿರುವ ಸಂಘದ ಕಛೇರಿಯ ಅವರಣದಲ್ಲಿ ಡಿ. 29 ಸಂಜೆ 6 ಘಂಟೆಗೆ ಜನ್ಮದಿನೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿದೆ. ಕಾರ್ಯಕ್ರಮಕ್ಕೆ ನಿವೃತ್ತ ಪ್ರಾಧ್ಯಾಪಕ, ವಿಚಾರವಾದಿ ಕಾಳಚನ್ನೇಗೌಡ ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಲಿದ್ದಾರೆ.

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಅರೆಬೆತ್ತಲೆ ಮೈಗೆ ಚಾಟಿಯಿಂದ ಬಾರಿಸಿಕೊಂಡು ಡಿಎಂಕೆ ಸರ್ಕಾರದ ವಿರುದ್ಧ ಅಣ್ಣಾಮಲೈ ವಿನೂತನ ಪ್ರತಿಭಟನೆ



ಚೆನ್ನೈ, ಡಿ.27– ತಮಿಳುನಾಡು ಬಿಜೆಪಿ ಅಧ್ಯಕ್ಷ ಕೆ.ಅಣ್ಣಾಮಲೈ, ತಮ್ಮ ಮನೆ ಮುಂದೆ ತಮಗೆ ತಾವೇ ಚಾಟಿಯಿಂದ ಹೊಡೆದುಕೊಳ್ಳುವ ಮೂಲಕ ಹೆಣ್ಣು ಮಕ್ಕಳ ಲೈಂಗಿಕ ದೌರ್ಜನ್ಯ ವಿರುದ್ಧ ವಿನೂತನವಾಗಿ ಪ್ರತಿಭಟಿಸಿದರು.

ತಮಿಳುನಾಡಿನ ಅಣ್ಣಾ ಯೂನಿವರ್ಸಿಟಿಯಲ್ಲಿ ನಡೆದಿರುವ ಅತ್ಯಾಚಾರ ಪ್ರಕರಣ ಖಂಡಿಸಿ, ಡಿಎಂಕೆ ಸರ್ಕಾರದ ವಿರುದ್ಧ ಅಣ್ಣಾಮಲೈ ಈ ರೀತಿ ಆಕ್ರೋಶ ಹೊರಹಾಕಿದ್ದಾರೆ. ಚೆನ್ನೈನ ಅಣ್ಣಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳನ್ನು ರಕ್ಷಿಸುವಲ್ಲಿ ಡಿಎಂಕೆ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿ ಇಂದು ತಮ್ಮ ಪ್ರತಿಭಟನೆಯ ಸಂಕೇತವಾಗಿ ಹಲವು ಬಾರಿ ಚಾಟಿಯೇಟು ತಮಗೆ ತಾವೇ ಕೊಟ್ಟುಕೊಂಡಿದ್ದಾರೆ.

ಡಿಎಂಕೆ ಸರ್ಕಾರ ಮತ್ತು ಪೊಲೀಸರು ಸಂತ್ರಸ್ತೆಯ ಮಾಹಿತಿಯನ್ನು ಬಹಿರಂಗ ಪಡಿಸಿದ್ದಾರೆ ಹಾಗೂ ಆಕೆಯ ಘನತೆಗೆ ಧಕ್ಕೆ ತಂದಿದ್ದಾರೆ ಎಂದು ಅಣ್ಣಾಮಲೈ ಆರೋಪಿಸಿದ್ದಾರೆ. ಇದು ಆಡಳಿತದ ಅಸಮರ್ಥತೆಯನ್ನು ಪ್ರತಿಬಿಂಬಿಸುವ ನಾಚಿಕೇಗೇಡಿನ ಕೃತ್ಯ ಎಂದು ಕಿಡಿಕಾರಿದ್ದಾರೆ.

ತಮಿಳುನಾಡಿನಲ್ಲಿ ಡಿಎಂಕೆ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸುವವರೆಗೆ ನಾನು ಪಾದರಕ್ಷೆಗಳನ್ನು ಧರಿಸುವುದಿಲ್ಲ ಎಂದು ಅಣ್ಣಾಮಲೈ ನಿನ್ನೆ ಘೋಷಣೆ ಮಾಡಿದ್ದರು. ಅಣ್ಣಾ ಯೂನಿವರ್ಸಿಟಿಯಲ್ಲಿ ಸಿಸಿಟಿವಿ ಕ್ಯಾಮರಾಗಳ ಕೊರತೆ ಇದೆ. ಅಲ್ಲದೆ ಮಹಿಳೆಯರ ಸುರಕ್ಷತೆಗಾಗಿ ಉದ್ದೇಶಿಸಿರುವ ನಿರ್ಭಯಾ ನಿಧಿಯನ್ನು ರಾಜ್ಯವು ಎಷ್ಟರಮಟ್ಟಿಗೆ ಬಳಸಿದೆ ಎಂದು ಅವರು ತರಾಟೆಗೆ ತೆಗೆದುಕೊಂಡಿದ್ದರು.

ಪೆನ್ಸಿಲ್ ಲೆಡ್‌ನಲ್ಲಿ ಅರಳಿದ ಡಾ.ಮನಮೋಹನ್ ಸಿಂಗ್

ಕಲಾವಿದನ ಭಾವಪೂರ್ಣ ಶ್ರದ್ಧಾಂಜಲಿ

ಮೈಸೂರು, ಡಿ.27(ಬಿಎಲ್‌ಯು)– ಮೈಸೂರಿನ ಕಲಾವಿದರೊಬ್ಬರು ಪೆನ್ಸಿಲ್ ಲೆಡ್‌ಗೆ ಡಾ.ಮನಮೋಹನ್ ಸಿಂಗ್ ಅವರ ರೂಪ ನೀಡುವ ಮೂಲಕ ಆರ್ಥಿಕ ತಜ್ಞನಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದ್ದಾರೆ.



ಮೈಸೂರಿನ ಕಲಾವಿದ ನಂಜುಂಡಸ್ವಾಮಿ ಪೆನ್ಸಿಲ್ ಲೆಡ್‌ನಲ್ಲಿ ಡಾ.ಮನಮೋಹನ್ ಸಿಂಗ್ ಚಿತ್ರವನ್ನು ಅರಳಿಸುವ ಮೂಲಕ ಅವರ ನಿಧನಕ್ಕೆ ನಮನ ಸಲ್ಲಿಸಿದ್ದಾರೆ.

ಹೊಸ ವರ್ಷಾಚರಣೆ ಹಿನ್ನೆಲೆ

ಮೈಸೂರಿನ 425 ಹೋಟೆಲ್‌ಗಳ 10,500 ಕೊಠಡಿ ಭರ್ತಿ

ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ನಿಧನದ ಹಿನ್ನೆಲೆಯಲ್ಲಿ 7 ದಿನ ಶೋಕಾಚರಣೆಯಿಂದ ಹಿನ್ನಡೆ ಸಂಭವ

ಮೈಸೂರು, ಡಿ. 27(ಆರ್‌ಕೆ)– ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಡಿಸೆಂಬರ್ 30ರಿಂದ 2025ರ ಜನವರಿ 1ರವರೆಗೆ ಮೈಸೂರಿನ ಎಲ್ಲಾ ಹೋಟೆಲುಗಳಲ್ಲಿ ಕೊಠಡಿಗಳು ಬುಕ್ ಆಗಿವೆ ಎಂದು ಹೋಟೆಲು ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ ತಿಳಿಸಿದ್ದಾರೆ.

ಈ ನಡುವೆ ಮಾಜಿ ಪ್ರಧಾನಮಂತ್ರಿ ಡಾ. ಮನಮೋಹನ್‌ಸಿಂಗ್ ಅವರ ನಿಧನದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ದೇಶಾದ್ಯಂತ 7 ದಿನ ಶೋಕಾಚರಣೆ ಪ್ರಕಟಿಸಿರುವುದರಿಂದ ಸರ್ಕಾರಿ ಸಭೆ, ಸಮಾರಂಭ, ಶುಭ ಕಾರ್ಯಗಳು ನಡೆಯುದಂತೆ ಘೋಷಿಸಿರುವುದರಿಂದ 2025ರ ಹೊಸ ವರ್ಷ ಬರಮಾಡಿಕೊಳ್ಳುವ ಪಾರ್ಟಿಗಳ ಮೇಲೆ ಕರಿನೆರಳು ಬಿದ್ದಂತಾಗಿದೆ ಎಂದು ಅವರು ತಿಳಿಸಿದ್ದಾರೆ.

ಮೈಸೂರು ನಗರದಲ್ಲಿರುವ 425 ಹೋಟೆಲುಗಳಲ್ಲಿನ 10,500 ಕೊಠಡಿಗಳೂ ಡಿಸೆಂಬರ್ 30ರಿಂದ 2025ರ ಜನವರಿ 1ರವರೆಗೆ ಮುಂಗಡ ಹಣ ಪಾವತಿಸಿ ಬುಕ್ ಮಾಡಿರುವುದರಿಂದ ಗ್ರಾಹಕರಿಗೆ ರೂಂಗಳನ್ನು ಕೊಡಲೇಬೇಕಾಗಿದೆ. ಸರ್ಕಾರ ಹೊಸ ವರ್ಷಾಚರಣೆಗೆ ನಿರ್ಬಂಧ ವಿಧಿಸಬಾರದು ಎಂದ ಅವರು, ಈ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದು ಸ್ಪಷ್ಟ ಮಾಹಿತಿ ನೀಡುವಂತೆ ಕೋರುತ್ತೇನೆ ಎಂದು ಅವರು ತಿಳಿಸಿದ್ದಾರೆ.

ಕ್ರಿಸ್‌ಮಸ್ ಮತ್ತು ಹೊಸ ವರ್ಷಾಚರಣೆಗಾಗಿ ಈಗಾಗಲೇ ಸಾವಿರಾರು ಮಂದಿ ಪ್ರವಾಸಿಗರು ಮೈಸೂರಿಗೆ ಆಗಮಿಸಿದ್ದು, ಅವರಿಗೆ ಆತಿಥ್ಯ ನೀಡುವುದು ಹೋಟೆಲಿಗರಾದ ನಮ್ಮ ಜವಾಬ್ದಾರಿ. ಪ್ರವಾಸೋದ್ಯಮ ಅಭಿವೃದ್ಧಿ ದೃಷ್ಟಿಯಿಂದ ಸರ್ಕಾರ ಸ್ಪಷ್ಟ ಅಭಿಪ್ರಾಯ ತಿಳಿಸಬೇಕೆಂದು ನಾರಾಯಣಗೌಡರು ತಿಳಿಸಿದ್ದಾರೆ.

ತಾಯಿ... ನಮ್ಮತ್ತೆ ಬೇಗ ಸಾಯಲಿ...!

20 ರೂ. ನೋಟ್ ಮೇಲೆ ಬರೆದು ಹರಕೆ ಹೊತ್ತ ಸೊಸೆ!



ಕಲಬುರಗಿ: ತಾಯಿ, ನಮ್ಮ ಅತ್ತೆ ಬೇಗ ಸಾಯಬೇಕು ಎಂದು ನೋಟ್ ಮೇಲೆ ಬರೆದು ಹುಂಡಿಗೆ ಕಾಣಿಕೆ ಹಾಕಿರುವ ಘಟನೆ ಕಲಬುರಗಿ ಜಿಲ್ಲೆಯಲ್ಲಿ ನಡೆದಿದೆ.

ಕಲಬುರಗಿ ಜಿಲ್ಲೆಯ ಅಫಜಲಪುರದ ಸುಕ್ಷೇತ್ರ ಘತ್ತರ್ಗಿ ಭಾಗ್ಯವಂತಿ ದೇವಸ್ಥಾನದ ಹುಂಡಿಯಲ್ಲಿ ಈ ನೋಟ್ ಪತ್ತೆಯಾಗಿದ್ದು, ಕಳೆದ ಕೆಲ ತಿಂಗಳ ಹಿಂದೆ ದೇವಸ್ಥಾನಕ್ಕೆ ಭೇಟಿ ಕೊಟ್ಟ ಮಹಿಳೆ 20 ರೂ. ನೋಟ್ ಮೇಲೆ ಅತ್ತೆ ಸಾಯಲೆಂದು ಬರಹ ಬರೆದು ಭಾಗ್ಯವಂತಿ ದೇವಿಯ ಹುಂಡಿಗೆ ಹರಕೆ ಮಾಡಿದ್ದಾರೆ.

ಗುರುವಾರ (ಡಿ.26) ಭಾಗ್ಯವಂತಿ ದೇವಿಯ ಹುಂಡಿ ಎಣಿಕೆ ಮಾಡುವ ವೇಳೆ ಅತ್ತೆ ಸಾಯಲೆಂದು ಹರಕೆ ಹೊತ್ತು ಕಾಣಿಕೆ ಅರ್ಪಿಸಿರುವ ನೋಟ್ ಪತ್ತೆಯಾಗಿದೆ. ಸದ್ಯ ಈ ಲೆಟರ್ ಇದೀಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಪತ್ರ ಬರೆದ ಸೊಸೆ ಯಾರು ಅಂತಾ ಜನಸಾಮಾನ್ಯರು ಮಾತನಾಡುತ್ತಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಕಾನೂನು ಹೋರಾಟದ ಹಿನ್ನೆಲೆ

ಭದ್ರತೆ ಕೋರಿ ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾಗೆ ಸ್ನೇಹಮಯಿ ಕೃಷ್ಣ ಪತ್ರ

ಮೈಸೂರು, ಡಿ.27– ಮುಡಾ ಹಗರಣ ಸಂಬಂಧ ಸಿಎಂ ಸಿದ್ದರಾಮಯ್ಯ ವಿರುದ್ಧ ಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಿರುವ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ, ತಮಗೆ ಬೆದರಿಕೆ ಹಾಕಲಾಗುತ್ತಿದೆ. ಈ ಬಗ್ಗೆ ಪೊಲೀಸರಿಗೆ ದೂರು ನೀಡಿದರೂ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಇನ್ನು ತಮ್ಮ ಕುಟುಂಬಕ್ಕೆ ಭದ್ರತೆ ನೀಡಲು ನಿರಾಕರಿಸಿದ್ದಾರೆ. ಹೀಗಾಗಿ ಕೇಂದ್ರದಿಂದ ಭದ್ರತೆ ಒದಗಿಸುವಂತೆ ಕೋರಿ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾಗೆ ಪತ್ರ ಬರೆದಿದ್ದಾರೆ.



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಅಡಿಯಲ್ಲಿ 14 ನಿವೇಶನಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಶ್ರೀಮತಿ ಪಾರ್ವತಿ ಅವರಿಗೆ ರಾಜಕೀಯ ಪ್ರಭಾವ ಬಳಸಿ ಹಂಚಿಕೆ ಮಾಡಲಾಗಿದೆ ಎಂದು ದೂರು ಸಲ್ಲಿಸಿರುವುದಾಗಿ ಪತ್ರದಲ್ಲಿ ತಿಳಿಸಿದ್ದಾರೆ. ಮೊದಲಿಗೆ ಈ ಸಂಬಂಧ ಅಧಿಕಾರಿಗಳಿಗೆ ದೂರು ನೀಡಲು ಪ್ರಯತ್ನಿಸಿದರೂ ಅವರು ಕ್ರಮಕ್ಕೆ ಮುಂದಾಗಲಿಲ್ಲ. ಹೀಗಾಗಿ ನಾನು ನ್ಯಾಯಾಲಯದ ಮೊರೆ ಹೋಗಿ ಖಾಸಗಿ ದೂರು ಸಲ್ಲಿಸಿದೆ. ನನ್ನ ದೂರು ಮತ್ತು ಪೂರಕ ದಾಖಲೆಗಳನ್ನು ಪರಿಶೀಲಿಸಿದ ನಂತರ ನ್ಯಾಯಾಲಯವು ಲೋಕಾಯುಕ್ತ ಅಧಿಕಾರಿಗಳ ತನಿಖೆಗೆ ಸೂಚಿಸಿತು. ಇದರ ನಂತರ, ಪ್ರಕರಣ ಸಂಬಂಧ ಎಫ್‌ಐಆರ್ ದಾಖಲಿಸಲಾಗಿದೆ ಎಫ್‌ಐಆರ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆರೋಪಿ ನಂ 1 ಎಂದು ಹೆಸರಿಸಲಾಗಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಮುಡಾ ಹಗರಣವನ್ನು ಬಹಿರಂಗಪಡಿಸಿದ ಕಾರಣ ತಮ್ಮ ವಿರುದ್ಧ ಅನೇಕ ಸುಳ್ಳು ಎಫ್‌ಐಆರ್‌ಗಳನ್ನು ದಾಖಲಿಸಿ, ಜೈಲಿಗಟ್ಟಲು ಪ್ರಯತ್ನಿಸಲಾಗಿದೆ. ತಮ್ಮ ವಿರುದ್ಧ ನಂಜನಗೂಡು ಟೌನ್ ಪೊಲೀಸ್ ಠಾಣೆಯಲ್ಲಿ ಮೊದಲ ಎಫ್‌ಐಆರ್ ದಾಖಲಾಗಿದ್ದು, ನಂತರ ದೇವರಾಜ ಮತ್ತು ಕೃಷ್ಣರಾಜ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಈ ಮೂಲಕ ನನ್ನ ಮೇಲೆ ಒತ್ತಡ ಹೇರಲು ಪ್ರಯತ್ನಿಸುತ್ತಿದ್ದಾರೆ. ಅಲ್ಲದೆ ಪ್ರಕರಣವನ್ನು ಕೈಬಿಡಲು ಹಣದ ಆಮಿಷ ಒಡ್ಡುತ್ತಿದ್ದಾರೆ. ಆದರೆ ನಾನು ಹೋರಾಟವನ್ನು ಮುಂದುವರಿಸಲು ನಿರ್ಧರಿಸಿದ್ದೇನೆ. ಈಗ ಅವರು ನನ್ನ ಮತ್ತು ನನ್ನ ಕುಟುಂಬದ ವಿರುದ್ಧ ಬೆದರಿಕೆ ಹಾಕುತ್ತಿದ್ದಾರೆ ಎಂದು ಕೃಷ್ಣ ಆರೋಪಿಸಿದ್ದಾರೆ. 2024ರ ಆಗಸ್ಟ್ 18ರಂದು ಮೈಸೂರಿನ ಪೊಲೀಸ್ ಕಮಿಷನರ್‌ಗೆ ಗನ್‌ಮ್ಯಾನ್‌ಗಾಗಿ ಮನವಿ ಸಲ್ಲಿಸಿದ್ದೆ. ಆದರೆ ಅದನ್ನು ತಿರಸ್ಕರಿಸಲಾಗಿದೆ ಎಂದರು.

ನಾನು ಮುಖ್ಯಮಂತ್ರಿ ಮತ್ತು ಇತರ ಪ್ರಭಾವಿ ವ್ಯಕ್ತಿಗಳ ವಿರುದ್ಧ ಹೋರಾಡುತ್ತಿರುವುದರಿಂದ ರಾಜ್ಯ ಸರ್ಕಾರ ನನಗೆ ಭದ್ರತೆ ನೀಡಲು ನಿರಾಕರಿಸುತ್ತಿದೆ. ಇದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ರಭಾವದಿಂದ ಸರ್ಕಾರಿ ಅಧಿಕಾರಿಗಳು ನನ್ನ ಪ್ರಯತ್ನಕ್ಕೆ ಅಡ್ಡಿಪಡಿಸಲು ಪ್ರಯತ್ನಿಸುತ್ತಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ಕಾಣುತ್ತಿದೆ. ರಾಜ್ಯ ಸರ್ಕಾರದ ಭದ್ರತೆಯನ್ನು ತೆಗೆದುಕೊಂಡರೆ ನನಗೆ ಮತ್ತು ನನ್ನ ಕುಟುಂಬಕ್ಕೆ ಹೆಚ್ಚು ಅಪಾಯಕಾರಿ ಎಂದು ತೋರುತ್ತದೆ. ಆದ್ದರಿಂದ, ನನ್ನ ಜೀವವನ್ನು ರಕ್ಷಿಸಲು, ನನ್ನ ಕುಟುಂಬದ ಯೋಗಕ್ಷೇಮವನ್ನು ಖಚಿತಪಡಿಸಿಕೊಳ್ಳಲು ಕೇಂದ್ರ ಸರ್ಕಾರವು ಭದ್ರತೆಯನ್ನು ಒದಗಿಸಬೇಕೆಂದು ನಾನು ವಿನಮ್ರತೆಯಿಂದ ವಿನಂತಿಸುತ್ತೇನೆ ಎಂದು ಕೃಷ್ಣ ಹೇಳಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಏನ್ರೀ ಪ್ರತಿ ದಿನಾ ನಿದ್ದೆಯಲ್ಲಿ ಒದೀತೀರಾ...?
ಗುಂಡ : ನಾನು ನಿದ್ದೆ ಮಾಡ್ತಿದ್ದೆ ಅಂತ ಯಾರು ಹೇಳಿದ್ದು...?

ಮೈಸೂರು ಮಿತ್ರ
ಶನಿವಾರ, 28 ಡಿಸೆಂಬರ್ 2024
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಇಡೀ ವಿಶ್ವವೇ ನಿನ್ನ ವಿರುದ್ಧ ನಿಂತರೂ ನೀನೊಬ್ಬನೇ ನಿಲ್ಲುವ ಧೈರ್ಯ ನಿನಗಿರಲಿ. – ಶ್ರೀ ಕೃಷ್ಣ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಒಕ್ಕಣ್ಣ ತನಗೆ ಹತ್ತು ಕಣ್ಣು ಅಂತಿದ್ನಂತೆ.

ನಿಮ್ಮ ಪತ್ರಗಳು

ಚಿರಮೌನಕ್ಕೆ ಜಾರಿದ ಮನಮೋಹನ

ಮಾನ್ಯರೆ,

ಜಾಗತೀಕರಣಕ್ಕೆ ದೇಶವನ್ನೇ ಸಜ್ಜುಗೊಳಿಸಿ ಭಾರತೀಯ ಅರ್ಥ ವ್ಯವಸ್ಥೆಯ



ದಿಕ್ಕನ್ನೇ ಬದಲಿಸಿದ ಧೀಮಂತ ನಾಯಕ, ಸರಳ ಸಜ್ಜನಿಕೆಯ ಸಾಕರಮೂರ್ತಿ, ಅತಿ ವಿಶಿಷ್ಟರಲ್ಲಿ ವಿಶಿಷ್ಟ ವ್ಯಕ್ತಿತ್ವವುಳ್ಳವರಾಗಿದ್ದ ಮಾಜಿ ಪ್ರಧಾನ ಮಂತ್ರಿಗಳಾಗಿದ್ದ ಡಾ.ಮನಮೋಹನ ಸಿಂಗ್ ಅವರನ್ನು ಭಾರತ ಕಳೆದುಕೊಂಡು ದೇಶವೇ ಶೋಕಸಾಗರದಲ್ಲಿ ಮುಳುಗಿದೆ.

ಡಾ.ಮನಮೋಹನ ಸಿಂಗ್ ಅವರು ತಂದ ಆಧಾರ್ ಕಾರ್ಡ್, ಪೋಲಿಯೋ ನಿರ್ಮೂಲನೆ, ಮಾಹಿತಿ ಹಕ್ಕು ಕಾಯಿದೆ, ಚಂದ್ರಯಾನ – ಮಂಗಳಯಾನ ಯೋಜನೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಳು ಮುಖ್ಯವಾದವುಗಳು. 1991ರಲ್ಲಿ ದೇಶದ ಅರ್ಥ ವ್ಯವಸ್ಥೆ ಹದಗೆಟ್ಟಿದ್ದಾಗ ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ಪಿ.ವಿ.ನರಸಿಂಹರಾವ್ ಅವರು ಮನಮೋಹನ ಸಿಂಗ್ ಅವರನ್ನು ಕೇಂದ್ರದ ಹಣಕಾಸು ಸಚಿವರನ್ನಾಗಿ ಆಹ್ವಾನಿಸಿದಾಗ ಸಿಂಗ್ ಅವರು ನಾನು ಎಲ್ಲ ಬಗೆಯ ಉನ್ನತ ಸ್ಥಾನ ಮತ್ತು ಆಡಳಿತಾತ್ಮಕ ಹುದ್ದೆಗಳನ್ನು ನಿಭಯಿಸಿದ್ದೇನೆ, ಈಗ ರಾಜಕೀಯ ರಂಗದಲ್ಲೂ ಯಶಸ್ಸು ಸಾಧಿಸಲು ಅವಕಾಶ ಇದೆ ಎಂದು ಅನಿಸುತ್ತಿದೆ. ಒಂದು ವೇಳೆ ಯಶಸ್ಸು ಸಾಧಿಸಿದರೆ ಭಾರತದ ಇತಿಹಾಸದಲ್ಲಿ ನನ್ನದಿಷ್ಟು ಕಿರು ಕಾಣಿಕೆ ಸೇರಿಕೊಳ್ಳುತ್ತದೆ ವಿಫಲನಾದರೆ ಅದರಿಂದ ಭಾರೀ ನಷ್ಟವೇನೂ ಆಗುವುದಿಲ್ಲ ಎಂದು ಮನಮೋಹನ್ ಸಿಂಗ್ ಹೇಳಿರುವುದು ಗಮನಾರ್ಹ. ಜಾಗತೀಕರಣ, ಉದಾರೀಕರಣ ನೀತಿಯಿಂದ ಸಾಮಾನ್ಯ ವರ್ಗದ ಜನರಿಗೆ ಟಿವಿ, ಬೈಕು, ಸ್ಕೂಟರ್, ಕಾರು, ಕಂಪ್ಯೂಟರ್ ಮತ್ತಿತರ ವಸ್ತುಗಳು ಕೈಗೆಟಕುವ ದರದಲ್ಲಿ ದೊರಕ್ಕುತ್ತಿವೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅಭೂತಪೂರ್ವ ಬದಲಾವಣೆಯಾಗಲು ಡಾ.ಮನಮೋಹನ ಸಿಂಗ್ ಅವರ ಮುಂದಾಲೋಚನೆಯ ಆರ್ಥಿಕ ನೀತಿಗಳೇ ಕಾರಣ ಎಂದರೆ ತಪ್ಪಾಗಲಾರದು. ಅವಾಗಿಯೇ ಒಲಿದು ಬಂದ ನಾನಾ ಕ್ಷೇತ್ರದ ಜವಾಬ್ದಾರಿ ಸ್ಥಾನಗಳನ್ನು ಕಿಂಚಿತ್ತೂ ಚ್ಯುತಿ ಬಾರದಂತೆ ನಿರ್ವಹಿಸಿ ನಮ್ಮನ್ನು ಅಗಲಿದ ಅದ್ಭುತ ವ್ಯಕ್ತಿ ಡಾ. ಮನಮೋಹನ್ ಸಿಂಗ್ ಅವರಿಗೆ ನನ್ನದೊಂದು ಸಲಾಮ್ ಹೋಗಿ ಬನ್ನಿ ಸರ್.

– ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ರಸ್ತೆ ದುರಸ್ತಿ ಮಾಡಿಸಿ, ಅಪಾಯ ತಪ್ಪಿಸಿ

ಮಾನ್ಯರೆ,

ಮೈಸೂರಿನ ಕುವೆಂಪುನಗರದ ಮುಖ್ಯ ರಸ್ತೆಯಾದ ನೃಪತುಂಗ ರಸ್ತೆ, ಕುವೆಂಪು ನಗರದ ಕಾಂಪ್ಲೆಕ್ಸ್ ನಿಂದ, ಕೆ.ಎಸ್.ಆರ್.ಟಿ.ಸಿ ಡಿಪೋವರೆಗಿನ ಸುಮಾರು ಎರಡು ಫರ್ಲಾಂಗ್ ನಡುವಿನ ರಸ್ತೆಯಲ್ಲಿ, ಸುಮಾರು ಹತ್ತಾರು ಕಡೆಗಳಲ್ಲಿ ರಸ್ತೆ ಗುಂಡಿಗಳಿವೆ.

ರಾತ್ರಿ ವೇಳೆ ಸಂಚರಿಸುವ ಹಲವಾರು ವಾಹನ ಸವಾರರು ಈ ಗುಂಡಿಗಳನ್ನು ತಪ್ಪಿಸಲು ಹೋಗಿ ಅಪಘಾತಗಳು ಸಂಭವಿಸುತ್ತಲೇ ಇವೆ, ಕುವೆಂಪು ನಗರದ ಮುಖ್ಯ ವಾಣಿಜ್ಯ ರಸ್ತೆಯು ಆದ ಈ ರಸ್ತೆಯಲ್ಲಿ ಎಡೆಬಿಡದ ವಾಹನ ಸಂಚಾರವಿದೆ, ವಾಹನ ಸವಾರರು ಸರ್ಕಸ್ ಮಾಡಿ ವಾಹನ ಸಂಚಾರ ಮಾಡಬೇಕಾಗಿದೆ, ಮುಖ್ಯ ರಸ್ತೆಯ ಸ್ಥಿತಿಯೇ ಈ ರೀತಿಯಾದರೇ, ಇನ್ನು ಬೇರೆ ರಸ್ತೆಗಳ ಸ್ಥಿತಿ ಹೇಗೆ? ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಮಾಡಿದರೂ ಅವರು ಕ್ಯಾರೆ ಎನ್ನುವುದಿಲ್ಲ, ನಗರ ಪಾಲಿಕೆಯ ಹಲವು ಅಧಿಕಾರಿಗಳು ಸಹ ಇದೇ ರಸ್ತೆಯಲ್ಲಿ ಪ್ರತಿ ದಿನ ಓಡಾಡುತ್ತಿದ್ದರೂ ಅವರ ಕಣ್ಣಿಗೆ ಈ ರಸ್ತೆ ಗುಂಡಿಗಳು ಕಾಣಿಸುವುದಿಲ್ಲವೇ, ಅಥವಾ ಅವರು ಜಾಣ ಕುರುಡರಂತೆ ವರ್ತಿಸುವುದು ಏಕೆ,?

ಸದ್ಯಕ್ಕೆ, ಈ ರಸ್ತೆ ಗುಂಡಿಗಳನ್ನು ಮುಚ್ಚಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಿ, ರಸ್ತೆ ಅಪಘಾತಗಳನ್ನು ತಪ್ಪಿಸಿ.

– ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ನಂದಿನಿಯ ನಾಗಾಲೋಟ !

ಮಾನ್ಯರೆ,

ರಾಜ್ಯದ ಪ್ರತಿಷ್ಠಿತ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾ ಮಂಡಲವು



(ಕೆಎಂಎಫ್) ಕಡೆಗೂ ಪ್ರೋಟೀನ್ ಭರಿತವಾದ ಇಡ್ಲಿ ಮತ್ತು ದೋಸೆ ಹಿಟ್ಟುಗಳನ್ನು, ಸ್ವತಃ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹಸ್ತದಿಂದಲೇ ಮಾರುಕಟ್ಟೆಗೆ ಬಿಡುಗಡೆ ಮಾಡಿಸಿರುವುದು ಸಂತೋಷದಾಯಕ ಸಂಗತಿ. ಇದರ ಬಗ್ಗೆ ಈ ಹಿಂದೆ ಮೂಡಿದ್ದ ಕೆಲವು ಗೊಂದಲಗಳಿಗೆ ಈಗ ತೆರೆ ಬಿದ್ದಿದೆ. ಈಗ ಪ್ರಾಯೋಗಿಕವಾಗಿ ಬೆಂಗಳೂರಿನಲ್ಲಿ ಮಾರಾಟವಾಗಲಿರುವ ಈ ಉತ್ಪನ್ನಗಳು ಮುಂದೆ ರಾಜ್ಯದ ಎಲ್ಲೆಡೆ ಮಾರಾಟಕ್ಕೆ ಲಭ್ಯವಾಗಲಿವೆ ಎಂಬ ಮಾಹಿತಿ ಲಭ್ಯವಾಗಿದೆ. ರಾಜ್ಯ ಸರ್ಕಾರಿ ಅಂಗ ಸಂಸ್ಥೆಯಾದ ಕೆಎಂಎಫ್ ಇತ್ತೀಚಿನ ವರ್ಷಗಳಲ್ಲಿ ವೈವಿಧ್ಯಮಯ ಉತ್ಪನ್ನಗಳ ತಯಾರಿಕೆ ಹಾಗೂ ಮಾರಾಟಕ್ಕೆ ಹೆಚ್ಚು ಒತ್ತು ನೀಡುತ್ತಿರುವುದು ಗಮನಾರ್ಹ ಅಂಶವಾಗಿದೆ. ಹೊರ ರಾಜ್ಯ ಹಾಗೂ ಹೊರದೇಶಗಳಲ್ಲಿ ಕೂಡ ತನ್ನ ಮಾರುಕಟ್ಟೆ ವಿಸ್ತರಣೆಗೆ ಯೋಜನೆಗಳನ್ನು ರೂಪಿಸುತ್ತಿರುವುದು ಕೂಡ ಮೆಚ್ಚತಕ್ಕ ಅಂಶ. ನಂದಿನಿಯ ನಾಗಾಲೋಟ ಇದೇ ರೀತಿ ಮುಂದುವರೆಯಲೆಂದು ಆಶಿಸೋಣ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ನೀರು ಪೋಲಾಗುತ್ತಿರುವುದನ್ನು ತಪ್ಪಿಸಿ

ಮಾನ್ಯರೆ,

ಮೈಸೂರು ನಗರದ ಹೃದಯ ಭಾಗದಲ್ಲಿರುವ ಅಗ್ರಹಾರ, ಉತ್ತರಾಧಿ ಮಠದ ಮುಖ್ಯ ರಸ್ತೆಯಲ್ಲಿ ಒಳ ಚರಂಡಿ ಕಾಮಗಾರಿ ವೇಳೆ ನೀರಿನ ಪೈಪ್ ಒಡೆದು ಹೋಗಿ ನೀರು ಜಲಪಾತದಂತೆ ಹರಿದು ಹೋಗುತ್ತಿದೆ. ಸಂಬಂಧಪಟ್ಟವರು ಇತ್ತ ಗಮನ ಹರಿಸುತ್ತಿಲ್ಲ. ಒಂದು ಹನಿ ನೀರು ಪೋಲು ಮಾಡಬೇಡಿ ಎಂದು ಸಂದೇಶ ಕೊಡುವ ಸಂಸ್ಥೆಗಳು, ತಮ್ಮ ಬೇಜವಾಬ್ದಾರಿಯಿಂದ ಈ ರೀತಿ ಅಪಾರ ಪ್ರಮಾಣದ ನೀರು ವ್ಯರ್ಥವಾಗಿ ಒಳ ಚರಂಡಿಗೆ ಹೋಗುತ್ತಿರು ವುದನ್ನು ಗಮನಿಸಿ ರಿಪೇರಿ ಮಾಡದಿರುವುದು ಶೋಚನೀಯ ಸಂಗತಿ.

ಈ ರಸ್ತೆ ಮುಖ್ಯ ರಸ್ತೆ ಜೆಎಸ್ಎಸ್ ಆಸ್ಪತ್ರೆಗೆ ಸಂಪರ್ಕ ಕಲ್ಪಿಸುತ್ತದೆ. ಸಾರ್ವಜನಿಕರಿಗೆ ಬಹಳ ತೊಂದರೆ ಆಗಿರುವುದೇ ಅಲ್ಲದೇ ಇಲ್ಲಿ ವಾಸಿಸುತ್ತಿರುವ ಜನರಿಗೂ ಅನಾನುಕೂಲವಾಗಿದೆ. ನಗರದ ಹೃದಯ ಭಾಗದ ಹಾಗೂ ಜನಸಂದಣಿ ಇರುವ ರಸ್ತೆಗಳ ಸ್ಥಿತಿಯೇ ಹೀಗಾದರೆ ಗತಿ ಏನು. ಸಂಬಂಧಪಟ್ಟ ಅಧಿಕಾರಿಗಳು ಇತ್ತ ಕಡೆ ಗಮನಹರಿಸಿ ನೀರಿನ ಪೈಪ್ ಸರಿಪಡಿಸಿ ನೀರು ಪೋಲು ತಪ್ಪಿಸಬೇಕೆಂದು ಈ ಮೂಲಕ ಮನವಿ. **–ಪುಷ್ಪಲತಾ ಫಣಿರಾಜ್, ಅಗ್ರಹಾರ ಮೈಸೂರು.**



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ವಿವೇಕವಿದ್ದರೆ ಸಾಲದು ವಿವೇಚನೆಯೂ ಇರಬೇಕಲ್ಲವೆ...

ಇಂದು ಆಧುನಿಕ ತಂತ್ರಜ್ಞಾನದಿಂದಾಗಿ ನಮಗೆ ಹೇರಳವಾದ ಮಾಹಿತಿ ಲಭ್ಯವಾಗುತ್ತಿವೆ. ಅವುಗಳಲ್ಲಿ ಎಲ್ಲವೂ ನಮಗೆ ಉಪಯೋಗಕ್ಕೆ ಬರುತ್ತದೆ ಎಂದೇನಿಲ್ಲ. ಆದರೂ ಒಂದಷ್ಟು ವಿಷಯಗಳು ನಮಗೆ ಉಪಯುಕ್ತವಾಗಿರುತ್ತವೆ. ಯಾವುದು ಉಪಯುಕ್ತ, ಯಾವುದು ಅಲ್ಲ ಎಂಬುದು ನಮ್ಮ ವಿವೇಚನೆಗೆ ಬಿಟ್ಟ ವಿಚಾರ. ನಮ್ಮ ಜೀವನ ಸುಗಮವಾಗರಬೇಕು ಎಂದಾದಾಗ ನಮಗೆ ವಿವೇಕ ಇರಬೇಕಾಗುತ್ತದೆ. ಯಾವುದು ಸರಿ, ಯಾವುದು ತಪ್ಪು, ಯಾವುದನ್ನು ಮಾಡುವುದರಿಂದ ತೊಂದರೆಯಾಗುತ್ತದೆ, ಯಾವುದು ಜೀವನದ ಸುಗಮ ನಿರ್ವಹಣೆಗೆ ಸೂಕ್ತವಾದುದು ಎಂಬುದು ಒಬ್ಬೊಬ್ಬರ ವಿಷಯದಲ್ಲೂ ಭಿನ್ನವಾಗಿರುತ್ತದೆ.

ನಮಗೆ ವಿವೇಕವಿದೆ ಎಂದರೆ ನಮ್ಮ ಜೀವನ ಸುಗಮವಾಗಿ ನಡೆಯುತ್ತದೆ ಎಂದು ಹೇಳಲು ಬರುವುದಿಲ್ಲ. ಬದಲಾಗಿ ಅದನ್ನು ಹೇಗೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂಬ ವಿವೇಚನೆಯೂ ಇರಬೇಕಾಗುತ್ತದೆ. ಬೆಂಕಿ ಸುಡುತ್ತದೆ ಎಂಬ ಜ್ಞಾನ ವಿವೇಕವಾದರೆ, ಅದು ನಿಜವಾಗಿಯೂ ಸುಡುತ್ತದೆಯೇ? ಎಂದು ಪರೀಕ್ಷಿಸಲು ಅದನ್ನು ಮುಟ್ಟಿ ನೋಡುವುದು ವಿವೇಚನೆಯಾಗುವುದಿಲ್ಲ. ಹಾಗಾಗಿ ವಿವೇಕದ ಜೊತೆಗೆ ವಿವೇಚನೆ ಇದ್ದಾಗ ಜೀವನದ ಹಾದಿ ಸುಲಭವಾಗುತ್ತದೆ.

ಇಂದು ಆಹಾರದ ವಿಷಯದಲ್ಲಿ ನಮಗೆ ಹಲವು ಮಾಹಿತಿಗಳು ತಂತ್ರಜ್ಞಾನದಿಂದ ಲಭ್ಯವಾಗುತ್ತಿದೆ. ವಾಟ್ಸಾಪ್‌ಗಳಲ್ಲಿ ಆರೋಗ್ಯದ ಮಾಹಿತಿ ನೀಡುವ ಗುಂಪುಗಳೇ ಇದೆ. ಅದನ್ನು ನಾವು ಸ್ವಾಭಾವಿಕವಾಗಿ ನೋಡಿ ಅಸಡ್ಡೆ ಮಾಡುತ್ತೇವೆ. ನಮ್ಮ ಜೀವನ ಸುಗಮವಾಗಲಿ ಎಂದು ಯಾರೋ ಶ್ರಮವಹಿಸಿ ಮಾಹಿತಿ ನೀಡಿರುತ್ತಾರೆ. ಆದರೆ ಅದನ್ನು ನಾವು ಗಂಭೀರವಾಗಿ ತೆಗೆದುಕೊಳ್ಳುವುದೇ ಇಲ್ಲ. ಇಂತಹದ್ದನ್ನು ಗಮನಕ್ಕೆ ತೆಗೆದುಕೊಳ್ಳುವುದು ವಿವೇಚನೆಯಾಗುತ್ತದೆ.

ಇತೀಚೆಗೆ ನಮಗೆ ಹಲವು ಹೊಸ ಖಾಯಿಲೆಗಳು ಬರುತ್ತಿವೆ. ಕೊರೊನಾದಂತಹ ಭೀಕರ ಖಾಯಿಲೆ ತನ್ನ ದರ್ಪವನ್ನು ತೋರಿ ಹಲವು ಜೀವಗಳನ್ನು ಬಲಿಪಡೆದು ಹೋಗಿದೆ. ಆ ಸಮಯದಲ್ಲಿ ಮುಖಗವಚ (ಮಾಸ್ಕ್) ಹಾಕಿಕೊಳ್ಳಬೇಕು, ಗುಂಪು ಸೇರಬಾರದು, ಹಸ್ತಲಾಘವ ಮಾಡಬಾರದು, ಅನಾವಶ್ಯಕವಾಗಿ ಓಡಾಡಬಾರದು ಎಂಬ ಹಲವು ನಿರ್ಬಂಧಗಳಿತ್ತು. ಜೀವಕ್ಕೆ ಆಪತ್ತು ಎಂದಾಗ ಎಲ್ಲರೂ ಅದನ್ನು ಗಂಭೀರವಾಗಿ ತೆಗೆದುಕೊಂಡರು. ಕೊರೊನಾ ಹೋಯಿತು. ಆದರೆ ಅದು ಬೀರಿದ ಪ್ರಭಾವ ಇನ್ನೂ ಕಡಿಮೆಯಾಗಿಲ್ಲ. ಕೊರೊನಾ ಸಮಯದಲ್ಲಿ ಹೇಗಿರಬೇಕು ಎಂಬುದನ್ನು ಶಿಷ್ಟಾಚಾರದಂತೆ ನಾವು ಪಾಲಿಸಿದ್ದೇವೆ. ಆದರೆ ಈಗ ಜೀವಭಯವಿಲ್ಲ. ಹಾಗಾಗಿ ಅದನ್ನು ನಾವು ಹೆಚ್ಚು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಈಗಲೂ ವೈದ್ಯರು ಈ ಬಗ್ಗೆ ಎಚ್ಚರಿಕೆ ತೆಗೆದುಕೊಳ್ಳಲು ಹೇಳುತ್ತಲೇ ಇದ್ದಾರೆ. ಆದರೆ ಅದನ್ನು ನಾವು ಪರಿಗಣಿಸುವುದಿಲ್ಲ. ಈ ಹಿಂದೆಲ್ಲಾ ಮನೆಯಲ್ಲಿ ಯಾರಿಗಾದರೂ ನೆಗಡಿ, ಕೆಮ್ಮು ಬಂದರೆ ಅಂತಹವರ ಹತ್ತಿರ ಮಕ್ಕಳನ್ನು ಬಿಡುತ್ತಿರಲಿಲ್ಲ. ಅದೊಂದು ಸಾಂಕ್ರಾಮಿಕ ರೋಗ, ಅದು ಮಕ್ಕಳನ್ನು ಬೇಗ ಅಪ್ಪಿಕೊಳ್ಳುತ್ತದೆ ಎಂಬುದು ಗೊತ್ತಿತ್ತು. ಆದರೆ ಹೊರಗೆ ಗುಂಪು ಸೇರಿದಾಗ ಅದರಲ್ಲಿ ಯಾರಿಗೆ ಇಂತಹ ನೆಗಡಿ, ಕೆಮ್ಮು ಬಂದಿದೆಯೋ ನಮಗೆ ಗೊತ್ತಾಗುವುದಿಲ್ಲ. ಆದರೂ ನಾವು ಯಾವುದೇ ಎಚ್ಚರಿಕೆ ವಹಿಸದೇ ಚಿಕ್ಕ ಮಕ್ಕಳನ್ನು ಮಾರುಕಟ್ಟೆಗೆ ಕರೆದುಕೊಂಡು ಹೋಗುತ್ತೇವೆ. ಕೊರೊನಾ ಸಮಯದಲ್ಲಿ ಹಾಗೆ ಮಾಡುತ್ತಿರಲಿಲ್ಲ. ಎಲ್ಲರೂ ಮಾಸ್ಕ್ ಹಾಕಿಕೊಳ್ಳುತ್ತಿದ್ದೆವು. ಹಾಗಾಗಿ ಅದು ನಿಯಂತ್ರಣಕ್ಕೆ ಬಂದಿತು. ಈಗಲೂ ನಮಗೆ ಗೊತ್ತಿದೆ ಗುಂಪು ಸೇರುವಲ್ಲಿ ಎಚ್ಚರಿಕೆ ವಹಿಸಬೇಕು ಎಂದು. ಅದು ವಿವೇಕ. ಆದರೆ ಅದನ್ನು ತಿರಸ್ಕರಿಸಿ ಎಚ್ಚರಿಕೆ ವಹಿಸದಿರುವುದು ವಿವೇಚನೆ ಎನಿಸುವುದಿಲ್ಲ, ಬದಲಾಗಿ ವಿವೇಕ ರಹಿತ ಅವಿವೇಕ ಎನಿಸುತ್ತದೆ.

> “ನಮಗೆ ವಿವೇಕವಿದ್ದರೂ ವಿವೇಚನೆ ಇಲ್ಲದಿದ್ದಾಗ ಜೀವನದ ಆನಂದದ ಕ್ಷಣಗಳನ್ನು ಕಳೆದು ಕೊಳ್ಳುತ್ತೇವೆ. ಇಂದು ನಮಗೆ ಎಲ್ಲಾ ಇದೆ, ಆದರೆ ಏನೂ ಇಲ್ಲದಂತಹ ಮನಸ್ಥಿತಿಗೆ ಬಂದಿದ್ದೇವೆ. ನಮ್ಮನ್ನು ನಾವೇ ಮನೆಯೊಳಗೆ ಬಂಧಿಗಳಾಗಿಸಿಕೊಂಡು ಬಿಡುತ್ತಿದ್ದೇವೆ. ನಮ್ಮ ವಿವೇಕ, ವಿವೇಚನೆಯಾದಾಗ ಇದರಿಂದ ಹೊರಬರಬಹುದು. ಹಣವೇ ಎಲ್ಲಾ ಎಂದು ಭಾವಿಸುವುದು ಒಂದು ರೀತಿಯ ವಿವೇಕವಾದರೆ, ಅದನ್ನು ಹೇಗೆ ಖರ್ಚು ಮಾಡಬೇಕು ಎಂಬುದು ವಿವೇಚನೆ ಎನಿಸುತ್ತದೆ. ಒಂದಷ್ಟು ಸಮಾಜಮುಖಿ ಯೋಚನೆ ನಮ್ಮದಾಗಬೇಕು.

ಇತ್ತೀಚೆಗೆ ನಮಗೆ ಅರಿವಾಗುತ್ತಿದೆ. ನಮ್ಮ ಆರೋಗ್ಯ ಕೆಡಲು ಮುಖ್ಯ ಕಾರಣ ನಾವು ಉಪಯೋಗಿಸುವ ಅಡುಗೆ ಎಣ್ಣೆ ಎಂದು. ಈ ಹಿಂದೆ ಗ್ರಾಮಗಳು ಹಾಗೂ ಪಟ್ಟಣಗಳಲ್ಲಿ ಶುದ್ಧವಾದ ಮರದ ಗಾಣದ ಎಣ್ಣೆಯನ್ನು ಉಪಯೋಗಿಸಲಾಗುತ್ತಿತ್ತು. ಆದ್ದರಿಂದ ಇಂತಹ ಖಾಯಿಲೆಗಳು ನಮಗೆ ಬರುತ್ತಿರಲಿಲ್ಲ. ಇಂದು ಉಪಯೋಗಿಸುವ ಅಡುಗೆ ಎಣ್ಣೆಯಲ್ಲಿ ಆರೋಗ್ಯಕ್ಕೆ ಪೂರಕವಾದ ಯಾವ ಅಂಶವೂ ಇಲ್ಲ, ಬದಲಾಗಿ ಅದನ್ನು ಒಂದು ಬಾರಿ ಉಪಯೋಗಿಸಿದ ನಂತರ ಅದು ಒಂದು ರೀತಿ ನಿಧಾನಗತಿಯ ವಿಷದಂತೆ ನಮ್ಮ ಆರೋಗ್ಯ ಕೆಡಿಸುತ್ತಿದೆ ಎಂಬುದು ನಮಗೆ ಗೊತ್ತು. ಹಾಗಾಗಿ ಇದ್ದುದರಲ್ಲಿ ಗಾಣದ ಎಣ್ಣೆ ಉತ್ತಮ ಎಂಬುದು ನಮ್ಮ ವಿವೇಕಕ್ಕೆ ಅರಿವಾಗಿದೆ. ಆದರೆ ಗಾಣದ ಎಣ್ಣೆ ಸ್ವಲ್ಪ ದುಬಾರಿ. ಹಾಗಾಗಿ ಏನೂ ಆಗುವುದಿಲ್ಲ ಎಂದು ಕಡಿಮೆ ಬೆಲೆಯ ಅಡುಗೆ ಎಣ್ಣೆ ತರುತ್ತೇವೆ. ಆರೋಗ್ಯ ಕೆಟ್ಟರೆ ವೈದ್ಯರ ಹತ್ತಿರ ಹೋಗಿ ಎಷ್ಟು ಖರ್ಚಾದರೂ ಪರವಾಗಿಲ್ಲ, ಗುಣಪಡಿಸಿ ಎಂದು ಕೇಳಿಕೊಳ್ಳುತ್ತೇವೆ. ಆ ಹಣವನ್ನೇ ನಾವು ಉತ್ತಮ ಎಣ್ಣೆ ಖರೀದಿಸಲು ಉಪಯೋಗಿಸಿದ್ದರೆ, ನಮ್ಮ ಆರೋಗ್ಯ ಹದಗೆಡುತ್ತಿರಲಿಲ್ಲ ಎಂಬ ವಿವೇಚನೆ ನಮಗೆ ಇರಬೇಕಾಗುತ್ತದೆ. ಇದರ ಮತ್ತೊಂದು ವಿಚಿತ್ರ ನಡವಳಿಕೆ ಎಂದರೆ, ಮನೆಯಲ್ಲಿ ಪರಿಶುದ್ಧವಾದ ಎಣ್ಣೆಯನ್ನು ಬಳಸುವ ನಾವು, ಸಂಜೆಯಾಗುತ್ತಿದ್ದಂತೆಯೇ ಬೋಂಡಾ, ಬಜ್ಜಿ ಅಂಗಡಿಯ ಮುಂದೆ ವಾಸನೆಯ ಅಮಲಿನಲ್ಲಿ ನಿಲ್ಲುತ್ತೇವೆ. ಮನೆಯಲ್ಲಿ ಒಂದು ಬಾರಿ ಕರಿದ ನಂತರ ಆ ಎಣ್ಣೆ ಉಪಯೋಗಿಸಬೇಕೆ, ಬೇಡವೇ ಎಂದು ಯೋಚಿಸುವ ನಾವು ಅಲ್ಲಿ, ಬೀದಿಬದಿಯಲ್ಲಿ ಇವುಗಳನ್ನು ಕರಿಯುವಾಗ ಯಾವ ಎಣ್ಣೆಯಿಂದ ಕರಿಯುತ್ತಿದ್ದಾರೆ, ಆ ಎಣ್ಣೆಯನ್ನು ಎಷ್ಟು ಸಮಯದಿಂದ ಉಪಯೋಗಿಸುತ್ತಿದ್ದಾರೆ ಎಂಬುದನ್ನು ಗಮನಿಸುವುದಿಲ್ಲ. ಹೀಗೆ ನಾಲ್ಕಾರು ದಿನ ತಿಂದ ನಂತರ ಹೊಟ್ಟೆ ಕೆಡುತ್ತದೆ. ಆಗಲೂ ನಾವು ಮಾಡಿದ ತಪ್ಪು ಏನು ಎಂಬುದನ್ನು ನಾವು ವಿವೇಚಿಸುವುದಿಲ್ಲ. ವಿವೇಕವಿದ್ದರೂ ವಿವೇಚನೆ ಇಲ್ಲದಿದ್ದಾಗ ಹೀಗಾಗುತ್ತದೆ.

ನಮ್ಮ ಆರೋಗ್ಯ ಕಾಪಾಡಿಕೊಳ್ಳಲು ಯುಕ್ತ ಆಹಾರ ಸೇವಿಸಬೇಕು ಎಂಬುದು ನಮ್ಮ ವಿವೇಕಕ್ಕೆ ಗೊತ್ತು. ಮನೆಯಲ್ಲಿ ಊಟ ಮಾಡುವಾಗ ನಾವು ಆ ವಿವೇಕ ಉಪಯೋಗಿಸುತ್ತೇವೆ. ಆದರೆ ಅದೇ ಮದುವೆ ಮತ್ತಿತರ ಸಮಾರಂಭಗಳಿಗೆ ಹೋದಾಗ ನಮ್ಮ ವಿವೇಚನೆ ಕೆಲಸ ಮಾಡುವುದಿಲ್ಲ. ಅಲ್ಲಿ ಎಲೆಗೆ ಹಾಕಿದ್ದನ್ನೆಲ್ಲಾ ತಿನ್ನುತ್ತೇವೆ. ಅಲ್ಲಿ ನಮ್ಮ ವಿವೇಚನೆ ಮೌನವಾಗುತ್ತದೆ. ನಂತರ ಅದರ ಪರಿಣಾಮ ಅನುಭವಿಸುತ್ತೇವೆ. ಕೆಲವೊಮ್ಮೆ ನಾನು ಹಾಗೆ ವಿವೇಚನೆ ಇಲ್ಲದೇ ತಿಂದಿದ್ದರಿಂದ ಹೀಗಾಯಿತು, ಇನ್ನು ಹಾಗೆ ಮಾಡಬಾರದು ಎಂದು ಯೋಚಿಸುತ್ತೇವೆ. ಆದರೆ ಕೆಲವು ದಿನಗಳ ನಂತರ ಅಂತಹ ಸಮಾರಂಭಕ್ಕೆ ಹೋದರೆ ಮತ್ತದೇ ತಪ್ಪು ಮಾಡುತ್ತೇವೆ.

ನಾವು ಆಹಾರದ ವಿಷಯದಲ್ಲಿ ಮಾಡುವ ಎಲ್ಲಾ ತಪ್ಪುಗಳ ಬಗ್ಗೆ ಶಿಕ್ಷೆಯನ್ನು ನಮ್ಮ ಹೊಟ್ಟೆ ಅನುಭವಿಸಬೇಕಾಗುತ್ತಿರುವುದು ದುರಂತ. ಹೊಟ್ಟೆಗೆ, ನಮ್ಮ ಜೀರ್ಣಾಂಗಗಳಿಗೆ ಒಂದು ಮಿತಿ ಇದೆ. ಅದನ್ನು ಅರಿತು ಎಚ್ಚರಿಕೆಯಿಂದ ನಡೆದುಕೊಂಡರೆ ಅವು ಜೀವಮಾನಪೂರ್ತಿ ನಮಗೆ ಸಹಕಾರ ನೀಡುತ್ತವೆ. ಇದನ್ನೇ ವಿವೇಚನೆ ಎಂದು ಹೇಳುವುದು.

ನಮ್ಮ ದೇಹಕ್ಕೆ ಎಂತಹ ಆಹಾರ ಬೇಕು ಹಾಗೂ ಎಷ್ಟು ಆಹಾರ ಬೇಕು ಎಂಬ ತಿಳುವಳಿಕೆಯನ್ನು ವಿವೇಕ ಎನ್ನಲಾಗುತ್ತದೆ. ಆದರೆ ಹಸಿವಿಲ್ಲದಿದ್ದರೂ ತಿನ್ನುತ್ತೇವೆ. ಹೊಟ್ಟೆಗೆ ಬೇಡದ್ದನ್ನು ತುರುಕುತ್ತೇವೆ. ಮತ್ತೆ ಅದನ್ನು ಸರಿಪಡಿಸಲು ನಮ್ಮ ಹೊಟ್ಟೆ ಶ್ರಮ ಪಡಬೇಕಾಗುತ್ತದೆ. ಇದರ ಅರಿವು ನಮಗೆ ಇರಬೇಕು. ಇಂದಿನ ಬಹುತೇಕ ಅನಾರೋಗ್ಯಕ್ಕೆ ನಾವು ವಿವೇಚನೆ ಇಲ್ಲದೆ ತೆಗೆದುಕೊಳ್ಳುವ ಆಹಾರ ಕಾರಣವಾಗುತ್ತಿದೆ.

ಹಾಗೆಯೇ ವಿಶ್ರಾಂತಿ. ಎಷ್ಟು ವಿಶ್ರಾಂತಿ ಬೇಕು ಎಂಬುದು ನಮ್ಮ ಶ್ರಮವನ್ನು ಆಧರಿಸಿರುತ್ತದೆ. ಆದರೆ ಗಡಿಯಾರ ನೋಡಿ ಮಲಗುವ ನಾವು, ನಿದ್ರೆ ಬರದಿದ್ದರೂ ಹಾಸಿಗೆಯಲ್ಲಿ ಹೊರಳಾಡುತ್ತೇವೆ. ಕಣ್ಣಿಗೆ ನಿದ್ರೆ ಹತ್ತುವುದು ದೈಹಿಕ ಶ್ರಮದಿಂದ ಅಥವಾ ಕಣ್ಣಿಗೆ ಆಯಾಸವಾದಾಗ ಮಾತ್ರ. ಆದರೆ ಇದು ಗೊತ್ತಿದ್ದರೂ ಗಡಿಯಾರ ನೋಡಿ ಮಲಗುವ ನಾವು ನಮ್ಮ ಸಮಯವನ್ನು ವ್ಯರ್ಥ ಮಾಡಿಕೊಳ್ಳುವುದೇ ಅಲ್ಲದೇ ದೇಹಕ್ಕೂ ಅನವಶ್ಯಕ ವಿಶ್ರಾಂತಿ ನೀಡಿ ಅದು ಜಢವಾಗುವಂತೆ ಮಾಡುತ್ತಿದ್ದೇವೆ. ಇದು ನಿರಂತರವಾದರೆ ಆ ದೇಹ ಮುಂದೆ ಯಾವ ಶ್ರಮದ ಕೆಲಸವನ್ನೂ ಮಾಡದಂತಾಗುತ್ತದೆ. ನಿದ್ರೆಯ ವಿಷಯದಲ್ಲಿ ನಾವು ಎಚ್ಚರ ವಹಿಸಬೇಕು. ಇತ್ತೀಚೆಗೆ ಭೇಟಿಯಾದ ಒಬ್ಬರು ಒಂದು ಸಣ್ಣ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಅದಕ್ಕೆ ಮುಂಚೆ ಅವರು ನಿರಂತರವಾಗಿ ಶ್ರಮದ ಕೆಲಸ ಮಾಡುತ್ತಿದ್ದರು. ಆಗೆಲ್ಲಾ ಅವರಿಗೆ ಹೆಚ್ಚಿನ ವಿಶ್ರಾಂತಿ ಪಡೆಯಬೇಕು, ಹೆಚ್ಚು ಹೊತ್ತು ಮಲಗಬೇಕು ಎನ್ನಿಸುತ್ತಿತ್ತು. ಆದರೆ ಕೆಲಸದ ಒತ್ತಡದಿಂದ ಹಾಗೆ ಮಾಡಲಾಗುತ್ತಿರಲಿಲ್ಲ. ಈಗ ಶಸ್ತ್ರಚಿಕಿತ್ಸೆಯ ನಂತರ ವೈದ್ಯರು ಹಾಸಿಗೆ ಬಿಟ್ಟು ಏಳಬೇಡಿ, ಚೆನ್ನಾಗಿ ನಿದ್ರೆ ಮಾಡಿ ಎಂದರು. ಇವರಿಗೆ ಬೇಕಾದದ್ದೂ ಅದೇ ಆಗಿತ್ತು. ಒಂದು ದಿನ ಹಾಗೇ ಆಯಿತು. ಇಡೀ ದಿನ ನಿದ್ರಿಸಿದರು. ಮರುದಿನದಿಂದ ನಿದ್ರೆ ಎನ್ನುವುದು ಶತ್ರುವಂತಾಯಿತು. ದೇಹಕ್ಕೆ ಧಣಿವಿಲ್ಲ, ನಿದ್ರೆ ಬರುವುದಿಲ್ಲ. ಆಗ ಅವರಿಗೆ ಅನಿಸಿದ್ದು, ಈ ಹಿಂದೆ ನಿದ್ರೆಗಾಗಿ ಪರಿತಪಿಸುತ್ತಿದ್ದುದು ಸರಿಯಲ್ಲ. ದೇಹಕ್ಕೆ ಆದ ದಣಿವಿನಷ್ಟೇ ವಿರಾಮ ಬೇಕು ಎಂಬುದು. ಇದು ವಿವೇಚನೆ.

ಇತ್ತೀಚೆಗೆ ಸಿಕ್ಕ ಒಬ್ಬ ಹಿರಿಯರು ತಾವು ಈ ಹಿಂದೆ ದಂಡಿಯಾಗಿ ಪುಸ್ತಕ ಓದುತ್ತಿದ್ದುದನ್ನು ನೆನೆಸಿಕೊಂಡರು. ಇಂದಿಗೂ ಅವರಿಗೆ ಪುಸ್ತಕ ಓದುವ ಆಸೆ. ಆದರೆ ಅಂಗಡಿಗೆ ಹೋಗಿ ಪುಸ್ತಕ ಕೊಂಡು ತರಲಾಗುತ್ತಿಲ್ಲ. ಮಕ್ಕಳನ್ನು ಕೇಳಿದರೆ ಎಲ್ಲಾ ಮೊಬೈಲ್‌ನಲ್ಲೇ ಸಿಗುತ್ತದೆ. ಅದಕ್ಕೇಕೆ ದುಡ್ಡುಕೊಟ್ಟು ಪುಸ್ತಕ ಖರೀದಿಸಬೇಕು ಎಂಬ ವಾದ. ಅವರ ಅನಿಸಿಕೆ ಎಂದರೆ ಪುಸ್ತಕ ಕೈಯಲ್ಲಿ ಹಿಡಿದು ಓದುವ ಆನಂದವೇ ಬೇರೆ, ಅದರ ಸ್ಪರ್ಶವೇ ಸುಖ ನೀಡುವಂತಹುದು. ಮೊಬೈಲ್ ಹಿಡಿದು ಓದಿದಾಗ ಖಂಡಿತಾ ಆ ಆನಂದ ದೊರಕುವುದಿಲ್ಲ, ಏನು ಮಾಡುವುದು ಎಂದು ನಿಟ್ಟುಸಿರುಬಿಟ್ಟರು. ಇಲ್ಲಿ ಓದುವುದು ವಿವೇಕವಾದರೆ, ಪುಸ್ತಕ ಕೊಂಡು ಓದುವುದು ವಿವೇಚನೆಯಾಗುತ್ತದೆ. ಓದಿದ ಮೇಲೆ ನೆಮ್ಮದಿ ದೊರಕುತ್ತದೆ. ಅದನ್ನು ಈಗಿನ ಪೀಳಿಗೆಯ ಮಕ್ಕಳಿಗೆ ಮನವರಿಕೆ ಮಾಡಿಕೊಡಲಾಗುತ್ತಿಲ್ಲ. ಆ ಬಗ್ಗೆ ಮಕ್ಕಳಿಗೆ ವಿವೇಚನೆ ಇಲ್ಲ ಎಂದು ಅವರು ಹೇಳಿದರು.

ಹೀಗೆ ನಮಗೆ ವಿವೇಕವಿದ್ದರೂ ವಿವೇಚನೆ ಇಲ್ಲದಿದ್ದಾಗ ಜೀವನದ ಆನಂದದ ಕ್ಷಣಗಳನ್ನು ಕಳೆದುಕೊಳ್ಳುತ್ತೇವೆ. ಇಂದು ನಮಗೆ ಎಲ್ಲಾ ಇದೆ, ಆದರೆ ಏನೂ ಇಲ್ಲದಂತಹ ಮನಸ್ಥಿತಿಗೆ ಬಂದಿದ್ದೇವೆ. ನಮ್ಮನ್ನು ನಾವೇ ಮನೆಯೊಳಗೆ ಬಂಧಿಗಳಾಗಿಸಿಕೊಂಡು ಬಿಡುತ್ತಿದ್ದೇವೆ. ನಮ್ಮ ವಿವೇಕ, ವಿವೇಚನೆಯಾದಾಗ ಇದರಿಂದ ಹೊರಬರಬಹುದು. ಹಣವೇ ಎಲ್ಲಾ ಎಂದು ಭಾವಿಸುವುದು ಒಂದು ರೀತಿಯ ವಿವೇಕವಾದರೆ, ಅದನ್ನು ಹೇಗೆ ಖರ್ಚು ಮಾಡಬೇಕು ಎಂಬುದು ವಿವೇಚನೆ ಎನಿಸುತ್ತದೆ. ಒಂದಷ್ಟು ಸಮಾಜಮುಖಿ ಯೋಚನೆ ನಮ್ಮದಾಗಬೇಕು.

ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರಾಗಿ ಷಡಕ್ಷರಿ ಪುನರಾಯ್ಕೆ

ಬೆಂಗಳೂರು, ಡಿ.27– ಕರ್ನಾಟಕ



ಸಿ.ಎಸ್.ಷಡಕ್ಷರಿ

ರಾಜ್ಯ ಸರ್ಕಾರಿ ನೌಕರರ ಸಂಘಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ ಸಿ.ಎಸ್. ಷಡಕ್ಷರಿ ಪುನರಾಯ್ಕೆಗೊಂಡಿದ್ದಾರೆ.

ಷಡಕ್ಷರಿ ಅವರು 507 ಮತಗಳು ಹಾಗೂ ಪ್ರತಿಸ್ಪರ್ಧಿ ಬಿ.ಪಿ. ಕೃಷ್ಣೇಗೌಡ ಅವರು 442 ಮತಗಳನ್ನು ಪಡೆದರು. ಈ ಮೂಲಕ ಹಾಲಿ ರಾಜ್ಯಾಧ್ಯಕ್ಷ ಷಡಕ್ಷರಿ 65 ಮತಗಳ ಅಂತರದಿಂದ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಎ. ಹನುಮನರಸಯ್ಯ ಘೋಷಿಸಿದರು.

ಖಜಾಂಚಿ ಸ್ಥಾನಕ್ಕೆ ಸ್ಪರ್ಧಿಸಿದ್ದ ಷಡಕ್ಷರಿ ಬಣದ ನಾಗರಾಜ ಆರ್.ಜುಮ್ಮನ್ನವರ ಸೋಲು ಕಂಡಿದ್ದು, ಕೃಷ್ಣೇಗೌಡ ಬಣದ ವಿ.ವಿ.ಶಿವರುದ್ರಯ್ಯ 18 ಮತಗಳ ಅಂತರದಿಂದ ಆಯ್ಕೆಯಾಗಿದ್ದಾರೆ. ಶಿವರುದ್ರಯ್ಯ 485 ಮತಗಳನ್ನು ಪಡೆದರೆ, ನಾಗರಾಜ ಅವರು 467 ಪಡೆದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಶಾಖೆಯಿಂದ ಆರಂಭಗೊಂಡು ರಾಜ್ಯ ಸಂಘದ ಅಧ್ಯಕ್ಷರು, ಪದಾಧಿಕಾರಿಗಳ ಚುನಾವಣಾ ಪ್ರಕ್ರಿಯೆ ಸೆ.17 ರಿಂದ ವಿವಿಧ ಹಂತದಲ್ಲಿ ಆರಂಭವಾಗಿತ್ತು. ಮೊದಲ ಹಂತದಲ್ಲಿ ಮೂರು ಶೈಕ್ಷಣಿಕ ಜಿಲ್ಲೆ ಒಳಗೊಂಡ 33 ಜಿಲ್ಲೆಗಳು ಹಾಗೂ 191 ತಾಲೂಕುಗಳ ನಿರ್ದೇಶಕ ಸ್ಥಾನಗಳಿಗೆ ಚುನಾವಣೆ ನಡೆದಿತ್ತು. ನಂತರ ಆಯಾ ತಾಲೂಕು ಹಾಗೂ ಜಿಲ್ಲಾ ಘಟಕಗಳ ಅಧ್ಯಕ್ಷರು, ಖಜಾಂಚಿ ಹಾಗೂ ರಾಜ್ಯ ಪರಿಷತ್ ಸದಸ್ಯರನ್ನು ಆಯ್ಕೆ ಮಾಡಲಾಗಿತ್ತು.

ತಾಲೂಕು, ಜಿಲ್ಲಾ ಘಟಕಗಳ ತಲಾ ನಾಲ್ವರು ಪದಾಧಿಕಾರಿಗಳು ಸೇರಿದಂತೆ ಬೆಂಗಳೂರು ನಗರ ವ್ಯಾಪ್ತಿಯ 102 ರಾಜ್ಯ ಪರಿಷತ್ ಸದಸ್ಯರು ಹಾಗೂ ಎಂಟು ಯೋಜನಾ ಘಟಕಗಳ ಪದಾಧಿಕಾರಿಗಳು ಶುಕ್ರವಾರ ಕಬ್ಬನ್ ಪಾರ್ಕ್ ಉದ್ಯಾನವನದ ನೌಕರರ ಸಂಘದ ಕಚೇರಿ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಮತ ಚಲಾಯಿಸಿದರು. ಮತದಾನದ ನಂತರ ಮತ ಎಣಿಕೆ ಕಾರ್ಯ ನಡೆಯಿತು.

ನನ್ನ ಅಣ್ಣನಿಗೆ ವಿದಾಯ: ಡಾ. ಮನಮೋಹನ್ ಸಿಂಗ್‌ರಿಗೆ ಮಲೇಷ್ಯಾ ಪ್ರಧಾನಿ ಭಾವುಕ ನುಡಿನಮನ

ಸಿಂಗಪುರ: ಮನಮೋಹನ ಸಿಂಗ್ ಅವರಿಗೆ ಶುಕ್ರವಾರ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿ ನುಡಿನಮನದ ಪತ್ರ ಬರೆದಿರುವ ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ, ತಾನು ಜೈಲಿನಲ್ಲಿದ್ದಾಗ ತಮ್ಮ ಮಕ್ಕಳಿಗೆ ಭಾರತದ ನಾಯಕ ಸಿಂಗ್ ಅವರು ವಿದ್ಯಾರ್ಥಿವೇತನ ನೀಡಿದ್ದನ್ನು ಸ್ಮರಿಸಿದ್ದಾರೆ.



ಅನ್ವರ್ ಇಬ್ರಾಹಿಂ

ಗುರುವಾರ ನಿಧನರಾದ ಮಾಜಿ ಪ್ರಧಾನಿಯನ್ನು ಸ್ಮರಿಸಿ 'ಎಕ್ಸ್'ನಲ್ಲಿ ನುಡಿನಮನ ಪತ್ರ ಹಂಚಿಕೊಂಡಿರುವ ಅನ್ವರ್, ಭಾರತವು ಆರ್ಥಿಕ ಸಂಕಷ್ಟದಲ್ಲಿದ್ದಾಗ ವಿಶ್ವದ ಆರ್ಥಿಕ ತಜ್ಞ ದೈತ್ಯರಲ್ಲಿ ಒಬ್ಬರಾಗಿ ಹೊರಹೊಮ್ಮಿದವರು ಸಿಂಗ್. ಭಾರತದ ಆರ್ಥಿಕ ಸುಧಾರಣೆಗಳ ಶಿಲ್ಪಿ ಎನಿಸಿರುವ ಈ ಮಹಾನ್ ವ್ಯಕ್ತಿ ನನ್ನ ಮಿತ್ರ, ನನ್ನ ಅಣ್ಣ... ಮನಮೋಹನ ಎಂದು ಬಣ್ಣಿಸಿದ್ದಾರೆ.

ಸಿಂಗ್ ಅವರು ರಾಜಕಾರಣಿಯಾಗಿ ಸ್ವಲ್ಪ ವಿಚಿತ್ರ. ಆದರೆ ರಾಜನೀತಿಜ್ಞರಾಗಿ ದೃಢನಿಶ್ಚಯವುಳ್ಳವರು, ಮುಂದಿನ ಪೀಳಿಗೆಗೆ ಸ್ಫೂರ್ತಿ ನೀಡುವ ಪರಂಪರೆಯನ್ನು ಅವರು ಬಿಟ್ಟು ಹೋಗಿದ್ದಾರೆ ಎಂದು ಪೋಸ್ಟ್ ಮಾಡಿದ್ದಾರೆ.

ನನ್ನ ಪಾಲಿಗೆ ಅವರು ತುಂಬಾ ಬೇಕಾಗಿದ್ದ ವ್ಯಕ್ತಿ. ಇದು ಅನೇಕ ಜನರಿಗೆ ಗೊತ್ತಿಲ್ಲ. ಈ ವಾಸ್ತವಾಂಶವನ್ನು ನಾನು ಮಲೇಷ್ಯಾ ಜನತೆಯ ಜತೆಗೆ ಹಂಚಿಕೊಳ್ಳುವ ಸಮಯವಿದು. ನನ್ನ ಸೆರೆವಾಸದ ವರ್ಷಗಳಲ್ಲಿ, ಅವರಿಗೆ ಸಂಬಂಧಪಡದಿದ್ದರೂ ನನ್ನ ಮೇಲೆ ಕರುಣೆ ತೋರಿದರು. ಅವರು ನನ್ನ ಮಕ್ಕಳಿಗೆ, ವಿಶೇಷವಾಗಿ ನನ್ನ ಮಗ ಇಹ್ಸಾನ್‌ಗೆ ವಿದ್ಯಾರ್ಥಿವೇತನ ನೀಡಿದರು. ನಾನು ಅವರ ನೆರವಿನ ಪ್ರಸ್ತಾಪವನ್ನು ನಿರಾಕರಿಸಿದ್ದೆನಾದರೂ, ಅಸಾಧಾರಣ ಮಾನವೀಯತೆ ಮತ್ತು ಔದಾರ್ಯವನ್ನು ನನಗೆ ತೋರಿದ್ದರು ಎಂದು ಸ್ಮರಿಸಿದ್ದಾರೆ.

ಆ ಕರಾಳ ದಿನಗಳಲ್ಲಿ, ನಾನು ಸೆರೆವಾಸದ ಚಕ್ರವ್ಯೂಹ ಭೇದಿಸಲು ಹೋರಾಡುತ್ತಿದ್ದಾಗ ನನ್ನೊಂದಿಗೆ ನಿಂತ ನಿಜವಾದ ಸ್ನೇಹಿತ ಅವರು. ಶಾಂತ 'ಸ್ವಭಾವದ ಆ ಮಹಾನ್ ವ್ಯಕ್ತಿಯ ಕಾರ್ಯಗಳು ನನ್ನ ಹೃದಯದಲ್ಲಿ ಶಾಶ್ವತವಾಗಿ ಉಳಿಯುತ್ತವೆ. ಅವರ ನಿಧನದ ಸುದ್ದಿಯಿಂದ ದುಃಖಿತನಾಗಿದ್ದೇನೆ. ನನ್ನ ಮಿತ್ರ, ನನ್ನ ಅಣ್ಣ, ಮನಮೋಹನ ಸಿಂಗ್‌ಗೆ ವಿದಾಯ ಎಂದು ಅನ್ವರ್ ನುಡಿನಮನ ಪತ್ರದಲ್ಲಿ ಬರೆದಿದ್ದಾರೆ.

ಅನ್ವರ್ ಅವರು 1999ರಿಂದ 2004 ರವರೆಗೆ ಸೆರೆವಾಸದಲ್ಲಿದ್ದರು. ನಂತರ ಅವರ ಶಿಕ್ಷೆ ರದ್ದಾಯಿತು. ಈ ಅವಧಿಯಲ್ಲಿ ಸಿಂಗ್ ಅವರು ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು.

ಮನಮೋಹನ್‌ಸಿಂಗ್ ನನ್ನ ಸ್ನೇಹಿತ, ತತ್ವಜ್ಞಾನಿ, ಮಾರ್ಗದರ್ಶಿ: ಸೋನಿಯಾ ಗಾಂಧಿ

ನವದೆಹಲಿ: ಮಾಜಿ ಪ್ರಧಾನಿ ಮನಮೋಹನ ಸಿಂಗ್ ನಿಧನಕ್ಕೆ ಶ್ರದ್ಧಾಂಜಲಿ ಅರ್ಪಿಸಿರುವ ಕಾಂಗ್ರೆಸ್ ಸಂಸದೀಯ ಪಕ್ಷದ (ಸಿಪಿಪಿ) ಅಧ್ಯಕ್ಷೆ ಸೋನಿಯಾ ಗಾಂಧಿ, ಇದು ನನ್ನ ಪಾಲಿಗಿದು ವೈಯಕ್ತಿಕ ನಷ್ಟ ಎಂದು ಹೇಳಿದ್ದಾರೆ.



ಸೋನಿಯಾ

ಮನಮೋಹನ್‌ಸಿಂಗ್ ಅವರ ತಿಳಿವಳಿಕೆ, ಉದಾತ್ತಗುಣ, ವಿನಯವಂತಿಕೆ ಗುಣಗಳನ್ನು ಒತ್ತಿ ಹೇಳಿರುವ ಸೋನಿಯಾ, ಮಾಜಿ ಪ್ರಧಾನಿಯ ಅಗಲಿಕೆ ತುಂಬಲಾರದ ನಷ್ಟ ಎಂದು ಹೇಳಿದ್ದಾರೆ. ಮನಮೋಹನ ಸಿಂಗ್ ಅವರು ನನ್ನ ಸೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಕರಾಗಿದ್ದರು. ಅವರ ನಿಧನದಿಂದ ಕಾಂಗ್ರೆಸ್ ಪಕ್ಷಕ್ಕೆ ಅಪಾರ ನಷ್ಟವಾಗಿದೆ ಎಂದು ಹೇಳಿದ್ದಾರೆ.

ದೇಶದ ಪ್ರಗತಿ ಮತ್ತು ಅಭಿವೃದ್ಧಿಗೆ ಮನಮೋಹನ ಸಿಂಗ್ ಸಲ್ಲಿಸಿರುವ ಅಪಾರವಾದ ಕೊಡುಗೆಯನ್ನು ಅಳೆಯಲಾಗದು. ಅವರಂತಹ ನಾಯಕರನ್ನು ಹೊಂದಿದ್ದಕ್ಕಾಗಿ ಇಡೀ ದೇಶ ಮತ್ತು ನಮ್ಮ ಪಕ್ಷ ಹೆಮ್ಮೆಪಟ್ಟುಕೊಳ್ಳುತ್ತಿದ್ದು, ಕೃತಜ್ಞರಾಗಿದ್ದೇವೆ ಎಂದು ಅವರು ತಿಳಿಸಿದ್ದಾರೆ. ದೇಶಕ್ಕಾಗಿ ಹೃದಯವಂತಿಕೆ ಮತ್ತು ಮನಸ್ಸಿನಿಂದ ಮನಮೋಹನ ಸಿಂಗ್ ಸೇವೆ ಸಲ್ಲಿಸಿದ್ದರು. ದೇಶದ ಪ್ರತಿಯೊಬ್ಬರ ಹೃದಯದಲ್ಲಿ ಮನಮೋಹನ ಅವರ ಮೇಲಿನ ಪ್ರೀತಿ ಅಡಗಿದೆ ಎಂದು ಅವರು ಉಲ್ಲೇಖಿಸಿದ್ದಾರೆ.

ನನ್ನ ಪಾಲಿಗೆ ಮನಮೋಹನ ಅವರ ನಿಧನವು ವೈಯಕ್ತಿಕ ನಷ್ಟವಾಗಿದೆ. ಅವರು ನನ್ನ ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಕರಾಗಿದ್ದರು. ಸದಾ ಸೌಮ್ಯರಾಗಿರುತ್ತಿದ್ದರು ಮತ್ತು ದೃಢನಿಶ್ಚಯವನ್ನು ಹೊಂದಿರುತ್ತಿದ್ದರು ಎಂದು ಹೇಳಿದ್ದಾರೆ.

ಭ್ರಷ್ಟಾಚಾರ ವಿರೋಧಿ ಮನಮೋಹನ್ ಸಿಂಗ್

ಅಣ್ಣಾ ಹಜಾರೆ ಶ್ಲಾಘನೆ

ಮುಂಬೈ: ಮಾಜಿ ಪ್ರಧಾನಿ ಮನಮೋಹನ್‌ಸಿಂಗ್ ಅವರ ನಿಧನಕ್ಕೆ ಭ್ರಷ್ಟಾಚಾರ ವಿರೋಧಿ ಹೋರಾಟಗಾರ ಅಣ್ಣಾ ಹಜಾರೆ ಅವರು ಸಂತಾಪ ಸೂಚಿಸಿದ್ದಾರೆ. ದೇಶ ಮತ್ತು ಸಮಾಜದ ಅಭಿವೃದ್ಧಿಗಾಗಿ ಶ್ರಮಿಸಿದ ಸಿಂಗ್, ಭ್ರಷ್ಟಾಚಾರ ವಿರುದ್ಧ ಹೋರಾಟ ನಡೆಸಿದ್ದರು ಎಂದು ಸ್ಮರಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹುಟ್ಟುವವರು ಸಾಯಲೇಬೇಕು. ಆದರೆ ಸಿಂಗ್ ಮಾಡಿದ ಕೆಲಸಗಳು ಮತ್ತು ಸಮಾಜಕ್ಕೆ ಅವರು ನೀಡಿದ ಕೊಡುಗೆಗಳು ಅಪಾರ. ಅವರ ಪರಂಪರೆಯು ಸದಾ ನೆನಪಿಸಿಕೊಳ್ಳುವಂತಹದ್ದು. ಅವರು ದೇಶದ ಆರ್ಥಿಕತೆಗೆ ಹೊಸ ದಿಕ್ಕನ್ನು ನೀಡಿದರು ಎಂದು ಹೇಳಿದ್ದಾರೆ.

2010ರ ದಶಕದಲ್ಲಿ ಸಿಂಗ್ ಅವರ ಅಧಿಕಾರಾವಧಿಯಲ್ಲಿ ನಾನು (ಹಜಾರೆ)



ಅವರನ್ನು ಭೇಟಿ ಮಾಡಿದ್ದೆ. ಭ್ರಷ್ಟಾಚಾರ ವಿರುದ್ಧದ ಆಂದೋಲನದ ಸಮಯದಲ್ಲಿ ನನ್ನ ಜತೆ ಚರ್ಚಿಸಿದರು. ಭ್ರಷ್ಟಾಚಾರ ವಿರುದ್ಧದ ಲೋಕಾಯುಕ್ತ ಕಾಯ್ದೆಗೆ ಸಂಬಂಧಿಸಿದಂತೆ ಕೆಲವು ನಿರ್ಧಾರಗಳನ್ನು ತ್ವರಿತವಾಗಿ ತೆಗೆದುಕೊಂಡರು ಎಂದು ಹಜಾರೆ ತಿಳಿಸಿದ್ದಾರೆ. 2004 ರಿಂದ 2014ರವರೆಗೆ ಪ್ರಧಾನಿಯಾಗಿದ್ದ ಸಿಂಗ್ ಅವರು ದೇಶದ ಆರ್ಥಿಕತೆಗೆ ಹೊಸ ದಿಕ್ಕನ್ನು ನೀಡಿದರು. ಸಿಂಗ್ ಅವರು ಇಂದು ನಮ್ಮೊಂದಿಗೆ ಭೌತಿಕವಾಗಿ ಇಲ್ಲ. ಆದರೆ ಅವರ ನೆನಪುಗಳು ಸದಾ ನಮ್ಮೊಂದಿಗೆ ಇರುತ್ತದೆ ಎಂದು ಹಜಾರೆ ಸ್ಮರಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ಡಾ.ಮನಮೋಹನ್ ಸಿಂಗ್ ಅವರ ಪಾರ್ಥೀವ ಶರೀರಕ್ಕೆ ಅಂತಿಮ ನಮನ



ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಂತಿಮ ಗೌರವ ಸಲ್ಲಿಸಿದರು.



ಸಂಸದೆ ಸೋನಿಯಾಗಾಂಧಿ ಅವರು ಡಾ. ಮನಮೋಹನ್ ಸಿಂಗ್ ಅವರಿಗೆ ಅಂತಿಮ ನಮನ ಸಲ್ಲಿಸಿದರು.



ಲೋಕಸಭೆ ವಿಪಕ್ಷ ನಾಯಕ ರಾಹುಲ್‌ಗಾಂಧಿ ಡಾ. ಮನಮೋಹನ್ ಸಿಂಗ್ ಅವರಿಗೆ ಅಂತಿಮ ನಮನ ಸಲ್ಲಿಸಿದರು.



ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಂದ ಡಾ. ಮನಮೋಹನ್ ಸಿಂಗ್ ಅವರಿಗೆ ಅಂತಿಮ ನಮನ.



ಡಾ. ಮನಮೋಹನ್ ಸಿಂಗ್ ಅವರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಂದ ಅಂತಿಮ ನಮನ.



ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್‌ರಿಂದ ಡಾ. ಮನಮೋಹನ್ ಸಿಂಗ್ ಅವರಿಗೆ ಅಂತಿಮ ನಮನ.



ಡಾ. ಮನಮೋಹನ್ ಸಿಂಗ್ ಅವರಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಂತಿಮ ನಮನ ಸಲ್ಲಿಸಿದರು.

ಡಾ.ಮನಮೋಹನ್ ಸಿಂಗ್ ಆರ್ಥಿಕ ಬಿಕ್ಕಟ್ಟಿನಿಂದ ದೇಶವನ್ನು ಪಾರು ಮಾಡಿದರು

ಮಾಜಿ ಪ್ರಧಾನಿ ದೇವೇಗೌಡರಿಂದ ಗುಣಗಾನ

ಬೆಂಗಳೂರು, ಡಿ.27(ಕೆಎಂಶಿ)–ದೇಶ ಆರ್ಥಿಕವಾಗಿ ಭೀಕರ ಪರಿಸ್ಥಿತಿಯಲ್ಲಿದ್ದಾಗ ಹಣಕಾಸು ಸಚಿವರಾಗಿದ್ದ ಡಾ.ಮನಮೋಹನ್ ಸಿಂಗ್ ಸಮರ್ಥ ರೀತಿ ಕಾರ್ಯ ನಿರ್ವಹಿಸಿ, ಅರ್ಥ ವ್ಯವಸ್ಥೆಯನ್ನು ಸರಿದಾರಿಗೆ ತಂದರು ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಗುಣಗಾನ ಮಾಡಿದ್ದಾರೆ.

ಜೆಡಿಎಸ್ ರಾಜ್ಯ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಡಾ.ಮನಮೋಹನ್ ಸಿಂಗ್ ಶ್ರದ್ಧಾಂಜಲಿ ಸಮರ್ಪಣೆ ಸಭೆಯಲ್ಲಿ ಮಾತನಾಡಿದ ಅವರು, ಇದು ಅತ್ಯಂತ ದುಃಖದ ದಿನ. ಅವರ ನಿಧನ ನನಗೆ ಬಹಳ ನೋವುಂಟು ಮಾಡಿದೆ, ನಾನು ಅವರನ್ನು ನೋಡಿದ್ದು 1991ರಲ್ಲಿ, ಅದು ಲೋಕಸಭೆಯಲ್ಲಿ, ನಾನು ಕೂಡ ಮೊದಲ ಬಾರಿಗೆ ಲೋಕಸಭೆಗೆ ಹೋಗಿದ್ದೆ, ಪಿ.ವಿ.ನರಸಿಂಹರಾವ್ ಸರ್ಕಾರದಲ್ಲಿ ಆರ್ಥಿಕ ಸಚಿವರಾಗಿದ್ದರು. ರಾಷ್ಟ್ರದ ಆರ್ಥಿಕ ಪರಿಸ್ಥಿತಿ ಸರಿಪಡಿಸಲು ಅನೇಕ ಪ್ರಯತ್ನಗಳನ್ನು ಮಾಡಿದರು ಎಂದರು. ಆರ್ಥಿಕವಾಗಿ ದೇಶದ ಸ್ಥಿತಿ ಬಹಳ ಹದಗೆಟ್ಟಿತ್ತು. ಅದಕ್ಕೂ ಹಿಂದೆ ದೇಶದ 130 ಟನ್ ಚಿನ್ನ ಒತ್ತೆ ಇಡಲಾಗಿತ್ತು. ಅಂತಹ ಭೀಕರ ಆರ್ಥಿಕ ಪರಿಸ್ಥಿತಿಯ ಸನ್ನಿವೇಶದಲ್ಲಿ ಡಾ.ಮನಮೋಹನ್ ಸಿಂಗ್ ಆರ್ಥಿಕ ಸಚಿವರಾಗಿ ತಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದರು ಎಂದು ನೆನಪು ಮಾಡಿಕೊಂಡರು.

ಭಾರೀ ಆರ್ಥಿಕ ಸುಧಾರಣೆ: ಮನಮೋಹನ್ ಸಿಂಗ್ ಅವರನ್ನು ನಾನು ಬಹಳ ಟೀಕೆ ಮಾಡಿದ್ದೆ. ಅವರ ನೀತಿಗಳನ್ನು ಪ್ರಶ್ನೆ ಮಾಡಿದ್ದೆ, ಖಾಸಗೀ ಕರಣ, ವಿದೇಶದಿಂದ ಹಣ ಬರಲು ನಮ್ಮ ದೇಶದ ಆರ್ಥಿಕ ನೀತಿಗಳನ್ನು ಮಾರ್ಪಾಡು ಮಾಡಿ ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತಂದರು. ಇದು ಬಹಳ ದೊಡ್ಡ ಬೆಳವಣಿಗೆ ಎಂದು ಬಣ್ಣಿಸಿದರು. ಮನಮೋಹನ್ ಸಿಂಗ್ ಸರಳ, ಸಜ್ಜನ, ಪ್ರಾಮಾಣಿಕ ವ್ಯಕ್ತಿ ಆಗಿದ್ದರು. ನಾವು ಪಕ್ಷ ರಾಜಕಾರಣ ಹೊರತು ಪಡಿಸಿ ಅವರನ್ನು ನೆನೆಯುತ್ತಿದ್ದೇವೆ. ಕೇಂದ್ರ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ನಮ್ಮ ಪಕ್ಷದ ಪರವಾಗಿ, ವೈಯಕ್ತಿಕವಾಗಿ ಮನಮೋಹನ್ ಸಿಂಗ್ ಅವರಿಗೆ



ಶ್ರದ್ಧಾಂಜಲಿ ಸಮರ್ಪಣೆ ಸಭೆಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು

ಅಂತಿಮ ಗೌರವ ಸಲ್ಲಿಸಿದ್ದಾರೆ ಎಂದರು. ನರಸಿಂಹ ರಾವ್ ಸರ್ಕಾರದಲ್ಲಿ ದೇಶದ ಗೌರವ ಉಳಿಸಲು ಆರ್ಥಿಕ ತಜ್ಞರಾಗಿ ಮನಮೋಹನ್ ಸಿಂಗ್ ಸಲ್ಲಿಸಿದ ಸೇವೆ, ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ದೇಶವನ್ನು ಪಾರು ಮಾಡಿತು. ಅವರು ದೇಶಕ್ಕೆ ಸುದೀರ್ಘ ಕಾಲ ಸೇವೆ ಸಲ್ಲಿಸಿದ್ದಾರೆ. ಡಾ.ಸಿಂಗ್ ಜಾರಿಗೆ ತಂದ ಉದಾರೀಕರಣ, ಖಾಸಗೀಕರಣ, ಜಾಗತೀಕರಣ ನೀತಿಗಳ ಮೂಲಕ ದೇಶಕ್ಕೆ ವಿದೇಶಿ ನೇರ ಬಂಡವಾಳ ದೊಡ್ಡ ಪ್ರಮಾಣದಲ್ಲಿ ಹರಿದು ಬಂತು. ಹಣಕಾಸು ಸಚಿವರಾಗುವುದಕ್ಕೂ ಮೊದಲು ಜಾಗತಿಕ ಮಟ್ಟದಲ್ಲಿ ಕೆಲಸ ಮಾಡಿದ್ದರು, ಅವರ ದೊಡ್ಡ ಅನುಭವ ಆರ್ಥಿಕ ವಿಚಾರದಲ್ಲಿ ತುಂಬಾ ಬುದ್ಧಿವಂತರನ್ನಾಗಿಸಿತ್ತು.

ಹಿರಿಯ ಮುತ್ಸದ್ದಿ ರಾಜಕಾರಣಿ 92 ವಯಸ್ಸಿನಲ್ಲಿ ಅಗಲಿದ್ದಾರೆ. ಅವರ ನಿಧನದ ಹಿನ್ನೆಲೆಯಲ್ಲಿ ದೇಶಾದ್ಯಂತ ಯಾವುದೇ ಸರ್ಕಾರಿ ಕಾರ್ಯಕ್ರಮ ಮಾಡಬಾರದು. ಶೋಕಾಚರಣೆ ಇದೆ, ರಾಷ್ಟ್ರ ಧ್ವಜವನ್ನು ಅರ್ಧಕ್ಕೆ ಇಳಿಸಿ ಗೌರವ ಕೊಡಬೇಕು. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಹಾಗೆಯೇ ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಮಾಜಿ ಪ್ರಧಾನಿ ದೇವೇಗೌಡ ಗದ್ಗದಿತರಾದರು.

ಕುಮಾರಸ್ವಾಮಿ ಅಂತಿಮ ನಮನ: ಸಂಸತ್ ಅಧಿವೇಶನ ಮುಗಿದ ನಂತರ ತಮ್ಮ ಲೋಕಸಭೆ ಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಬೆಂಗಳೂರಿಗೆ ಆಗಮಿಸಿದ್ದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಅಗಲಿದ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರಿಗೆ ಅಂತಿಮ ನಮನ ಸಲ್ಲಿಸಲು ಶುಕ್ರವಾರ ಬೆಳಗ್ಗೆಯೇ ನವ ದೆಹಲಿಗೆ ವಾಪಸ್ಸಾದರು. ವಿಮಾನ ನಿಲ್ದಾಣದಿಂದ ನೇರವಾಗಿ ಡಾ. ಮನಮೋಹನ್ ಸಿಂಗ್ ನಿವಾಸಕ್ಕೆ ತೆರಳಿದ ಅವರು, ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿ, ಅವರ ಕುಟುಂಬ ಸದಸ್ಯರಿಗೆ ಸಂತಾಪ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಾ.ಮನಮೋಹನ್ ಸಿಂಗ್ ದುರಿತ ಕಾಲದಲ್ಲಿ ದೇಶ ಮುನ್ನಡೆಸಿದ ಮೇಧಾವಿ, ದೂರದೃಷ್ಟಿ, ಸಂಯಮ ಮತ್ತು ಆರ್ಥಿಕ ಮೇದಸ್ಸಿನಿಂದ ರಾಷ್ಟ್ರವನ್ನು ಸಶಕ್ತವಾಗಿ ಮಾಡಿದರು, ಅಲ್ಲದೆ, ಆರ್ಥಿಕ ಸುಧಾರಣೆಗಳ ಮೂಲಕ ಭಾರತಕ್ಕೆ ಜಾಗತಿಕ ಮನ್ನಣೆ ತಂದುಕೊಟ್ಟ ಅವರ ಕೊಡುಗೆಗಳು ಚಿರಸ್ಮರಣೀಯ ಎಂದರು. ದೇಶದ ಅಭಿವೃದ್ಧಿಗೆ ಮಹಾನ್ ಕೊಡುಗೆ ನೀಡಿದ್ದಾರೆ. ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ದೇಶವನ್ನು ಅಪಾಯದಿಂದ ಪಾರು ಮಾಡಿ, ಆರ್ಥಿಕ ಸಚಿವರಾಗಿ, ಪ್ರಧಾನಿಯಾಗಿ, ಹಣಕಾಸು ತಜ್ಞರಾಗಿ ಅಪಾರ ಸೇವೆ ಸಲ್ಲಿಸಿದ್ದಾರೆ ಎಂದರು.

ಡಾ. ಮನಮೋಹನ್ ಸಿಂಗ್ ಆಕ್ಸಿಡೆಂಟಲ್ ಪಿಎಂ ಮಾತ್ರವಲ್ಲ ಎಫ್‌ಎಂ ಕೂಡ!

ನವದೆಹಲಿ, ಡಿ.27– ತಾನು ಹೇಗೆ ಹಣಕಾಸು ಸಚಿವನಾದೆ, ಪ್ರಧಾನ ಮಂತ್ರಿಯಾದೆ ಎಂಬು



ದನ್ನು ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ತಾವೇ ವಿವರಿಸಿದ್ದರು. ಆ ಘಟನೆಗಳು, ಅವರು ವಿವರಿಸಿದ್ದ ರೀತಿ ಪತ್ರಕರ್ತರು ಹಾಗೂ ನೆರೆದಿದ್ದವರನ್ನು ನಗೆಗಡಲಲ್ಲಿ ತೇಲಿಸಿತ್ತು. 'ಬೇಗ ಹೋಗಿ ಡ್ರೆಸ್ ಆಗಿ ಪ್ರಮಾಣ ವಚನಕ್ಕೆ ಬನ್ನಿ ಎಂದು ಪಿ.ವಿ.ನರಸಿಂಹರಾವ್ ಹೇಳಿದರು. ಹೀಗೆ ನಾನು ಆಕ್ಸಿಡೆಂಟಲ್ ಫೈನಾನ್ಸ್ ಮಿನಿಸ್ಟರ್ ಆದೆ ಹಾಗೂ ಆಕ್ಸಿಡೆಂಟಲ್ ಪ್ರೈಮ್ ಮಿನಿಸ್ಟರ್ ಕೂಡ ಆದೆ' ಎಂದು ಅವರು ಹೇಳಿದ್ದರು.

ಎಂದಿನಂತೆ ನಾನು ಯುಜಿಸಿ ಕಚೇರಿಗೆ ಹೋಗಿದ್ದೆ. ಆಗ ಪ್ರಧಾನಿಯಾಗಿದ್ದ ಪಿವಿ ನರಸಿಂಹರಾವ್ ಅವರು ನನ್ನನ್ನು ಹುಡುಕುತ್ತಿದ್ದರು. ಯುಜಿಸಿಯಲ್ಲಿರುವುದನ್ನು ತಿಳಿದುಕೊಂಡ ಅವರು ಕರೆ ಮಾಡಿದರು. 'ಅಲೆಗ್ಸಾಂಡರ್ ನಿಮಗೆ ತಿಳಿಸಲಿಲ್ಲವೇ, ನಿಮ್ಮನ್ನು ಯಾವುದಕ್ಕೆ ಆಯ್ಕೆ ಮಾಡಲಾಗಿದೆ ಎಂದು?' ಅಂತ ಕೇಳಿದರು. ಆದರೆ, ನಾನು ಅವರ ಮಾತುಗಳನ್ನು ಗಂಭೀರವಾಗಿ ಪರಿಗಣಿಸಲಿಲ್ಲ ಎಂದು ಹೇಳಿದೆ. ಅವರು ಕೂಡಲೇ ಸಿದ್ಧರಾಗಿ ಪ್ರಮಾಣ ವಚನಕ್ಕೆ ಬರುವಂತೆ ತಿಳಿಸಿದರು ಎಂದಿದ್ದರು

ದೇಶವು ಸಂಕಷ್ಟದಲ್ಲಿದ್ದ ಸಮಯ ಅದಾಗಿತ್ತು. ಬಹಳ ಕಠಿಣವಾದ ನಿರ್ಧಾರಗಳನ್ನು ತೆಗೆದು ಕೊಳ್ಳಬೇಕಾಗುತ್ತದೆ ಎಂದು ಪಿ.ವಿ.ನರಸಿಂಹ ರಾವ್ ಅವರಿಗೆ ತಿಳಿಸಿದೆ ಅದಕ್ಕೆ ಅವರು, 'ನಮಗೆ ಅದೆಲ್ಲವೂ ಗೊತ್ತಿಲ್ಲ. ಆದರೆ, ನಿಮಗೆ ನಿರ್ಧಾರ ತೆಗೆದುಕೊಳ್ಳುವ ಪೂರ್ಣ ಸ್ವಾತಂತ್ರ್ಯ ಇರುತ್ತದೆ. ಎಲ್ಲವೂ ಸರಿಯಾದರೆ ನಾವೆಲ್ಲರೂ ಹೆಸರು ತೆಗೆದುಕೊಳ್ಳುತ್ತೇವೆ. ಅಕಸ್ಮಾತ್ ಎಡವಟ್ಟಾದರೆ, ನೀವೇ ಹರಕೆಯ ಕುರಿಯಾಗುವಿರಿ' ಎಂದರು. ಅದಕ್ಕೆ ನಾನು ಒಪ್ಪಿಕೊಂಡರೆ, ನೀವು ನನ್ನ ಬೆನ್ನಿಗೆ ಇರಬೇಕು ಎಂದು ಕೇಳಿದ್ದೆ ಎಂಬುದನ್ನು ಕಾರ್ಯಕ್ರಮವೊಂದರಲ್ಲಿ ಮನಮೋಹನ್ ಸಿಂಗ್ ಹಂಚಿಕೊಂಡಿದ್ದರು.

ಡಾ.ಮನಮೋಹನ್ ಸಿಂಗ್ ನಿಧನಕ್ಕೆ ಸಿಎಂ, ಡಿಸಿಎಂ, ಸಚಿವರ ಸಂತಾಪ

ಬೆಂಗಳೂರು, ಡಿ.27(ಕೆಎಂಶಿ)– ಮಾಜಿ ಪ್ರಧಾನಮಂತ್ರಿ ಡಾ.ಮನ ಮೋಹನ್ ಸಿಂಗ್ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಅನೇಕ ಗಣ್ಯರು ತೀವ್ರ ಸಂತಾಪ ಸೂಚಿಸಿದ್ದಾರೆ.



ಸಿದ್ದರಾಮಯ್ಯ ಡಿ.ಕೆ.ಶಿವಕುಮಾರ್

ಮುಖ್ಯಮಂತ್ರಿ ಸಿದ್ದರಾಮಯ್ಯ ಸುದ್ದಿಗಾರರೊಂದಿಗೆ ಮಾತನಾಡಿ, ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಬದುಕು, ಆರ್ಥಿಕ ನೀತಿಗಳು ನಮಗೆಲ್ಲ ಪ್ರೇರಣೆ, ಶ್ರೇಷ್ಠ ಆರ್ಥಿಕ ತಜ್ಞರಾಗಿ ಕರ್ನಾಟಕದ ಆರ್ಥಿಕ ಸ್ಥಿತಿ ಉತ್ತಮವಾಗಿದೆ ಎಂಬ ಮೆಚ್ಚುಗೆ ವ್ಯಕ್ತಪಡಿಸಿದ್ದರು, ಉದಾರೀಕರಣ ನೀತಿ ಮೂಲಕ ಭಾರತ ವನ್ನು ವಿಶ್ವಮಟ್ಟಕ್ಕೆ ಕೊಂಡೊಯ್ಯುವಲ್ಲಿ ಪ್ರಮುಖ ಪಾತ್ರ ವಹಿಸಿದರು, ಅವರ ದೂರದೃಷ್ಟಿ ಯೋಜನೆಗಳು ಭಾರತ ಆರ್ಥಿಕ ಮುಗ್ಗಟ್ಟಿನಿಂದ ಹೊರ ಬರಲು ಕಾರಣವಾಯಿತು ಎಂದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಡಾ.ಮನಮೋಹನ್ ಸಿಂಗ್ ಕರ್ನಾಟಕಕ್ಕೆ ಅದರಲ್ಲೂ ಬೆಂಗಳೂರು ಅಭಿ ವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದರು, ನರ್ಮ್ ಯೋಜನೆ ಮೂಲಕ ಅನೇಕ ನಗರಗಳ ಮೂಲ ಸೌಕರ್ಯ ಅಭಿ ವೃದ್ಧಿಗೆ ಸಹಕರಿಸಿದ್ದರು, ನಗರದಲ್ಲಿ ಅನೇಕ ಮೇಲ್ಸೇತುವೆಗಳೂ ಅವರ ಕೊಡುಗೆಗಳಾಗಿವೆ, ರೈತರ ಸಾಲಮನ್ನಾ ಮಾಡಿ ಅವರ ಪರವಾಗಿ ದೃಢವಾಗಿ ನಿಂತವರು, ನರೇಗಾ ಮೂಲಕ ಗ್ರಾಮೀಣ ಜನರ ಬದುಕಿನಲ್ಲಿ ಉದ್ಯೋಗ ಗ್ಯಾರಂಟಿ ಸೃಷ್ಟಿ ಮಾಡಿದರು, ಆಹಾರ ಭದ್ರತಾ ಕಾಯ್ದೆ, ಮಾಹಿತಿ ಹಕ್ಕು ಸೇರಿದಂತೆ ಅನೇಕ ಜನಪರ ಕಾಯ್ದೆಗಳನ್ನು ಜಾರಿಗೆ ತಂದರು ಎಂದರು.

ಡಾ.ಮನಮೋಹನ್ ಸಿಂಗ್ ನಿಧನಕ್ಕೆ ಸಚಿವರಾದ ಡಾ.ಜಿ.ಪರಮೇಶ್ವರ್, ಕೆ.ಹೆಚ್.ಮುನಿಯಪ್ಪ ಮತ್ತಿತರರು ಕಂಬನಿ ಮಿಡಿದಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತೀವ್ರ ಸಂತಾಪ ಸೂಚಿಸಿ, ಭಾರತೀಯ ಅರ್ಥಶಾಸ್ತ್ರಜ್ಞ, ಹಿರಿಯ ರಾಜಕಾರಣಿ ಡಾ.ಮನ ಮೋಹನ್ ಸಿಂಗ್ 2004 ರಿಂದ 2014 ರವರೆಗೆ ಪ್ರಧಾನ ಮಂತ್ರಿಯಾಗಿ, 1970ರ ದಶಕದಲ್ಲಿ ಆರ್ಥಿಕ ಸಲಹೆಗಾರರಾಗಿ, ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶಕ ಮತ್ತು ಗವರ್ನರ್ ಆಗಿಯೂ ಕಾರ್ಯ ನಿರ್ವಹಿಸಿದ್ದರು ಎಂದು ಸ್ಮರಿಸಿದ್ದಾರೆ.

ಡಾ.ಮನಮೋಹನ್ ಸಿಂಗ್ ನಿಧನಕ್ಕೆ ಶಾಸಕ ಜಿ.ಟಿ.ದೇವೇಗೌಡರ ಸಂತಾಪ

ಮೈಸೂರು, ಡಿ.27(ಬಿಎಲ್‌ಯು)–



ದಿವಂಗತ ಮಾಜಿ ಪ್ರಧಾನಿ ಡಾ.ಮನ ಮೋಹನ್ ಸಿಂಗ್ ನಿಧನಕ್ಕೆ ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರು ತೀವ್ರ ಸಂತಾಪ ಸೂಚಿಸಿದ್ದಾರೆ. ಡಾ.ಮನಮೋಹನ್ ಸಿಂಗ್, ಅಂತರರಾಷ್ಟ್ರೀಯ ಮೇಲ್ವಿಚಾರಣಾ ನಿಧಿ ಸಲಹೆಗಾರರಾಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿ ಭಾರತಕ್ಕೆ ಕೀರ್ತಿ ತಂದುಕೊಟ್ಟಿದ್ದರು ಎಂದು ಸ್ಮರಿಸಿದ್ದಾರೆ.

ಭಾರತದ ಸರ್ವತೋಮುಖ ಅಭಿವೃದ್ಧಿಗೆ ಕಾರಣೀಭೂತರಾದ ಡಾ.ಮನ ಮೋಹನ್ ಸಿಂಗ್ ಮೌನ ಕ್ರಾಂತಿ ಮೂಲಕ ಆರ್ಥಿಕ ತಜ್ಞರಾಗಿ ಆಡಳಿತ ನಡೆಸಿರುವುದು ವಿಶ್ವಕ್ಕೆ ಮಾದರಿಯಾಗಿದೆ ಎಂದು ಜಿ.ಟಿ.ದೇವೇಗೌಡರು ಹೇಳಿದ್ದಾರೆ.

ಡಾ.ಮನಮೋಹನ್ ಸಿಂಗ್ ಅವರ ಬದುಕು, ಸೇವೆ ಮತ್ತು ಆಡಳಿತ ಇಂದಿನ ಪ್ರಜಾಪ್ರಭುತ್ವ ಸರ್ಕಾರಗಳಿಗೆ ಮಾದರಿಯಾಗಿದೆ. ಇಂದಿನ ಸರ್ಕಾರಗಳು ಅವರ ಮಾರ್ಗದರ್ಶನದಲ್ಲಿ ಜಾರಿಗೆ ತಂದಿರುವ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಮುಂದುವರೆಸುವ ಮೂಲಕ ಅವರ ಹೆಸರು ಅಜರಾಮರವಾಗಿ ಉಳಿವಂತಾಗಲೆಂದು ಆಶಿಸುತ್ತೇನೆ ಎಂದು ತಿಳಿಸಿದ್ದಾರೆ. ಡಾ.ಮನ ಮೋಹನ್ ಸಿಂಗ್ ಅವರ ಆತ್ಮಕ್ಕೆ ದೇವರು ಚಿರಶಾಂತಿ ನೀಡಲಿ, ಅವರ ಕುಟುಂಬ ವರ್ಗದವರಿಗೆ ಹಾಗೂ ಅಭಿಮಾನಿಗಳಿಗೆ ದುಃಖ ಭರಿಸುವ ಶಕ್ತಿ ನೀಡಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದು ಜಿ.ಟಿ.ದೇವೇಗೌಡರು ತಿಳಿಸಿದ್ದಾರೆ.

ಸಿಲಿಂಡರ್ ಸ್ಫೋಟದಲ್ಲಿ ಗಾಯಗೊಂಡಿದ್ದ ಮತ್ತೊಬ್ಬ ಅಯ್ಯಪ್ಪ ಭಕ್ತ ಸಾವು; ಮೃತರ ಸಂಖ್ಯೆ 3ಕ್ಕೆ ಏರಿಕೆ

ಹುಬ್ಬಳ್ಳಿ, ಡಿ.27– ಉಣಕಲ್‌ನ ಅಯ್ಯಪ್ಪ ದೇವಸ್ಥಾನದಲ್ಲಿ ಗ್ಯಾಸ್ ಸಿಲಿಂಡರ್ ಸ್ಫೋಟದಿಂದ ಗಾಯಗೊಂಡಿದ್ದ 9 ಮಂದಿ ಅಯ್ಯಪ್ಪ ಮಾಲಾಧಾರಿಗಳ ಪೈಕಿ ಮತ್ತೊಬ್ಬರು ಚಿಕಿತ್ಸೆಗೆ ಸ್ಪಂದಿಸದೆ ಸಾವಿಗೀಡಾಗಿದ್ದು, ಮೃತರ ಸಂಖ್ಯೆ ಮೂರಕ್ಕೆ ಏರಿಕೆಯಾಗಿದೆ. ಬೆಂಕಿ ಅವಘಡದಲ್ಲಿ ಗಾಯಗೊಂಡಿರುವ ಇನ್ನೂ ಆರು ಅಯ್ಯಪ್ಪ ಭಕ್ತರು ಕರ್ನಾಟಕ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ (ಕಿಮ್ಸ್) ಚಿಕಿತ್ಸೆ ಪಡೆಯುತ್ತಿದ್ದಾರೆ. ಗೃಹ ಸಚಿವ ಜಿ. ಪರಮೇಶ್ವರ ಅವರು ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದ್ದಾರೆ.

ಶೈಕ್ಷಣಿಕ ವಲಯದಿಂದ ಶ್ರದ್ಧಾಂಜಲಿ

ಮೈಸೂರು, ಡಿ.27(ಎಸ್‌ಪಿಎನ್)– ಮೈಸೂರು ಬೋಗಾದಿಯ ರಾಮನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಚೇರಿ ಆವರಣದಲ್ಲಿ ಕರ್ನಾಟಕ ರಾಜ್ಯ ಪಿಯು ಕಾಲೇಜು ಅರ್ಥಶಾಸ್ತ್ರ ಉಪನ್ಯಾಸಕರು ಹಾಗೂ ಪ್ರಾಂಶುಪಾಲರ ವೇದಿಕೆ, ರಾಮನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಹಯೋಗದಲ್ಲಿ ಗುರುವಾರ ರಾತ್ರಿ ನಿಧನರಾದ ಮಾಜಿ ಪ್ರಧಾನ ಮಂತ್ರಿ ಡಾ.ಮನಮೋಹನ್ ಸಿಂಗ್ ಅವರಿಗೆ ಶುಕ್ರವಾರ ಶ್ರದ್ಧಾಂಜಲಿ ಸಲ್ಲಿಸಿದರು.



ಮಾಜಿ ಪ್ರಧಾನ ಮಂತ್ರಿ ಡಾ.ಮನಮೋಹನ್ ಸಿಂಗ್ ಅವರಿಗೆ ಕರ್ನಾಟಕ ರಾಜ್ಯ ಪಿಯು ಕಾಲೇಜು ಅರ್ಥಶಾಸ್ತ್ರ ಉಪನ್ಯಾಸಕರು ಹಾಗೂ ಪ್ರಾಂಶುಪಾಲರ ವೇದಿಕೆ ವತಿಯಿಂದ ಶುಕ್ರವಾರ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಿವೃತ್ತ ಪ್ರಾಂಶುಪಾಲ ನಾಗೇಗೌಡ ನುಡಿನಮನ ಸಲ್ಲಿಸುತ್ತಾ, 1992ರಲ್ಲಿ ದಿವಾಳಿ ಅಂಚಿನಲ್ಲಿದ್ದ ದೇಶ ಆರ್ಥಿಕತೆಯನ್ನು ಸರಿದಾರಿಗೆ ತರುವಲ್ಲಿ ಡಾ.ಮನ ಮೋಹನ್‌ಸಿಂಗ್ ಅವರ ಪಾತ್ರ ಅಮೂಲ್ಯ ದೇಶದ ಅಭಿವೃದ್ಧಿಗೆ ಮುಕ್ತ ವ್ಯಾಪಾರ ಮಾರುಕಟ್ಟೆ ವಹಿವಾಟು ಹಾಗೂ ಸುಸ್ಥಿರ ಅಭಿವೃದ್ಧಿಗೆ ನೀಡಿದ ಕೊಡುಗೆಗಳು ಸ್ಮರಣೀಯ ಎಂದರು.

ನಿವೃತ್ತ ಪ್ರಾಂಶುಪಾಲ ಕೆ.ಶಿವೇಗೌಡ ಅವರು, ದೇಶದ ಹಣಕಾಸು ಸಚಿವರಾಗಿ, ಪ್ರಧಾನಮಂತ್ರಿಯಾಗಿ ಮೌನವಾಗಿದ್ದುಕೊಂಡೇ ಆರ್ಥಿಕ ಕ್ರಾಂತಿಗೆ ಡಾ.ಮನ ಮೋಹನ್ ಸಿಂಗ್ ಹೊಸ ದಿಕ್ಕು ತೋರಿದ ಶ್ರೇಷ್ಠ ಆರ್ಥಿಕ ತಜ್ಞರಲ್ಲಿ ಒಬ್ಬರು. ಕಡ್ಡಾಯ ಶಿಕ್ಷಣ ಹಕ್ಕು, ಬಡವರ ಹಸಿವು ನೀಡಲು ಆಹಾರ ಭದ್ರತಾ ಕಾಯ್ದೆ ತರುವಲ್ಲಿ ಸಿಂಗ್ ಅವರ ಪಾತ್ರ ಪ್ರಮುಖವಾಗಿದೆ ಎಂದು ನುಡಿನಮನ ಸಲ್ಲಿಸಿದರು.

ರಾಮನ್ ಸಂಸ್ಥೆಯ ಗೋಪಿನಾಥ್ ನುಡಿನಮನ ಸಲ್ಲಿಸುತ್ತಾ, ಡಾ. ಮನ ಮೋಹನ್ ಸಿಂಗ್ ಅವರು ಆರ್ಥಿಕತೆ ಮಾತ್ರವಲ್ಲ, ತಂತ್ರಜ್ಞಾನದ ಅಭಿವೃದ್ಧಿಗೂ ಬದ್ಧರಾಗಿದ್ದರು. ಹೊಸ ತಂತ್ರಜ್ಞಾನಗಳನ್ನು ಅರ್ಥಶಾಸ್ತ್ರದ ಜತೆಗೆ ಹೊಂದಾಣಿಕೆ ಮಾಡಲು ಅವರು ತೆಗೆದುಕೊಂಡ ಹೆಜ್ಜೆಗಳು ಆದರ್ಶ ಪ್ರಾಯವಾಗಿದೆ ಎಂದು ಹೇಳಿದರು. ಈ ವೇಳೆ ಹಲಗನಹಳ್ಳಿ ಪಿಯು ಕಾಲೇಜಿನ ಪ್ರಾಂಶುಪಾಲ ಡಿ.ಎ.ದಿನೇಶ್, ಗಾವಡಗೆರೆ ಪಿಯು ಕಾಲೇಜಿನ ಪ್ರಾಂಶುಪಾಲ ಜನಾರ್ಧನ, ಕಾರ್ಯ ಪಿಯು ಕಾಲೇಜಿನ ಪ್ರಾಂಶುಪಾಲ ನಾಗರಾಜ್ ಹಾಗೂ ಹಿರಿಯ ಉಪನ್ಯಾಸಕರಾದ ಸಿ.ಜೆ.ರೇವಣ್ಣ, ಲೋಕೇಶ್ ಹೆಬ್ಬಾಳು, ಗೋಪಾಲ್ ಇಲವಾಲ, ಮತ್ತು ವೆಂಕಟೇಶ್ ಸೇರಿದಂತೆ ಇತರರು ಡಾ. ಮನ ಮೋಹನ್ ಸಿಂಗ್ ಅವರ ವ್ಯಕ್ತಿತ್ವ ಹಾಗೂ ಸೇವೆಗಳನ್ನು ಸ್ಮರಿಸಿದರು.

ಡಾ.ಮನಮೋಹನ್ ಸಿಂಗ್, ಎಸ್.ಎಂ.ಕೃಷ್ಣರಿಗೆ ನಮನ



ಮಾಜಿ ಪ್ರಧಾನಮಂತ್ರಿ ಡಾ.ಮನಮೋಹನ್ ಸಿಂಗ್ ಹಾಗೂ ಇತ್ತೀಚೆಗೆ ನಿಧನರಾದ ಮಾಜಿ ವಿದೇಶಾಂಗ ಸಚಿವ ಎಸ್.ಎಂ.ಕೃಷ್ಣ ಅವರಿಗೆ ಶಿವಸನ್ನಿಧಿ ಸ್ನೇಹ ಬಳಗದ ವತಿಯಿಂದ ಶುಕ್ರವಾರ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು, ಡಿ.27(ಎಸ್‌ಪಿಎನ್)– ಗುರುವಾರ ನಿಧನರಾದ ಮಾಜಿ ಪ್ರಧಾನಮಂತ್ರಿ ಡಾ.ಮನಮೋಹನ್ ಸಿಂಗ್ ಹಾಗೂ ಇತ್ತೀಚೆಗೆ ನಿಧನರಾದ ಮಾಜಿ ವಿದೇಶಾಂಗ ಸಚಿವ ಎಸ್.ಎಂ. ಕೃಷ್ಣ ಅವರಿಗೆ ಶಿವಸನ್ನಿಧಿ ಸ್ನೇಹ ಬಳಗದ ವತಿಯಿಂದ ಶುಕ್ರವಾರ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು ಅಗ್ರಹಾರದಲ್ಲಿರುವ ಅನಿಕೇತನ ಕಚೇರಿ ಆವರಣದಲ್ಲಿ ಕೆ.ಆರ್. ಬ್ಯಾಂಕ್‌ನ ನಿರ್ದೇಶಕ ಪ್ರತಿಧ್ವನಿ ಪ್ರಸಾದ್ ನುಡಿನಮನ ಸಲ್ಲಿಸುತ್ತಾ, ಕರ್ನಾಟಕದ ಏಳಿಗೆಗೆ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಕೊಡುಗೆ ಅಪಾರ.ಅಲ್ಲದೆ, ಮಾಜಿ ಪ್ರಧಾನಮಂತ್ರಿ ಡಾ.ಮನ ಮೋಹನ್ ಸಿಂಗ್ ಅವರು, ಜಗತ್ತಿನಲ್ಲಿ ಇಂದು ಭಾರತ 5ನೇ ರಾಷ್ಟ್ರವಾಗಿ ಗುರುತಿಸಿಕೊಳ್ಳಲು ಅವರ ಕೊಡುಗೆಯೂ ಸೇರಿದೆ ಎಂದರು.

ಈ ವೇಳೆ ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮೈಸೂರು ಘಟಕದ ಮಾಜಿ ಅಧ್ಯಕ್ಷ ಕಾನ್ಯ ಎಸ್.ಶಿವಮೂರ್ತಿ, ವೀರಶೈವ ಸ್ನೇಹ ಬಳಗದ ಸುರೇಶ್ ವಾಲಿ, ಕಸಾಪ ಮಾಜಿ ಅಧ್ಯಕ್ಷ ಟಿ.ಚಂದ್ರಶೇಖರ್, ಮುಖಂಡರಾದ ರೊ.ಆಯರಹಳ್ಳಿ ಪಿ ವಿರೂಪಾಕ್ಷ ಕಲ್ಮಳಿ ನಟರಾಜ್, ಬಿ.ಆರ್.ಶಿವಕುಮಾರ್ ಸೇರಿದಂತೆ ಹಾಜರಿದ್ದರು.

ಡಾ. ಸಿಂಗ್ ಸ್ವಯಂ ಪ್ರಚಾರವಿಲ್ಲದೇ ದೇಶಸೇವೆ ಮಾಡಿದ್ದರು

ಧರ್ಮಸ್ಥಳ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಸಂತಾಪ

ಹುಬ್ಬಳ್ಳಿ: ಮಾಜಿ ಪ್ರಧಾನಿ ಹಾಗೂ ಶ್ರೇಷ್ಠ ಆರ್ಥಿಕ ತಜ್ಞ ಡಾ. ಮನಮೋಹನ್ ಸಿಂಗ್ ಅವರ



ನಿಧನಕ್ಕೆ ರಾಜ್ಯಸಭಾ ಸದಸ್ಯರೂ ಆಗಿರುವ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಕಂಬನಿ ಮಿಡಿದರು.

ಹುಬ್ಬಳ್ಳಿಯ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಮನಮೋಹನ್ ಸಿಂಗ್ ಅವರು ಸ್ವಯಂ ಪ್ರಚಾರ ಮಾಡಿಕೊಳ್ಳದೇ, ಪ್ರಶಸ್ತಿಗಳನ್ನ ಸ್ವೀಕಾರ ಮಾಡದೇ ದೇಶಸೇವೆ ಮಾಡಿದರು. ರಾಜ್ಯಸಭೆಗೆ ವ್ಹೀಲ್‌ಚೇರ್‌ನಲ್ಲೇ ಬಂದು ಕುಳಿತುಕೊಳ್ಳುತ್ತಿದ್ದರು. ತಾವು ಪ್ರಧಾನಿಯಾಗಿದ್ದಾಗ ಅನೇಕ ಕಠಿಣ ಕಾನೂನುಗಳನ್ನ ಜಾರಿಗೊಳಿಸಿದರು. ಆರ್ಥಿಕತೆಯಲ್ಲಿ ಪ್ರಗತಿ ತಂದರಲ್ಲದೇ ದೇಶದ ಸುಸ್ಥಿರ ಅಭಿವೃದ್ಧಿ ಚಿಂತನೆ ಮಾಡುತ್ತಿದ್ದರು ಎಂದು ಸ್ಮರಿಸಿದರು.

ಈ ಹಿಂದೆ ಧರ್ಮಸ್ಥಳಕ್ಕೆ ಬಂದಿದ್ದಾಗ 'ಗ್ರಾಮ ಭಾರತ' ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಅವರು ದೇಶದ ಪ್ರಧಾನಿ ಆದ ಬಳಿಕ ದೇಶ ಬಹಳ ಅದ್ಭುತ ಆರ್ಥಿಕ ಪ್ರಗತಿ ಕಂಡಿದೆ ಎಂದು ನುಡಿದರು.

ಇಂದು ದೇಶ ಶ್ರೇಷ್ಠ ಆರ್ಥಿಕ ತಜ್ಞನನ್ನ ಕಳೆದುಕೊಂಡಿದೆ. ಆದ್ರೆ ಅವರು ಹಾಕಿದ ಬೀಜ ವೃಕ್ಷವಾಗಿ ಬೆಳೆದು ನಮ್ಮ ದೇಶಕ್ಕೆ ಶಕ್ತಿ ಕೊಡುತ್ತಿದೆ. ಹಾಗಾಗಿ ಇದು ಸಭೆಯಲ್ಲ, ಅವರಿಗೆ ಗೌರವ ಹಾಗೂ ಸಂತಾಪ ಸೂಚಿಸುವ ಕಾರ್ಯಕ್ರಮವಾಗಿದೆ. ದೇಶಕ್ಕಾಗಿ ದುಡಿದ ಅವರನ್ನ ನಾವೆಲ್ಲ ಸ್ಮರಿಸಬೇಕು ಎಂದು ನೆನೆದರು.

ಮನಮೋಹನ್‌ಸಿಂಗ್ ಆರ್ಥಿಕ ಸುಧಾರಣೆಗಳನ್ನು ಗೌರವಿಸುವ ಸಂಶೋಧನಾ ಕೇಂದ್ರ ಸ್ಥಾಪನೆ

ಬೆಳಗಾವಿ, ಡಿ.27–ದೇಶದ ಬೆಳವಣಿಗೆಗಾಗಿ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರು ರಚಿಸಿದ ಸುಧಾರಣೆಗಳ ಬಗ್ಗೆ ಎಲ್ಲಾ ವಿದ್ಯಾರ್ಥಿಗಳು ಕಲಿಯಲು ನೆರವಾಗುವಂತೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆ ಮತ್ತು ಅಧ್ಯಯನ ಕೇಂದ್ರವನ್ನು ಪ್ರಾರಂಭಿಸುವುದಾಗಿ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಶುಕ್ರವಾರ ಹೇಳಿದ್ದಾರೆ. ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮನಮೋಹನ್ ಸಿಂಗ್ ಅವರು ದೇಶಕ್ಕೆ ನೀಡಿರುವ ಕೊಡುಗೆಯನ್ನು ಎಂದಿಗೂ ಬದಲಾಯಿಸಲು ಸಾಧ್ಯವಿಲ್ಲ ಎಂದರು. ಹಣೆಬರಹ ನಮ್ಮ ಕೈಯ್ಯಲ್ಲಿಲ್ಲ. ಆದರೆ, ಮನಮೋಹನ್ ಸಿಂಗ್ ಅವರು ಇನ್ನಿಲ್ಲವಾದರೂ ಅವರು ಜೀವಂತವಾಗಿದ್ದಾರೆ ಎಂದು ಹೇಳಲು ನಾನು ಹೆಮ್ಮೆ ಪಡುತ್ತೇನೆ. ದೇಶಕ್ಕೆ ಅವರು ನೀಡಿರುವ ಕೊಡುಗೆಗಳನ್ನು ಬದಲಾಯಿಸಲಾಗುವುದಿಲ್ಲ. ದೇಶದ ಬೆಳವಣಿಗೆಗಾಗಿ ಅವರು ರಚಿಸಿದ ಸುಧಾರಣೆಗಳ ಬಗ್ಗೆ ಕಲಿಯಲು ಎಲ್ಲಾ ವಿದ್ಯಾರ್ಥಿಗಳಿಗೆ ನೆರವಾಗುವಂತೆ ಬೆಂಗಳೂರು ವಿಶ್ವವಿದ್ಯಾ



ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ಲಯದಲ್ಲಿ ನಾವು ಸಂಶೋಧನೆ ಮತ್ತು ಅಧ್ಯಯನ ಕೇಂದ್ರವನ್ನು ಪ್ರಾರಂಭಿಸಲಿದ್ದೇವೆ ಎಂದು ಅವರು ಹೇಳಿದರು.

ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಸಂಪುಟದ ಮಾಜಿ ಕ್ಯಾಬಿನೆಟ್ ಕಾರ್ಯದರ್ಶಿ ಕೆಎಂ ಚಂದ್ರಶೇಖರ್, ಡಾ.ಸಿಂಗ್ ಎಂದಿಗೂ ಯಾವುದಕ್ಕೂ ಕ್ರೆಡಿಟ್ ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ. ನಾನು ಕೇರಳದಲ್ಲಿ ಹಣಕಾಸು ಕಾರ್ಯದರ್ಶಿಯಾಗಿದ್ದಾಗ ಅವರೊಂದಿಗಿನ ನನ್ನ ಸಂಬಂಧವು ಪ್ರಾರಂಭವಾಯಿತು. ಅವರು ತುಂಬಾ ಸಹಾಯಕರಾಗಿದ್ದರು. ಅವರ ಗುಣವೆಂದರೆ ಅವರು ಸಹಾಯ ಮಾಡುವುದು ಮಾತ್ರವಲ್ಲದೆ, ರಾಜ್ಯಗಳು ಮತ್ತು ಜನರಿಗೆ ಅಗತ್ಯವಿರುವ ಸಹಾಯದ ಬಗ್ಗೆ ಯೋಚಿಸುತ್ತಾರೆ.

ದೇಶದ ಆರ್ಥಿಕ ಇತಿಹಾಸದಲ್ಲಿ ಹಿಂದೆಂದೂ ಸಂಭವಿಸದ ದೊಡ್ಡ ಬದಲಾವಣೆಯನ್ನು 1991ರಲ್ಲಿ ಅವರು ಮಾಡಿದರು. ಅವರು ಎಂದಿಗೂ ಕ್ರೆಡಿಟ್ ತೆಗೆದುಕೊಂಡಿಲ್ಲ. ಅವರು ಜನರ ಸಲಹೆ ಮತ್ತು ವ್ಯಾಪಕ ಸಮಾಲೋಚನೆಗಳನ್ನು ನಡೆಸಿದ ನಂತರವೇ ನಿರ್ಧಾರಗಳನ್ನು ತೆಗೆದುಕೊಂಡರು ಎಂದು ಅವರು ಹೇಳಿದರು.

ಬೊಲೆರೋ ಡಿಕ್ಕಿ: ಬೈಕ್ ಸವಾರ ಸಾವು



ನಾಗಮಂಗಲ, ಡಿ.27– ಬೊಲೆರೋ ವಾಹನವೊಂದು ಹೀರೋ ಹೊಂಡಾ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಪುರಸಭೆ ವ್ಯಾಪ್ತಿಯ ಕೆ.ಮಲ್ಲೇನಹಳ್ಳಿ ತಿರುವಿನಲ್ಲಿ ಸಂಭವಿಸಿದೆ.

ತಾಲೂಕಿನ ಸಂಕನಹಳ್ಳಿ ಗ್ರಾಮದ ಜವರೇಗೌಡ(67) ಎಂಬುವರೇ ಮೃತ ದುರ್ದೈವಿ.

ಶುಕ್ರವಾರ ಸಂಜೆ ನಾಗಮಂಗಲದಿಂದ ಜವರೇಗೌಡರು ತಮ್ಮ ಗ್ರಾಮವಾದ ಸಂಕನಹಳ್ಳಿ ಗ್ರಾಮಕ್ಕೆ ಬೈಕ್‌ನಲ್ಲಿ ಹೋಗುತ್ತಿದ್ದಾಗ ಮೈಸೂರಿನಿಂದ ಕೊಪ್ಪಳಕ್ಕೆ ಹೋಗುತ್ತಿದ್ದ ಬೊಲೆರೋ ವಾಹನ ಕೆ.ಮಲ್ಲೇನಹಳ್ಳಿ ತಿರುವಿನಲ್ಲಿ ಡಿಕ್ಕಿ ಹೊಡೆದ ಪರಿಣಾಮ ಮೃತಪಟ್ಟಿದ್ದು ನಾಗಮಂಗಲ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸತ್ಯದ ಅರಿವಿಗಾಗಿ ಮೋಹವನ್ನು ತ್ಯಜಿಸಿ

ಮಂಡ್ಯ,ಡಿ.27– ಹಿಂದಿನ ಹಲವು ಜನ್ಮಗಳ ಪುಣ್ಯದ ಫಲದಿಂದ ಜಗತ್ತಿನಲ್ಲಿರುವ ಹಲವಾರು ಜೀವರಾಶಿಗಳ ಪೈಕಿ ಎತ್ತರದ ಸ್ಥಾನದಲ್ಲಿರುವ ಮನುಷ್ಯ ಜಗತ್ತಿನ ಸುಖದ ಮೋಹಕ್ಕೆ ಸಿಲುಕಿದ್ದಾನೆ. ಮನುಷ್ಯ ಜೀವಿಯೊಳಗೆ ಇರುವ ಸತ್ವವನ್ನು ಅರಿಯಲು ಮೋಹವನ್ನು ತ್ಯಜಿಸಬೇಕಾದ ಅನಿವಾರ್ಯತೆ ನಮ್ಮೆಲ್ಲರ ಮುಂದಿದೆ ಎಂದು ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಡಾ.ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಅಭಿಪ್ರಾಯಿಸಿದರು.

ನಗರದ ಕಲ್ಲಹಳ್ಳಿ ಗ್ರಾಮದಲ್ಲಿ ಆಯೋಜನೆಗೊಂಡಿದ್ದ ಶ್ರೀ ಮಂಚಮ್ಮ ದೇವರ 48ನೇ ದಿನದ ಮಂಡಲ ಪೂಜಾ ಕಾರ್ಯಕ್ರಮದ ಅಂಗವಾಗಿ ಜರುಗಿದ ಧರ್ಮ ಪ್ರವಚನ ಸಾನಿಧ್ಯ ವಹಿಸಿ ಅವರು ಆಶೀರ್ವಚಿಸಿದರು.

ಜಗತ್ತಿನ ಹಲವು ಜೀವರಾಶಿಗಳ ಪೈಕಿ ಮನುಷ್ಯನನ್ನು ಹೊರತುಪಡಿಸಿ ಉಳಿದ ಜೀವಿಗಳ ದೇಹಗಳು ಭೋಗಕ್ಕೋಸ್ಕರ ಜೀವನ ನಡೆಸುತ್ತವೆ. ಅದು ಅಜ್ಞಾನದ ಫಲ. ಹಲವು ಜನ್ಮಗಳ ಪುಣ್ಯದ ಫಲವಾಗಿ ಮನುಷ್ಯನ ಜೀವ ಸೃಷ್ಟಿ ವಿಕಾಸದ ಪ್ರಕ್ರಿಯೆ ಹಾಗೂ ವಿಜ್ಞಾನದ ವಿಕಾಸದ ಪ್ರಕ್ರಿಯೆಯಲ್ಲಿ ಉನ್ನತ



ಮಂಡ್ಯದ ಕಲ್ಲಹಳ್ಳಿ ಗ್ರಾಮದಲ್ಲಿ ನಡೆದ ಶ್ರೀ ಮಂಚಮ್ಮ ದೇವರ 48ನೇ ದಿನದ ಮಂಡಲ ಪೂಜೆಯ ಧರ್ಮ ಪ್ರವಚನ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿದರು.

ಹಂತ ತಲುಪಿದೆ. ಇದು ಹಲವು ಜನ್ಮಗಳ ಪುಣ್ಯವನ್ನು ಅಡವಿಟ್ಟು ಪಡೆದಿರುವ ಫಲವಾಗಿದೆ ಎಂದು ವಿವರಿಸಿದರು.

ಇಂತಹ ಪುಣ್ಯದ ಮನುಷ್ಯ ಜನ್ಮವನ್ನು ಪ್ರಾಣಿಗಳ ರೀತಿಯಲ್ಲೇ ಭೋಗದ ಜೀವನಕ್ಕೆ ಮೀಸಲಾಗಿಟ್ಟರೆ ವ್ಯರ್ಥವಾದೇನು ಎಂದು ಪ್ರಶ್ನಿಸಿದ ಅವರು, ಮನುಷ್ಯ ಜನ್ಮವನ್ನು ನೀಡಿರುವ ಪರಮಾತ್ಮನನ್ನು ಸದಾಕಾಲ ಸ್ಮರಿಸುವ ಗುಣ ಹೊಂದಿರಬೇಕೆಂದರು.

ಮನುಷ್ಯ ಅಲ್ಪ ಗುರಿ ಮತ್ತು ಸಾಧನೆಗೆ ತೃಪ್ತಿ ಹೊಂದದೇ ಉನ್ನತ ಗುರಿ ಮತ್ತು ಸಾಧನೆಯ ಹಂಬಲ ಹೊಂದಬೇಕು. ಚನ್ನಕೃಷ್ಣನ ವಜ್ರ ಶ್ರೇಷ್ಠವೆಂಬ ಅರಿವಿನಂತೆ ನಮ್ಮ ಶ್ರದ್ಧೆ ಮತ್ತು ಗುರು ಉನ್ನತವಾಗಿರಬೇಕೆಂದರು.

ನಮ್ಮ ಬದುಕು ಚೆನ್ನಾಗಿರಲು ಗಾಳಿ, ನೀರು, ಬೆಳಕು, ಆಹಾರ ನೀಡಿರುವ ದೇವರಿಗೆ ಧನ್ಯವಾದ ಹೇಳದೆ ಮತ್ತಷ್ಟು ಕರುಣಿಸುತ್ತಾನೆ ಎಂಬ ಭಾವನೆಯನ್ನು ನಾವೆಲ್ಲರೂ ರೂಢಿಸಿಕೊಳ್ಳಬೇಕು. ಸಂಪತ್ತು ಮತ್ತು ಜ್ಞಾನ ಬಂದ ವೇಳೆ ಅಹಂಕಾರ ಬಂದರೆ ಕೃತಜ್ಞರಾದರೆ, ಜ್ಞಾನಿಯಾಗದಿದ್ದರೆ ಭಗವಂತ ಮನಸ್ಸು ಹಾಗೂ ಬುದ್ಧಿಯನ್ನು ಕೆಡಿಸುತ್ತಾನೆಂಬ ಅರಿವು ನಮ್ಮೆಲ್ಲರಿಗಿರಬೇಕೆಂದರು.

ಕ್ಲೇಶದಿಂದ ಕೂಡಿರುವ ನಮ್ಮ ಮನಸ್ಸನ್ನು ಶುದ್ಧೀಕರಿಸಲು ದೇವರ ಜೊತೆ ಹೋಗಬೇಕು ಎಂಬ ಅಭಿಲಾಷೆಯಿಂದ ನಮ್ಮ ಹಿರಿಯರು ಹಲವು ಪರಂಪರೆಯನ್ನು ನಮಗೆ ಕರುಣಿಸಿದ್ದಾರೆ. ನಮ್ಮ ಮನಸ್ಸು ಎಲ್ಲವನ್ನು ಬೇಗ ಮರೆಯುವ ಗುಣ ಹೊಂದಿದ್ದು ಜನ್ಮ ನೀಡಿದ ತಂದೆ, ತಾಯಿಗಳನ್ನು, ಸಹಾಯ ಮಾಡಿದವರನ್ನು ಮರೆಯುತ್ತೇವೆ, ಇದೇ ರೀತಿ ಮನುಷ್ಯ ಜನ್ಮ ಕರುಣಿಸಿದ ಭಗವಂತನನ್ನು ಮರೆಯಬಾರದೆಂಬ ದೃಷ್ಟಿಯಿಂದ ನಮ್ಮ ಅಹಂ ತಗ್ಗಿಸಲು ದೇವಾಲಯಗಳನ್ನು ನಮ್ಮ ಪೂರ್ವಿಕರು ನಿರ್ಮಿಸಿ ಹೋಗಿದ್ದಾರೆ.

ಕಲ್ಲಹಳ್ಳಿ ಗ್ರಾಮಸ್ಥರು ನೂತನವಾಗಿ ಶ್ರೀ ಮಂಚಮ್ಮದೇವಿ ದೇವಾಲಯ ನಿರ್ಮಾಣ ಮಾಡಿ ಲೋಕಾರ್ಪಣೆಗೊಂಡ ನಂತರ 48 ದಿನಗಳ ಕಾಲ ಮಂಡಲ ಪೂಜೆ ನೆರವೇರಿಸಿದ್ದಾರೆ, ಅದೇ ರೀತಿ ದೇವಿಯ ಮುಂದೆ ಮನಸ್ಸನ್ನು ಶುದ್ಧಗೊಳಿಸುವ ರೀತಿಯಲ್ಲಿ ಜೀವನ ನಡೆಸಬೇಕು. ನಮ್ಮ ಮನಸ್ಸಿನಲ್ಲಿರುವ ಹಲವು ಆಲೋಚನೆಗಳನ್ನು ನಿಯಂತ್ರಿಸಿ ಮನಸ್ಸನ್ನು ಶುದ್ಧವಾಗಿಟ್ಟುಕೊಳ್ಳಬೇಕೆಂದು ಕಿವಿಮಾತು ಹೇಳಿದರು.

ಶ್ರೀ ಮಠದ ಸಾಯಿ ಕೀರ್ತಿಜೀ ಮತ್ತು ಶಿವಾರ ಉಮೇಶ್ ತಂಡದವರಿಂದ ಭಕ್ತಿಗೀತೆಗಳನ್ನು ಭೋದಿಸಲಾಯಿತು.

ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಕಾರ್ಯದರ್ಶಿ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ, ಕರ್ನಾಟಕ ಸಂಘದ ಅಧ್ಯಕ್ಷ ಬಿ.ಜಯಪ್ರಕಾಶ ಗೌಡ, ನಗರಸಭೆ ಅಧ್ಯಕ್ಷ ನಾಗೇಶ್, ಉಪಾಧ್ಯಕ್ಷ ಅರುಣ್ ಕುಮಾರ್, ಸದಸ್ಯರಾದ ರವಿ, ಶಿವಲಿಂಗು, ಪತ್ರಕರ್ತರಾದ ಕೆ.ಸಿ.ಮಂಜುನಾಥ್, ಸಿ.ಎನ್.ಮಂಜುನಾಥ್, ಗ್ರಾಮದ ಮುಖಂಡ ಕೆ.ಗುರುಸ್ವಾಮಿ, ಶ್ರೀಮಂಚಮ್ಮದೇವಿ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಕೆ.ರಾಮಲಿಂಗಯ್ಯ, ಗೌರವಾಧ್ಯಕ್ಷ ಕೆ.ಎಲ್.ಶಿವರುದ್ರು, ಪ್ರಧಾನ ಕಾರ್ಯದರ್ಶಿ ಕೆ.ಎಸ್.ಆನಂದ, ಕಾರ್ಯದರ್ಶಿ ಕೆ.ಸಿ.ರವೀಂದ್ರ ಟ್ರಸ್ಟಿಗಳಾದ ಕೆ.ಎಂ.ಉಮೇಶ್, ಕಿರಣ್ ಉಪಸ್ಥಿತರಿದ್ದರು.


ನಾಳೆ ಗೆಜೆಟೆಡ್ ಪ್ರೊಬೇಷನರ್ ಪರೀಕ್ಷೆ

ಮಂಡ್ಯ,ಡಿ.27– ಜಿಲ್ಲೆಯಲ್ಲಿ ಡಿ.29ರಂದು ಕರ್ನಾಟಕ ಲೋಕಸೇವಾ ಆಯೋಗದಿಂದ 2023–24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ಹುದ್ದೆಗಳ ಪೂರ್ವಭಾವಿ ಪರೀಕ್ಷೆ ನಡೆಯಲಿದ್ದು, ಪರೀಕ್ಷೆಗಳನ್ನು ಪಾರದರ್ಶಕವಾಗಿ ಯಾವುದೇ ಅವ್ಯವಹಾರಗಳಿಗೆ ಅಸ್ಪದ ನೀಡದೆ ನಿಷ್ಪಕ್ಷಪಾತವಾಗಿ ನಡೆಸಲು ಸಿದ್ಧತೆ ಮಾಡಿಕೊಳ್ಳಿ ಎಂದು ಅಪರ ಜಿಲ್ಲಾಧಿಕಾರಿ ಡಾ ಬಿ.ಸಿ.ಶಿವಾನಂದ ಮೂರ್ತಿ ಸೂಚಿಸಿದರು.

ಗೆಜೆಟೆಡ್ ಪ್ರೊಬೇಷನರ್ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ವೃಂದದ 384 ಹುದ್ದೆಗಳ ಪೂರ್ವಭಾವಿ ಪರೀಕ್ಷೆ ಬಗ್ಗೆ ಸಭೆ ನಡೆಸಿ ಮಾತನಾಡಿದ ಅವರು, ಪರೀಕ್ಷೆ ನಡೆಸಲು ಮಂಡ್ಯ ಜಿಲ್ಲೆಯಲ್ಲಿ 12 ಪರೀಕ್ಷಾ ಕೇಂದ್ರಗಳನ್ನು ಗುರುತಿಸಲಾಗಿದ್ದು, ಒಟ್ಟು 6971 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ, ಪರೀಕ್ಷೆಯು ಬೆಳಗ್ಗೆ 10 ರಿಂದ 12 ಗಂಟೆವರೆಗೆ ಪತ್ರಿಕೆ–1 ಮತ್ತು ಮಧ್ಯಾಹ್ನ 2 ರಿಂದ ಸಂಜೆ 4 ಗಂಟೆವರೆಗೆ ಪತ್ರಿಕೆ–2 ಪರೀಕ್ಷೆ ನಡೆಯಲಿದೆ. ಪರೀಕ್ಷೆಯನ್ನು ಯಾವುದೇ ರಾಜಿ ಯಿಲ್ಲದಂತೆ ನ್ಯಾಯ ಸಮ್ಮತವಾಗಿ ನಿಷ್ಪಕ್ಷಪಾತವಾಗಿ ಪಾರದರ್ಶಕತೆಯಿಂದ ನಡೆಸಿ ಎಂದು ನಿರ್ದೇಶನ ನೀಡಿದರು.

ಇಂದಿನಿಂದ ಅಂತರ ರಾಜ್ಯ ಮಟ್ಟದ ಜೋಡಿ ಎತ್ತಿನ ಗಾಡಿ ಸ್ಪರ್ಧೆ

ಪಾಂಡವಪುರ: ತಾಲೂಕಿನ ಶ್ಯಾದನಹಳ್ಳಿ ಗ್ರಾಮದ ದಣ್ಣಮ್ಮ ಯುವಕರ ಬಳಗ ದೋಸ್ತಿ ದರ್ಬಾರ್ ವತಿಯಿಂದ ಡಿ.28 ಮತ್ತು 29ರಂದು ಪ್ರಥಮ ಬಾರಿಗೆ ಅಂತರ ರಾಜ್ಯ ಮಟ್ಟದ ಜೋಡಿ ಎತ್ತಿನಗಾಡಿ ಓಟದ ಸ್ಪರ್ಧೆಯನ್ನು ಆಯೋಜಿಸಲಾಗಿದೆ.



ಶ್ಯಾದನಹಳ್ಳಿ ಗ್ರಾಮದ ಹೊರವಲಯದಲ್ಲಿ ನಡೆಯುವ ಅಂತರ ರಾಜ್ಯ ಮಟ್ಟದ ಜೋಡಿ ಎತ್ತಿನಗಾಡಿ ಓಟದ ಸ್ಪರ್ಧೆಗೆ ಡಿ.28 ರಂದು ಮಧ್ಯಾಹ್ನ 2 ಗಂಟೆಗೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಶಾಸಕ ದರ್ಶನ್ ಪುಟ್ಟಣ್ಣಯ್ಯ, ಬಿಜೆಪಿ ಮುಖಂಡ ಸಚ್ಚಿದಾನಂದ, ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಮಹಾದೇಶ್, ವಿಜಯಕಾಳಿ ದೇವಸ್ಥಾನದ ಗುರೂಜಿ ರಾಜೇಶ್ ಗುರೂಜಿ ಅವರುಗಳು ಚಾಲನೆ ನೀಡಲಿದ್ದಾರೆ.

ಜೋಡಿ ಎತ್ತಿನಗಾಡಿ ಓಟದ ಸ್ಪರ್ಧೆಗೆ ಎಲ್ಲಾ ಸಿದ್ಧತೆ ಪೂರ್ಣಗೊಂಡಿದೆ. ಡಿ.28 ರಂದು ಶನಿವಾರ ಮಧ್ಯಾಹ್ನ ಸ್ಪರ್ಧೆ ಆರಂಭಗೊಂಡರೆ ಡಿ.29 ಭಾನುವಾರದ ಸಂಜೆಯವರೆಗೂ ನಡೆಯಲಿದೆ. ಸ್ಪರ್ಧೆಯಲ್ಲಿ ಭಾಗವಹಿಸುವ ಜೋಡಿ ಎತ್ತಿನಗಾಡಿಗಳಿಗೆ 3500 ನೋಂದಣಿ ಶುಲ್ಕ ನಿಗಧಿಪಡಿಸಲಾಗಿದೆ. 11 ಗಂಟೆಯ ನಂತರ ಬಂದರೆ ಹೆಚ್ಚುವರಿಯಾಗಿ 500 ಪ್ರವೇಶಾತಿ ಶುಲ್ಕ ನೀಡಬೇಕು., ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾಗುವ ಜೋಡಿ ಎತ್ತಿನಗಾಡಿ ಮಾಲೀಕರಿಗೆ ಪ್ರಥಮ ಬಹುಮಾನ 60 ಸಾವಿರ ನಗದು ಹಾಗೂ ಟ್ರೋಫಿ, ದ್ವಿತೀಯ ಸ್ಥಾನ 40 ಸಾವಿರ ನಗದು, ಟ್ರೋಫಿ, ತೃತೀಯ ಸ್ಥಾನ 30 ಸಾವಿರ ನಗದು, ಟ್ರೋಫಿ, ನಾಲ್ಕನೇ ಸ್ಥಾನ 15 ಸಾವಿರ ನಗದು, ಟ್ರೋಫಿ ಹಾಗೂ ಐದನೇ ಬಹುಮಾನ 10 ಸಾವಿರ ನಗದು ಹಾಗೂ ಟ್ರೋಫಿ ನೀಡಲಾಗುವುದು.

ಸ್ಪರ್ಧೆಗೆ ಶ್ಯಾದನಹಳ್ಳಿ ಗ್ರಾಮದ ಯಜಮಾನರು, ಮುಖಂಡರು, ಯುವಕರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಸಹಕಾರ ನೀಡಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 9380413072, 9591470780ಗೆ ಸಂಪರ್ಕಿಸುವಂತೆ ಗ್ರಾಮದ ಮುಖಂಡರು ಮನವಿ ಮಾಡಿದ್ದಾರೆ.


ಕೆಆರ್‌ಎಸ್‌ನಲ್ಲಿ ಮನಮೋಹನ್ ಸಿಂಗ್‌ಗೆ ಅಗೌರವ

ಶೋಕಾಚರಣೆ ಮರೆತು ಸಂಗೀತ ಕಾರಂಜಿಯಲ್ಲಿ ಮೋಜು ಮಸ್ತಿ

ಶ್ರೀರಂಗಪಟ್ಟಣ, ಡಿ.27– ರಾಷ್ಟ್ರೀಯ ಶೋಕಾಚರಣೆಯನ್ನು ಮರೆತರು, ಸಂಗೀತ ಕಾರಂಜಿಯ ಮೋಜು ಮಸ್ತಿಯಲ್ಲಿ ಮಿಂದೆದ್ದರು.

ಇದು ತಾಲೂಕಿನ ಕೆಆರ್‌ಎಸ್‌ನಲ್ಲಿ ಕಂಡು ಬಂದ ದೃಶ್ಯ. ಈ ಮೂಲಕ ನಾಡನ್ನು ಅಗಲಿದ ಆರ್ಥಿಕ ತಜ್ಞ ಡಾ.ಮನಮೋಹನ್ ಸಿಂಗ್ ಅವರಿಗೆ ಅಗೌರವ ತೋರಲಾಗಿದೆ.

ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರು ನಿಧನರಾದ ಹಿನ್ನೆಲೆಯಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರ 7 ದಿನಗಳ ಕಾಲ ರಾಷ್ಟ್ರೀಯ ಶೋಕಾಚರಣೆ ಘೋಷಿಸಿ ಸರ್ಕಾರಿ ಕಾರ್ಯಕ್ರಮ ಸೇರಿದಂತೆ ಯಾವುದೇ ಮನರಂಜನಾ ಕಾರ್ಯಕ್ರಮ ನಡೆಸದಂತೆ ನಿರ್ಭಂಧ ವಿಧಿಸಿದೆ. ಆದರೆ ಕೆಆರ್‌ಎಸ್‌ನ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಇದನ್ನು ಗಾಳಿಗೆ ತೂರಿ, ಬೃಂದಾವನದಲ್ಲಿ ಪ್ರವಾಸಿಗರಿಗೆ ಪ್ರವೇಶಾವಕಾಶ ಕಲ್ಪಿಸಿ ಮನರಂಜನಾ ಕಾರ್ಯಕ್ರಮವನ್ನು ನಡೆಸಿ ಅಗೌರವ ತೋರಿಸಿದ್ದಾರೆ. ಪ್ರವಾಸಿಗರು ಸಂಗೀತ ಕಾರಂಜಿಯಲ್ಲಿ ಸಂಗೀತ ತಾಳಕ್ಕೆ ಮೈಮರೆತು ಕುಣಿದು ಕುಪ್ಪಳಿಸುತ್ತಿದ್ದುದ್ದು ಕಂಡು ಬಂದಿತು.



ಶೋಕಾಚರಣೆ ಹಿನ್ನೆಲೆಯಲ್ಲಿ ಮೈಸೂರಿನ ಅರಮನೆಯಲ್ಲಿ ಮಾಗಿ ಉತ್ಸವದ ಅಂಗವಾಗಿ ಏರ್ಪಡಿಸಲಾಗಿದ್ದ ಸಂಜೆ ದೀಪಾಲಂಕಾರವನ್ನು ರದ್ದುಗೊಳಿಸಿ ಪ್ರವಾಸಿಗರ ವೀಕ್ಷಣೆಯನ್ನು ಸಹ ಬಂದ್ ಮಾಡಿದೆ. ಆದರೆ ಇದಕ್ಕೆ ತದ್ವಿರುದ್ಧವಾಗಿ ಕೆಆರ್‌ಎಸ್‌ನ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಕಾರಂಜಿಯಲ್ಲಿ ಸಂಗೀತ ಕಾರಂಜಿ ನಡೆಸುವ ಮೂಲಕ ಶೋಕಾಚರಣೆಗಿಂತ ಪ್ರವಾಸಿಗರಿಂದ ಬರುವ ಹಣವೇ ಮುಖ್ಯವಾಗಿದೆ ಎಂಬಂತೆ ವರ್ತಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಮಾಧ್ಯಮದವರು ಇದನ್ನು ಪ್ರಶ್ನಿಸಿದಾಗ ಏಕಾಏಕಿ ಸಂಗೀತ ಕಾರಂಜಿಯನ್ನು ಸ್ಥಗಿತಗೊಳಿಸಿ, ಪ್ರವಾಸಿಗರಿಗೆ ಪ್ರವೇಶವನ್ನು ನಿರ್ಬಂದಿಸಿ ಹೊರಗೆ ಕಳುಹಿಸಿದರು. ಇದರಿಂದ ಹಣ ಕೊಟ್ಟು ಸಂಗೀತ ಕಾರಂಜಿಗೆ ಬಂದಿದ್ದ ಸಾವಿರಾರು ಪ್ರವಾಸಿಗರು ನಿರಾಶೆಗೊಂಡು ಹಣವನ್ನು ವಾಪಾಸ್ ನೀಡುವಂತೆ ಕೇಳಿದ್ದಾರೆ ಅದೆ ಅಧಿಕಾರಿಗಳು ಹಣ ನೀಡಲು ನಿರಾಕರಿಸಿದ್ದರಿಂದ ಪ್ರವಾಸಿಗರು ಹಿಡಿ ಶಾಪ ಹಾಕುತ್ತಾ ಅಲ್ಲಿಂದ ತೆರಳಿದರು. ಇನ್ನು ಕೆಲ ಪ್ರವಾಸಿಗರು ಅಧಿಕಾರಿಗಳೊಂದಿಗೆ ಮಾತಿನ ಚಕಮಕಿ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಇದುವರೆಗೂ ಯಾವುದೇ ಶೋಕಾಚರಣೆಗಳ ಸಂದರ್ಭದಲ್ಲೂ ಬೃಂದಾವನಕ್ಕೆ ಪ್ರವೇಶ ಮತ್ತು ಸಂಗೀತ ಕಾರಂಜಿಯನ್ನು ಬಂದ್ ಮಾಡಿಲ್ಲ. ಹಾಗೇಯೆ ಇಂದು ಕೂಡ ನಿರ್ಬಂದ ಹೇರದೆ ಪ್ರವೇಶ ಅವಕಾಶ ಕಲ್ಪಿಸಿದ್ದೇವೆ.
–ಫಾರೂಖ್ ಅಬು, ಎಇಇ, ಕೆಆರ್‌ಎಸ್.

ಸಾಧುಗೋನಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಕ್ಕೆ ಅಧ್ಯಕ್ಷರ ಆಯ್ಕೆ



ಕೆ.ಆರ್.ಪೇಟೆ,ಡಿ.27– ತಾಲೂಕಿನ ಕಸಬಾ ಹೋಬಳಿಯ ಸಾಧುಗೋನಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಅನಿತಾ ಮಂಜೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಹಿಂದಿನ ಅಧ್ಯಕ್ಷೆ ಆಶಾ ಶ್ರೀನಿವಾಸ್ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅನಿತಾ ಮಂಜೇಗೌಡ ಹೊರತುಪಡಿಸಿ ಉಳಿದ ಯಾವುದೇ ನಿರ್ದೇಶಕರು ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ ಹೆಚ್.ಬಿ.ಭರತ್ ಕುಮಾರ್ ಅವಿರೋಧವಾಗಿ ಆಯ್ಕೆಯನ್ನು ಘೋಷಿಸಿದರು. ಸಹ ಚುನಾವಣಾಧಿಕಾರಿಯಾಗಿ ಸಂಘದ ಕಾರ್ಯದರ್ಶಿ ಪವಿತ್ರ ತಿಮ್ಮೇಗೌಡ ಕಾರ್ಯ ನಿರ್ವಹಿಸಿದರು.

ನೂತನ ಅಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಮುಖಂಡ ಎಸ್.ಎಂ.ಲೋಕೇಶ್ ನಮ್ಮ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಗ್ರಾಮಸ್ಥರು ಪಕ್ಷಾತೀತವಾಗಿ ಅವಿರೋಧವಾಗಿ ಆಯ್ಕೆ ಮಾಡಲು ಸಹಕಾರ ನೀಡಿದ್ದಾರೆ. ಅದರಂತೆ ಅಧ್ಯಕ್ಷರನ್ನು ಅವಿರೋಧವಾಗಿ ಆಯ್ಕೆ ಮಾಡಿಕೊಳ್ಳಲಾಯಿತು ಎಂದರು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷೆ ಚಂದ್ರಕಲಾ ರಾಜು, ನಿರ್ದೇಶಕರಾದ ಪ್ರೇಮ ಚಂದ್ರಹಾಸೆಗೌಡ, ಕೆ.ಬಿ.ರೇಖಾ ಲೋಕೇಶ್, ಅನ್ನಪೂರ್ಣ ನಂಜುಂಡೇಗೌಡ, ಪಾರ್ವತಮ್ಮ ಲೇಟ್ ರಂಗೇಗೌಡ, ಪದ್ಮ ಅಣ್ಣೇಗೌಡ, ಹೇಮ ಮಂಜು, ಮುಖಂಡರಾದ ಎಸ್.ಎಂ ಲೋಕೇಶ್, ಗ್ರಾ.ಪಂ ಸದಸ್ಯ ಆರ್.ಕುಮಾರ್, ಪಟೇಲ್ ತಮ್ಮೇಗೌಡ, ಎಸ್.ಎಂ ರಮೇಶ್, ಎಸ್.ಕೆ.ಪ್ರಭಾಕರ್, ಗ್ರಾ.ಪಂ ಮಾಜಿ ಅಧ್ಯಕ್ಷ ಎಚ್.ಬಿ.ಸುರೇಶ್, ಗ್ರಾ.ಪಂ. ಮಾಜಿ ಉಪಾಧ್ಯಕ್ಷೆ ಪಾರ್ವತಮ್ಮ ಮಂಜು, ಕೋಳಿ ಮಂಜು, ಮಾಜಿ ಸದಸ್ಯೆ ಸೌಭಾಗ್ಯ ಇತರರಿದ್ದರು.

ಒಂದನೇ ಪುಟದಿಂದ

ಇಂದು ವಿದಾಯ

ಅಂತಿಮ ದರ್ಶನ ಪಡೆಯುತ್ತಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮನಮೋಹನ್ ಸಿಂಗ್ ಅವರ ನಿವಾಸಕ್ಕೆ ಭೇಟಿ ನೀಡಿ, ಅಂತಿಮ ದರ್ಶನ ಪಡೆದರು. ಮನಮೋಹನ್ ಸಿಂಗ್ ಅವರಿಗೆ ಅಂತಿಮ ನಮನ ಸಲ್ಲಿಸಿದ ಮೋದಿಯವರು, ಅವರ ಕುಟುಂಬಕ್ಕೆ ಸಂತಾಪ ಸೂಚಿಸಿದರು.

ಪ್ರಧಾನಿ ಮೋದಿ ಅವರ ಜೊತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕೂಡ ಮನಮೋಹನ್ ಸಿಂಗ್ ಅವರಿಗೆ ಅಂತಿಮ ನಮನ ಸಲ್ಲಿಸಿದರು. ಇವರ ಜೊತೆಗೆ ಕೇಂದ್ರ ಸಚಿವ ಜೆಪಿ ನಡ್ಡಾ ಸಹಿತ ಇತರೆ ಬಿಜೆಪಿ ನಾಯಕರು ಸಿಂಗ್ ಸ್ವಗೃಹಕ್ಕೆ ಬಂದು ಪಾರ್ಥೀವ ಶರೀರಕ್ಕೆ ಗೌರವ ಸಲ್ಲಿಸಿದರು.

ಕಾಂಗ್ರೆಸ್ ನಾಯಕರಾದ ರಾಜ್ಯಸಭಾ ಸದಸ್ಯೆ ಸೋನಿಯಾ ಗಾಂಧಿ, ಸಂಸದ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ, ಡಾ. ಸಿಂಗ್ ನಿವಾಸಕ್ಕೆ ಭೇಟಿ ನೀಡಿ ಅಂತಿಮ ನಮನ ಸಲ್ಲಿಸಿದರು. ಕುಟುಂಬದವರಿಗೆ ಸಾಂತ್ವನ ಹೇಳಿದರು.

ಮನಮೋಹನ್ ಸಿಂಗ್ ಅವರಿಗೆ ಅಂತಿಮ ನಮನ ಸಲ್ಲಿಸಿದ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಮೋದಿಯವರು, ಮನಮೋಹನ್ ಸಿಂಗ್ ಅವರಿಗೆ ಅವರ ನಿವಾಸದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ರಾಷ್ಟ್ರಕ್ಕೆ ಅವರು ನೀಡಿದ ಕೊಡುಗೆಯನ್ನು ಭಾರತ ಎಂದೆಂದಿಗೂ ಸ್ಮರಿಸುತ್ತದೆ ಎಂದು ಹೇಳಿದ್ದಾರೆ.

ಸಂಬಂಧ ಸುಧಾರಣೆಗೆ ಮನಮೋಹನ್ ಸಿಂಗ್ ಕೊಡುಗೆ ಶ್ಲಾಘಿಸಿದ ಚೀನಾ, ಪಾಕಿಸ್ತಾನ: ಮಾಜಿ ಪ್ರಧಾನಮಂತ್ರಿ ಡಾ. ಮನಮೋಹನ್ ಸಿಂಗ್ ಅವರು ನೆರೆಯ ರಾಷ್ಟ್ರಗಳಲ್ಲಿ ಸಂಬಂಧ ಸುಧಾರಣೆಗೆ ಸಕಾರಾತ್ಮಕ ಕೊಡುಗೆ ನೀಡಿದ್ದರು ಎಂದು ಚೀನಾ ಮತ್ತು ಪಾಕಿಸ್ತಾನ ದೇಶಗಳು ಸ್ಮರಿಸಿವೆ.

ಹೆಸರಾಂತ ಅರ್ಥಶಾಸ್ತ್ರಜ್ಞರಾಗಿದ್ದ ಮನಮೋಹನ್ ಸಿಂಗ್, ಭಾರತ–ಚೀನಾ ಸಂಬಂಧಗಳ ಅಭಿವೃದ್ಧಿಗೆ ಸಕಾರಾತ್ಮಕ ಕೊಡುಗೆ ನೀಡಿದ್ದಾರೆ ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಮಾವೋ ನಿಂಗ್ ಬೀಜಿಂಗ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ. ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ ಉಭಯ ದೇಶಗಳ ನಡುವೆ ವಿವಾದಾತ್ಮಕ ಗಡಿ ಸಮಸ್ಯೆಯನ್ನು ಪರಿಹರಿಸಲು ಸಹಿ ಹಾಕಲಾದ ಶಿನೋ–ಇಂಡಿಯಾ ಒಪ್ಪಂದವನ್ನು ಅವರು ನೆನಪಿಸಿಕೊಂಡಿದ್ದಾರೆ. ಭಾರತ–ಚೀನಾ ಗಡಿ ವಿವಾದ ಕೊನೆಗಾಣಿಸಲು ಚೀನಾ ಮತ್ತು ಭಾರತವು ಶಾಂತಿ ಮತ್ತು ಸಮೃದ್ಧಿಗಾಗಿ ಕಾರ್ಯತಂತ್ರದ ಸಹಕಾರ ಪಾಲುದಾರಿಕೆಯನ್ನು ಘೋಷಿಸಿದ್ದವು ಎಂದು ಅವರು ಹೇಳಿದ್ದಾರೆ.

ಮತ್ತೊಂದೆಡೆ ಮನಮೋಹನ್ ಸಿಂಗ್ ಅವರೊಂದಿನ ಒಡನಾಟವನ್ನು ನೆನಪಿಸಿಕೊಂಡಿರುವ ಪಾಕಿಸ್ತಾನದ ಮಾಜಿ ವಿದೇಶಾಂಗ ಸಚಿವ ಖುರ್ಷಿದ್ ಮೊಹಮ್ಮದ್ ಕಸೂರಿ, ಇಡೀ ಸಾರ್ಕ್ ಪ್ರದೇಶದಲ್ಲಿ ಸೌಹಾರ್ದಯುತ ವಾತಾವರಣವನ್ನು ಸೃಷ್ಟಿಸಿದ ಕೀರ್ತಿ ಸಿಂಗ್ ಅವರಿಗೆ ಸಲ್ಲುತ್ತದೆ ಎಂದಿದ್ದಾರೆ.

ಅಮೃತಸರದಲ್ಲಿ ಉಪಹಾರ, ಲಾಹೋರ್‌ನಲ್ಲಿ ಊಟ ಮತ್ತು ಕಾಬೂಲ್‌ನಲ್ಲಿ ರಾತ್ರಿಯ ಭೋಜನವನ್ನು ಹೊಂದಲು ಸಾಧ್ಯವಾಗುವ ದಿನಕ್ಕಾಗಿ ನಾನು ಎದುರು ನೋಡುತ್ತಿದ್ದೇನೆ ಎಂಬ ಸಿಂಗ್ ಅವರ ಹೇಳಿಕೆಯು ಇದಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ. ಸಿಂಗ್ ಅವರು ಪ್ರಧಾನಿಯಾಗಿದ್ದ ಅವಧಿಯಲ್ಲಿ ಜನರ ನಡುವಿನ ಸಂಪರ್ಕವು ಮಹತ್ತರವಾಗಿ ವೃದ್ಧಿಸಿತ್ತು. ಇದು ಜಮ್ಮು ಮತ್ತು ಕಾಶ್ಮೀರ ವಿವಾದ ಪರಿಹಾರಕ್ಕಾಗಿ ಸಂಭವನೀಯ ನಿಯಮಗಳ ನೀಲನಕ್ಷೆಯನ್ನು ತಯಾರಿಸಲು ಸಹ ಸಾಧ್ಯವಾಗಿಸಿತು ಎಂದು ಕಸೂರಿ ಹೇಳಿದರು.

ಕಸೂರಿ ನವೆಂಬರ್ 2002ರಿಂದ ನವೆಂಬರ್ 2007ರವರೆಗೂ ಪಾಕಿಸ್ತಾನದ ವಿದೇಶಾಂಗ ಸಚಿವರಾಗಿ ಸೇವೆ ಸಲ್ಲಿಸಿದ್ದರು. ಪಾಕಿಸ್ತಾನದ ಪಂಜಾಬ್‌ನ ಚಕ್ವಾಲ್ ಜಿಲ್ಲೆಯಲ್ಲಿರುವ ತನ್ನ ಜನ್ಮ ಸ್ಥಳ ಗಾಹ್‌ಗೆ ಭೇಟಿ ನೀಡುವ ಬಯಕೆಯನ್ನು ಸಿಂಗ್ ವ್ಯಕ್ತಪಡಿಸಿದ್ದನ್ನು ಕಸೂರಿ ನೆನಪಿಸಿಕೊಂಡಿದ್ದಾರೆ.

ಐದನೇ ಸ್ಥಾನ

ಕೇಂದ್ರ ಸರ್ಕಾರ ಕೈಗೊಂಡ 9 ಹುಲಿ ಯೋಜನೆಯಲ್ಲಿ ಕರ್ನಾಟಕದ ಬಂಡೀಪುರದಂತೆ ಜಿಮ್ ಕಾರ್ಪೆಟ್ ಕೂಡ ಒಂದಾಗಿದೆ.

ಭಾರತದ ಅತ್ಯಂತ ಹಳೆಯ ರಾಷ್ಟ್ರೀಯ ಉದ್ಯಾನವನಗಳಲ್ಲಿ ಜಿಮ್ ಕಾರ್ಪೆಟ್ ಒಂದಾಗಿದೆ. ಅಳಿವಿನಂಚಿನಲ್ಲಿರುವ ಬಂಗಾಳ ಹುಲಿಯನ್ನು ರಕ್ಷಿಸಲು 1936ರಲ್ಲಿ ಇದನ್ನು ರಾಷ್ಟ್ರೀಯ ಉದ್ಯಾನವನವಾಗಿ ಪರಿವರ್ತಿಸಿದ್ದು, ಇದು ಉತ್ತರಾಖಂಡದ ನೈನಿತಾಲ್ ಮತ್ತು ಪೌರಿ ಗರ್ವಾಲ್ ಜಿಲ್ಲೆಯಲ್ಲಿದೆ. ದೇಶ–ವಿದೇಶದ ಪ್ರವಾಸಿಗರು ಈ ವರ್ಷ ಹೆಚ್ಚು ಆಯ್ಕೆ ಮಾಡಿಕೊಂಡ ಪ್ರವಾಸಿ ತಾಣಗಳಲ್ಲಿ ಜಿಮ್ ಕಾರ್ಪೆಟ್ ಮೊದಲ ಸ್ಥಾನದಲ್ಲಿದ್ದು, ಶೇಕಡ 131ರಷ್ಟು ಪ್ರವಾಸಿಗರು ಇಲ್ಲಿಗೆ ಭೇಟಿ ನೀಡಿದ್ದಾರೆ.

ಕರ್ನಾಟಕ ಗಡಿಯ ಊಟಿ ಶೇಕಡ 35ರಷ್ಟಿದ್ದು, ಎರಡನೇ ಸ್ಥಾನದಲ್ಲಿದೆ. ತಮಿಳುನಾಡಿನ ಮೂನಾರ್ ಮೂರನೇ ಸ್ಥಾನದಲ್ಲಿದ್ದು, ಶೇಕಡ 33ರಷ್ಟು ಪ್ರವಾಸಿಗರು ಭೇಟಿ ನೀಡಿದ್ದಾರೆ. ದೇಶದ ಸ್ವಚ್ಛನಗರ ಪಟ್ಟಿಯಲ್ಲಿ ಹಲವು ವರ್ಷಗಳಿಂದ ಅಗ್ರ ಸ್ಥಾನದಲ್ಲಿರುವ ಮಧ್ಯ ಪ್ರದೇಶದ ಇಂದೋರ್‌ಗೆ ಶೇಕಡ 31ರಷ್ಟು ಪ್ರವಾಸಿಗರು ಭೇಟಿ ನೀಡಿದ್ದು, ಅದು ನಾಲ್ಕನೇ ಸ್ಥಾನದಲ್ಲಿದೆ.

ಇನ್ನುಳಿದಂತೆ ಕರ್ನಾಟಕ ಸಾಂಸ್ಕೃತಿಕ ನಗರಿ ಮೈಸೂರು, ದೇಶದ ಶ್ರೀಮಂತನಗರ ಗುಜರಾತ್‌ನ ಅಹಮದಾಬಾದ್, ದೇವರನಾಡು ಕೇರಳದ ವೈನಾಡ್ 5ನೇ ಸ್ಥಾನ ಪಡೆದಿದ್ದು, ಇಲ್ಲಿಗೆ ತಲಾ ಶೇಕಡ 29ರಷ್ಟು ಪ್ರವಾಸಿಗರು ಭೇಟಿ ನೀಡಿದ್ದಾರೆ. ಪ್ರವಾಸಿಗರನ್ನು ಆಕರ್ಷಿಸಲು ದೇಶದ ಎಲ್ಲಾ ರಾಜ್ಯಗಳ ಪ್ರವಾಸಿ ತಾಣಗಳು ಸ್ಪರ್ಧೆಯೊಡ್ಡುತ್ತವೆ. ಪ್ರವಾಸಿ ತಾಣಗಳಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಿ ಪರಿಣಾಮಕಾರಿ ಪ್ರಚಾರ ಕೂಡ ನಡೆಸಲಾಗುತ್ತಿದೆ. ಇಂತಹ ಪೈಪೋಟಿ ಎದುರಿಸಿ ಮೈಸೂರು ಪ್ರವಾಸಿಗರ ನೆಚ್ಚಿನ ಪ್ರವಾಸಿ ತಾಣಗಳಲ್ಲಿ 5ನೇ ಸ್ಥಾನ ಪಡೆದಿದೆ. ಮೊದಲ ಸ್ಥಾನಕ್ಕೆ ಬರಲು ಸರ್ಕಾರ ಕೈಗೊಳ್ಳುವ ಯೋಜನೆಗಳನ್ನು ಅವಲಂಭಿಸಿದೆ.

ಸಾಮಾನ್ಯವಾಗಿ ಪ್ರವಾಸಿಗರು ಕಡಲ ತೀರ ಹಾಗೂ ಅರಣ್ಯ ಪ್ರದೇಶವಿರುವ ಪ್ರವಾಸಿ ತಾಣಗಳನ್ನು ಹೆಚ್ಚು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಆದರೆ ಈಗ ಕಡಲ ತೀರ ಹಾಗೂ ಅರಣ್ಯ ಪ್ರದೇಶ ಮುಕ್ತವಾಗಿರುವ ಮೈಸೂರನ್ನು ಆಯ್ಕೆ ಮಾಡಿಕೊಂಡಿದ್ದು, ವಿಶ್ವ ವಿಖ್ಯಾತ ಮೈಸೂರು ಅರಮನೆ, ಮೃಗಾಲಯ, ಚಾಮುಂಡಿ ಬೆಟ್ಟ, ಕೆಆರ್‌ಎಸ್ ಇದಕ್ಕೆ ಪ್ರಮುಖ ಕಾರಣವಾಗಿದೆ. ಮೈಸೂರಿನಲ್ಲಿ ಕೈಗಾರಿಕಾ ಬೆಳವಣಿಗೆ ಕುಂಠಿತವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಪ್ರವಾಸೋದ್ಯಮ ಮತ್ತಷ್ಟು ಬೆಳವಣಿಗೆ ಸಾಧಿಸಿದರೆ ಸ್ಥಳೀಯರಿಗೆ ಹೆಚ್ಚು ಉದ್ಯೋಗವಕಾಶ ಜೊತೆಗೆ ವ್ಯಾಪಾರ ವಹಿವಾಟು ಹೆಚ್ಚಾಗಲಿದೆ. ಇದು ಮೈಸೂರಿನ ಅಭಿವೃದ್ಧಿಗೂ ಪೂರಕವಾಗಲಿದೆ.

ಆಯ್ಕೆ ಮಾಡಿಕೊಂಡ ಪ್ರವಾಸಿಗರು

ಭುವನೇಶ್ವರ್, ವೈನಾಡ್, ಊಟಿ, ಮುನ್ನಾರ್ ಹಾಗೂ ತ್ರಿವೇಡ್ರಂ ಸೇರಿದೆ. ದೇಶದ ಪ್ರಖ್ಯಾತ ಪ್ರವಾಸಿ ತಾಣಗಳಂತೆ ಪ್ರವಾಸಿಗರು ಬದಲಾವಣೆ ಬಯಸಿ ಇಲ್ಲಿಗೂ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಿದ್ದಾರೆ. ಗೂಗಲ್ ಸರ್ಚ್‌ನಲ್ಲಿ ಪ್ರವಾಸಿಗರು ಹೆಚ್ಚು ಹುಡುಕಾಡಿದ ದೇಶದ ಪ್ರವಾಸಿ ತಾಣಗಳಲ್ಲಿ ಮೈಸೂರು, ಬೆಂಗಳೂರು, ಕೊಡುಗು, ಮಂಗಳೂರು ಸೇರಿದೆ. ಒಟ್ಟಾರೆ ಮೈಸೂರು ಹಾಗೂ ಕೊಡಗು ಪ್ರವಾಸಿಗರ ನೆಚ್ಚಿನ ತಾಣಗಳಲ್ಲಿ ಒಂದಾಗಿರುವುದು ಸಂತಸದ ಸಂಗತಿಯಾಗಿದೆ.

ಇನ್ನಿಲ್ಲದ ಪ್ರೀತಿ!

'ಅಸಿಮ್, ನನಗೆ ಈ ಕಾರಿನಲ್ಲಿ (ಬಿಎಂಡಬ್ಲ್ಯು) ಪ್ರಯಾಣಿಸಲು ಇಷ್ಟವಿಲ್ಲ, ಅದು (ಮಾರುತಿ) ನನ್ನ ಕಾರು' ಎಂದು ಹೇಳುತ್ತಿದ್ದರು. ಆಗ ನಾನು ಅವರಿಗೆ ವಿವರಿಸುತ್ತಿದೆ. ಬಿಎಂಡಬ್ಲ್ಯು ಕಾರು ಐಷಾರಾಮಕ್ಕೆ ಅಲ್ಲ, ಆದರೆ ಎಸ್‌ಪಿಜಿ ಆಯ್ಕೆ ಮಾಡಿದ ಭದ್ರತಾ ಕಾರಣಗಳಿಗಾಗಿ ಅದನ್ನು ನಿಮ್ಮ ಪ್ರಯಾಣಕ್ಕೆ ಬಳಸಲಾಗುತ್ತಿದೆ ಎಂದು ಹೇಳುತ್ತಿದ್ದೆ. ಆದರೆ ಅವರು ಮಾತ್ರ ಮಾರುತಿಯೊಂದಿಗೆ ಗುರುತಿಸಿಕೊಳ್ಳಲು ಇಷ್ಟಪಡುತ್ತಿದ್ದರು. 'ನಾನು ಮಧ್ಯಮ ವರ್ಗದ ವ್ಯಕ್ತಿ, ಮತ್ತು ಜನಸಾಮಾನ್ಯರನ್ನು ನೋಡಿಕೊಳ್ಳುವುದು ನನ್ನ ಕೆಲಸ' ಎಂದು ಹೇಳುತ್ತಿದ್ದರು ಎಂದು ಅರುಣ್ ಅಸಿಂ ಅವರು ಮಾಜಿ ಪ್ರಧಾನಿಗೆ ಮಾರುತಿ 800 ಕಾರಿನ ಮೇಲಿದ್ದ ಪ್ರೀತಿಯನ್ನು ನೆನಪು ಮಾಡಿಕೊಂಡಿದ್ದಾರೆ.

ತಂದೆಯನ್ನೇ ಕೊಂದ ಮಗ

ಬಗ್ಗೆ ಗುರುತು ಕಂಡುಬರಲಿಲ್ಲ. ಅಪಘಾತ ಮಾಡಿದೆ ಎನ್ನಲಾದ ಯಾವುದೇ ವಾಹನದ ಭಾಗಗಳೂ ಸ್ಥಳದಲ್ಲಿ ಪತ್ತೆಯಾಗಲಿಲ್ಲ. ಸ್ಥಳದಲ್ಲಿ ಅಣ್ಣಪ್ಪ ಅವರ ಚಪ್ಪಲಿ, ಕಬ್ಬಿಣದ ಕೊಳವೆ, ಕಬ್ಬಿಣದ ಚಿಮುಟ, ಕೆಂಪು ಬಣ್ಣದ ಟವೆಲ್, ಕಬ್ಬಿಣದ ಪಟ್ಟಿ, ಪ್ಲಾಸ್ಟಿಕ್ ಪೀಸ್, ಎಲೆ–ಅಡಿಕೆ ಕೈಚೀಲ, 180 ಎಂಎಲ್‌ನ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಟೆಟ್ರಾ ಪ್ಯಾಕೆಟ್‌ಗಳು ಪತ್ತೆಯಾಗಿವೆ.

ಅಪಘಾತವಾಗಿದೆ ಎಂಬುದಕ್ಕೆ ಯಾವುದೇ ಪುರಾವೆ ಸಿಗದ ಕಾರಣ ಸಂಶಯಗೊಂಡ ಪೊಲೀಸರು, ಪಾಂಡುವನ್ನು ತೀವ್ರ ವಿಚಾರಣೆಗೊಳಪಡಿಸಿ ಅಲ್ಲಿನ ರಸ್ತೆಯ ಸಿಸಿ ಕ್ಯಾಮೆರಾಗಳ ಫುಟೇಜಸ್‌ಗಳನ್ನು ಪರಿಶೀಲಿಸಿದಾಗ ಪಾಂಡು ಆ ಮಾರ್ಗ ತೆರಳಿದ್ದುದು ಕಂಡುಬಂದಿತು.

ತಂದೆ ಹೆಸರಿನಲ್ಲಿದ್ದ ಜೀವ ವಿಮೆ ಹಣದ ಆಸೆಗಾಗಿ ಮಗ ಪಾಂಡು ಹತ್ಯೆಗೈದಿದ್ದಾನೆ ಎಂಬುದು ಖಚಿತವಾದ ಹಿನ್ನೆಲೆಯಲ್ಲಿ ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಆತ ಕೊಲೆ ಮಾಡಿರುವುದಾಗಿ ತಿಳಿಯಿತು. ಪ್ರಕರಣ ದಾಖಲಿಸಿಕೊಂಡಿರುವ ಬೈಲಕುಪ್ಪೆ ಠಾಣೆ ಪೊಲೀಸರು, ಆರೋಪಿಯನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ.

ಈ ವಿಷಯ ತಿಳಿಯುತ್ತಿದ್ದಂತೆಯೇ ಮನನೊಂದ ಅಣ್ಣ ಧರ್ಮ ಅವರೂ ಸಹ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಗಂಭೀರ ಗಾಯ

ದಿವಿನ್ ತಾಯಿ ಜಯ ಅವರಿಗೆ ದೂರವಾಣಿ ಕರೆ ಬಂದಿದ್ದು, ಗುರುವಾರ ಸಂಜೆ ಜಯ ಮತ್ತು ಆಲೂರು ಸಿದ್ದಾಪುರ ನಿವಾಸಿ ನವೀನ್ ಅವರು ಬೆಂಗಳೂರು–ಉತ್ತರ ಪ್ರದೇಶ ಮಾರ್ಗವಾಗಿ ಶ್ರೀನಗರಕ್ಕೆ ತೆರಳಿದ್ದಾರೆ. ಯೋಧ ದಿವಿನ್ ಏಕೈಕ ಪುತ್ರನಾಗಿದ್ದು, 10 ವರ್ಷದ ಹಿಂದೆ ಸೇನೆಗೆ ಸೇರಿದ್ದರು. ಇತ್ತೀಚೆಗೆ ನಿಶ್ಚಿತಾರ್ಥ ಕೂಡ ನೆರವೇರಿದ್ದು, ಮುಂಬರುವ ಫೆಬ್ರವರಿಯಲ್ಲಿ ವಿವಾಹ ನಿಶ್ಚಿಯವಾಗಿತ್ತು.

ಡಿ.24ರಂದು ಸಂಜೆ 5.30ರಲ್ಲಿ ವೈಟ್‌ನೈಟ್ ಕಾರ್ಪ್ಸ್‌ನ 11ನೇ ಮರಾಠ ಲೈಟ್ ಇನ್‌ಫೆಂಟ್ರಿಗೆ ಸೇರಿದ ಯೋಧರ ಸಹಿತ 6 ಸೇನಾ ವಾಹನಗಳು ನೀಲಂ ಹೆಡ್‌ಕ್ವಾಟರ್‌ನಿಂದ ಗಡಿ ನಿಯಂತ್ರಣ ರೇಖೆ ಬಲ್‌ನೋಯಿ ಗೋರಾ ಪೋಸ್ಟ್ ಕಡೆಗೆ ತೆರಳುತ್ತಿದ್ದವು. ಇಕ್ಕಟ್ಟಾದ ಪೀರ್ ಪಂಜಲ್ ಆಳ ಕಣಿವೆ ರಸ್ತೆ ಮೂಲಕ ಸೇನಾ ವಾಹನಗಳು ಸಾಗುತ್ತಿದ್ದ ಸಂದರ್ಭ ಯೋಧ ದಿವಿನ್ ಅವರಿದ್ದ ವಾಹನ ಚಾಲಕನ ನಿಯಂತ್ರಣ ತಪ್ಪಿ 150 ಅಡಿ ಆಳದ ಕಂದಕಕ್ಕೆ ಉರುಳಿ ಬಿದ್ದಿತ್ತು. ಪರಿಣಾಮ ಕರ್ನಾಟಕದ ಮೂವರು ಸೇರಿ ಒಟ್ಟು ಐವರು ಯೋಧರು ಸ್ಥಳದಲ್ಲೇ ಮೃತಪಟ್ಟಿದ್ದರು. ಉಳಿದ ಯೋಧರು ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಶ್ರೀನಗರದ ಸೇನಾ ಆಸ್ಪತ್ರೆಯ ಐಸಿಯು ಘಟಕಕ್ಕೆ ದಾಖಲಿಸಲಾಗಿದೆ. ಈ ಪೈಕಿ ಸೋಮವಾರಪೇಟೆ 'ಯೋಧ' ದಿವಿನ್ ಅವರ ಸ್ಥಿತಿ ಚಿಂತಾಜನಕವಾಗಿದೆ ಎಂದು ತಿಳಿದು ಬಂದಿದೆ.

ಕ್ಯಾಲೆಂಡರ್ ಬಿಡುಗಡೆ



ಮೈಸೂರಿನ ಇಟ್ಟಿಗೆಗೂಡಿನಲ್ಲಿರುವ ಜ್ವಾಲಾಮುಖಿ ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘದ 2025ರ ನೂತನ ಕ್ಯಾಲೆಂಡರ್ ಅನ್ನು ಡಾ.ರಾಜ್ ಅಭಿಮಾನಿ ಪೈಲ್ವಾನ್ ನಾಗರಾಜ್ (ನಾಗಣ್ಣ), ನರಸಿಂಹ, ರವಿ ಅವರು ಬಿಡುಗಡೆ ಮಾಡಿದರು. ಈ ವೇಳೆ ನಾಗೇಶ್ ಮಿತ್ರ, ಜಗದೀಶ್ ಕುಮಾರ್, ದೊರೆ, ಚಲುವರಾಜು, ಸಂದೇಶ್, ಮಂಜು ಇನ್ನಿತರರಿದ್ದರು.



ಮೈಸೂರಿನ ಜಯನಗರದಲ್ಲಿ ಇರುವ ಸಪ್ತಶ್ರೀ ಸೌಹಾರ್ದ ಸಹಕಾರ ಸಂಘದ 2025ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಸಹಕಾರಿ ಆಂತರಿಕ ಲೆಕ್ಕ ಪರಿಶೋಧಕ ಬಿ.ಎನ್.ಚಂದ್ರಶೇಖರ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಮೈಸೂರು ಪ್ರಾಂತೀಯ ಅಧಿಕಾರಿ ಗುರುಪ್ರಸಾದ್ ಬಂಗೇರ, ಸಂಘದ ಅಧ್ಯಕ್ಷ ಎಂ.ಎಸ್.ಚಂದ್ರಶೇಖರ್, ಉಪಾಧ್ಯಕ್ಷೆ ಶ್ರೀಮತಿ ಎಸ್.ಶ್ಯಾಮಲಾ, ಖಜಾಂಚಿ ಶ್ರೀಮತಿ ಕೃಷ್ಣವೇಣಿ, ನಿರ್ದೇಶಕರಾದ ಎನ್.ನಾಗಚಂದ್ರ, ಬಸವಣ್ಣ, ಗುರುರಾಜ್, ಬಿ.ಎಸ್.ಶೇಷಾದ್ರಿ, ಹೆಚ್.ವಿ.ಸುಬ್ಬಣ್ಣ, ಬಿ.ಕೆ.ಶೇಷಾದ್ರಿ, ಎಸ್.ಲಕ್ಷ್ಮೀದೇವಿ, ಜಿ.ಕೀರ್ತಿಪ್ರಕಾಶ್, ಎಂ.ಹನುಮಂತಯ್ಯ, ಸಂಘದ ಸಿಇಓ ಪುರುಷೋತ್ತಮ್ ಇನ್ನಿತರರಿದ್ದರು.



ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಗಾಯತ್ರಿ ಸೌಹಾರ್ದ ಸಹಕಾರ ಸಂಘದ 2025ರ ಕ್ಯಾಲೆಂಡರ್ ಅನ್ನು ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ, ಸಂಯುಕ್ತ ಸಹಕಾರಿಯ ಮೈಸೂರು ವಿಭಾಗದ ಅಭಿವೃದ್ಧಿ ಅಧಿಕಾರಿ ಆರ್.ಎಸ್.ಸುರೇಶ್ ಬಿಡುಗಡೆ ಮಾಡಿದರು. ಈ ವೇಳೆ ಕೆ.ಆರ್.ಮಂಜುನಾಥ್, ಅನುಸೂಯ, ಚಂದ್ರಶೇಖರ್, ಅನಂತರಾಮನ್, ಶ್ರೀಕಂಠಶರ್ಮನ್, ಶಿವಕುಮಾರ್ ಇನ್ನಿತರರಿದ್ದರು.

ಹೊಸ ಸಂಸತ್ ಕಟ್ಟಡದ ಬಳಿ ದಹಿಸಿಕೊಂಡ ಯುವಕ ಸಾವು

ನವದೆಹಲಿ,ಡಿ27–ಸಂಸತ್ತಿನ ಬಳಿ ಡಿ.25 ರಂದು ಬೆಂಕಿ ಹಚ್ಚಿಕೊಂಡಿದ್ದ 26 ವರ್ಷದ ಯುವಕ ಚಿಕಿತ್ಸೆ ಫಲಕಾರಿಯಾಗದೆ ಶುಕ್ರವಾರ ಇಲ್ಲಿನ ಡಾ. ರಾಮ್ ಮನೋಹರ್ ಲೋಹಿಯಾ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಉತ್ತರ ಪ್ರದೇಶದ ಬಾಗ್‌ಪತ್‌ನ ಜಿತೇಂದ್ರ ಬುಧವಾರ ಹೊಸ ಸಂಸತ್ ಕಟ್ಟಡದ ಬಳಿ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದರು. ಸಂಸತ್ತಿನ ಬಳಿ ನಿಯೋಜಿಸಲಾಗಿದ್ದ ಭದ್ರತಾ ಸಿಬ್ಬಂದಿ ಸಹಾಯದಿಂದ ಬೆಂಕಿಯನ್ನು ನಂದಿಸಲಾಯಿತು. ನಂತರ ಅವರನ್ನು ಆರ್‌ಎಂಎಲ್ ಆಸ್ಪತ್ರೆಗೆ ಸಾಗಿಸಲಾಯಿತು.

ಪ್ರಾಥಮಿಕ ತನಿಖೆಗಳ ಪ್ರಕಾರ, ಬಾಗ್‌ಪತ್‌ನಲ್ಲಿನ ಕೆಲವು ಜನರೊಂದಿಗಿನ ಭಿನ್ನಾಭಿಪ್ರಾಯದಿಂದಾಗಿ ಈತ ಆತ್ಮಹತ್ಯೆಗೆ ಮುಂದಾಗಿದ್ದಾನೆ ಎನ್ನಲಾಗಿದೆ. ಅವರ ಕುಟುಂಬವು ಮತ್ತೊಂದು ಕುಟುಂಬದ ಮೇಲಿನ ಎರಡು ಹಲ್ಲೆ ಪ್ರಕರಣಗಳನ್ನು ಎದುರಿಸುತ್ತಿದೆ. ಇದರಿಂದಾಗಿ ಆತ ಅಸಮಾಧಾನಗೊಂಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ನಿಧನದ ಹಿನ್ನೆಲೆ

ಅರಮನೆ ಆವರಣದಲ್ಲಿ ಹೊಸ ವರ್ಷದ ಸಂಭ್ರಮಾಚರಣೆಗೆ ಬ್ರೇಕ್

● ಇಂದು ದೀಪಾಲಂಕಾರ ಸ್ಥಗಿತ ● ಡಿ.31ರ ಸಂಜೆ ನಡೆಯಬೇಕಾಗಿದ್ದ ಪೊಲೀಸ್ ಬ್ಯಾಂಡ್, ಪಟಾಕಿ ಸಿಡಿತವೂ ರದ್ದು





ಮೈಸೂರು, ಡಿ.27(ಎಂಟಿವೈ)– ಮಾಜಿ ಪ್ರಧಾನಿ, ಅತ್ಯುತ್ತಮ ಆರ್ಥಿಕ ತಜ್ಞ ಡಾ.ಮನಮೋಹನ್ ಸಿಂಗ್ ನಿಧನದ ಹಿನ್ನೆಲೆಯಲ್ಲಿ ಮೈಸೂರು ಅರಮನೆ ಆವರಣದಲ್ಲಿ ಹೊಸ ವರ್ಷದ ಅಂಗವಾಗಿ ನಡೆಸಲು ಉದ್ದೇಶಿಸಿದ್ದ, ಪೊಲೀಸ್ ಬ್ಯಾಂಡ್ ಹಾಗೂ ಬಾಣ–ಬಿರುಸುಗಳ ಪ್ರದರ್ಶನ ಕಾರ್ಯಕ್ರಮವನ್ನು ರದ್ದುಗೊಳಿಸಲಾಗಿದೆ.

ರಾಜ್ಯದಲ್ಲಿ 7 ದಿನ ಶೋಕಾಚರಣೆ ಘೋಷಿಸಿರುವುದರಿಂದ ಅರಮನೆ ಆವರಣದಲ್ಲಿ ಡಿ.31ರ ಸಂಜೆ ನಿಗಧಿಯಾಗಿದ್ದ ಹೊಸ ವರ್ಷದ ಸಂಭ್ರಮಾಚರಣೆ ಕಾರ್ಯಕ್ರಮವನ್ನು ರದ್ದು ಮಾಡಲಾಗಿದೆ. ಅಲ್ಲದೆ, ಡಿ.27 ಮತ್ತು 28ರ ರಾತ್ರಿ ಅರಮನೆಗೆ ದೀಪಾಲಂಕಾರವನ್ನೂ ರದ್ದು ಮಾಡಲಾಗಿದೆ.

ಆದರೆ, ಫಲಪುಷ್ಪ ಪ್ರದರ್ಶನವನ್ನು ಎಂದಿನಂತೆ ಬೆಳಗ್ಗೆ 10 ಗಂಟೆಯಿಂದ ರಾತ್ರಿ 9 ಗಂಟೆವರೆಗೆ ಪ್ರವಾಸಿಗರು ಹಾಗೂ ಸಾರ್ವಜನಿಕರು ವೀಕ್ಷಿಸಬಹುದಾಗಿದೆ. ಡಿ.29ರಿಂದ 31ರವರೆಗೂ ರಾತ್ರಿ 9 ಗಂಟೆವರೆಗೂ ಅರಮನೆಗೆ ದೀಪಾಲಂಕಾರವಿರುತ್ತದೆ ಎಂದು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ತಿಳಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಬೇಡವೆಂದರೂ ಕೆಆರ್‌ಎಸ್ ರಸ್ತೆಗೆ 'ಸಿದ್ದರಾಮಯ್ಯ ಆರೋಗ್ಯ ಮಾರ್ಗ' ಹೆಸರಿಡುವುದು ಶತಸಿದ್ಧ

ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಖಡಕ್ ನಿರ್ಧಾರ



ಮೈಸೂರು, ಡಿ.27(ಜಿಎ)–ಮೈಸೂರಿನ ಕೆಆರ್‌ಎಸ್(ಪ್ರಿನ್ಸ್)ರಸ್ತೆಗೆ 'ಸಿದ್ದರಾಮಯ್ಯ ಆರೋಗ್ಯ ಮಾರ್ಗ' ಎಂಬ ಹೆಸರನ್ನು ಇಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ನಿರಾಕರಿಸಿದರೂ ನಾವು ಅವರ ಹೆಸರು ಇಡುವುದು ಶತಸಿದ್ಧ ಎಂದು ಶಾಸಕ ಕೆ.ಹರೀಶ್ ಗೌಡ ತಿಳಿಸಿದರು.

ಮೈಸೂರು ಜಲದರ್ಶಿನಿ ಅತಿಥಿ ಗೃಹದ ಆವರಣದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮೈಸೂರಿನ ರಾಜರು ಮತ್ತು ರಾಜಮನೆತನದ ಬಗ್ಗೆ ನಮಗೆ ಗೌರವವಿದೆ. ಆದರೆ, ನಾಲ್ವಡಿ ಕೃಷ್ಣರಾಜ ಒಡೆಯರ್, ಜಯಚಾಮರಾಜೇಂದ್ರ ಒಡೆಯರ್ ನಂತರ ಮೈಸೂರಿನ ಅಭಿವೃದ್ಧಿಗೆ ಶ್ರಮಿಸಿದವರ ಸಾಲಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇದ್ದಾರೆ. ಕೆಆರ್‌ಎಸ್ (ಪ್ರಿನ್ಸ್) ರಸ್ತೆಯಲ್ಲಿ ಆರೋಗ್ಯ ಸಮುಚ್ಚಯ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಈ ರಸ್ತೆಗೆ ಸಿದ್ದರಾಮಯ್ಯ ಆರೋಗ್ಯ ಮಾರ್ಗ ಎಂದು ಹೆಸರಿಡುವುದು ಶತಸಿದ್ಧ ಎಂದರು.

ರಸ್ತೆಗೆ ಹೆಸರಿಡುವ ಕುರಿತು ಇರುವ ವಿರೋಧಕ್ಕೆ ಪ್ರತಿಕ್ರಿಯಿಸಿ, ಬಿಜೆಪಿಯವರ ಬುದ್ಧಿ ಎಲ್ಲರಿಗೂ ಗೊತ್ತಿದೆ. ಅವರು ಗಾಂಧಿಯನ್ನು ಒಪ್ಪುವುದಿಲ್ಲ. ನಾಥುರಾಮ್ ಗೋಡ್ಸೆಯನ್ನು ಮಹಾತ್ಮ ಎಂದು ಹೇಳುತ್ತಾರೆ. ಅವರಿಗೆ ನಾವು ಏನು ಹೇಳಲು ಸಾಧ್ಯವಿಲ್ಲ. ಈಗಾಗಲೇ ಈ ರಸ್ತೆಗೆ ಹೆಸರಿದೆ ಎಂದು ಆರೋಪಿಸುತ್ತಿದ್ದಾರೆ. ಆದರೆ, ಯಾವುದೇ ಸರ್ಕಾರಿ ದಾಖಲೆಗಳಲ್ಲಿ ಪ್ರಿನ್ಸ್ ರಸ್ತೆ ಎಂಬುದು ಇಲ್ಲ. ಅದನ್ನು ಕೆಆರ್‌ಎಸ್ ಅಥವಾ ವೆಂಕಟರಮಣ ಸ್ವಾಮಿ ದೇವಸ್ಥಾನದ ರಸ್ತೆ ಎಂದು ಲೋಕ ರೂಢಿಯಾಗಿ ಕರೆಯುತ್ತಾರೆ. ನಿರ್ದಿಷ್ಟ ಹೆಸರು ಇಲ್ಲ ಎಂದು ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರು ಜಿಲ್ಲೆಗೆ ಅಪಾರ ಕೊಡುಗೆ ನೀಡಿದ್ದಾರೆ. ಅದರಲ್ಲೂ ಪ್ರಮುಖವಾಗಿ ಈ ರಸ್ತೆಯಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆ, ಟ್ರಾಮ ಕೇರ್ ಸೆಂಟರ್, ಪಂಚ ಚರಕ ಆಸ್ಪತ್ರೆ ಕಿದ್ವಾಯಿ ಸೇವೆ ನಡೆಯುತ್ತಿದೆ. ಈಗ ನೆಫ್ರಾಲಜಿ ಕೇಂದ್ರಕ್ಕೆ ಅನುಮೋದನೆ ನೀಡಿದ್ದಾರೆ. ಮೈಸೂರು ಸುತ್ತ ಮುತ್ತಲ ಐದು ಜಿಲ್ಲೆಗಳ ಜನರಿಗೂ ಉಪಯೋಗವಾಗುತ್ತಿದೆ. ಡಯಾಲಿಸಿಸ್ ರೋಗಿಗಳಿಗೆ 100 ಬೆಡ್ ನೀಡಿದ್ದಾರೆ. ಪ್ರತಿದಿನ ಸಾವಿರಕ್ಕೂ ಹೆಚ್ಚು ಮಂದಿ ಅನುಕೂಲ ಪಡೆಯುತ್ತಿದ್ದಾರೆ. ಟ್ರಾಮಾ ಕೇರ್ ಸೆಂಟರ್‌ನಲ್ಲಿ ಸಾಕಷ್ಟು ಮಂದಿ ಜೀವ ಉಳಿದಿದೆ ಎಂದರು.

ಇಷ್ಟೆಲ್ಲ ಕೊಡುಗೆ ನೀಡಿರುವ ಸಿದ್ದರಾಮಯ್ಯ ಅವರಿಗೆ ಇಡೀ ಮೈಸೂರಿನ ಜನತೆ ಹಾಗೂ ಚಾಮರಾಜ ಕ್ಷೇತ್ರದ ಮತದಾರರು ಸ್ಮರಿಸಬೇಕು. ಈ ಹಿನ್ನೆಲೆಯಲ್ಲಿ ನಾನು ಪ್ರಸ್ತಾವನೆ ಸಲ್ಲಿಸಿದ್ದೇನೆ. ಯಾರು ಎಷ್ಟೇ ವಿರೋಧ ಮಾಡಿದರೂ ಸಿದ್ದರಾಮಯ್ಯ ಅವರ ಹೆಸರು ಇಡುತ್ತೇನೆ ಎಂದು ತಿಳಿಸಿದರು.

ರಾಜಕಾರಣಕ್ಕೆ ಬಂದ ನಂತರ ವೈಯಕ್ತಿಕವಾಗಿ ಟಾರ್ಗೆಟ್ ಮಾಡಲಾಗುತ್ತಿದೆ ಎಂದು ಹೇಳಿಕೆ ನೀಡಿದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕುರಿತು ಪ್ರತಿಕ್ರಿಯಿಸಿ, ಮೈಸೂರಿನ ರಾಜಮನೆತನ ಎಂದರೆ ಎಲ್ಲರಿಗೂ ಗೌರವವಿದೆ. ಅವರನ್ನು ನಾವು ಟಾರ್ಗೆಟ್ ಮಾಡಿಲ್ಲ. ಬಿಜೆಪಿ ಅವರೇ ಟಾರ್ಗೆಟ್ ಮಾಡುತ್ತಿದ್ದಾರೆ. ಆದರೆ, ಅಮು ಭ್ರಮೆಯಲ್ಲಿ ಈ ರೀತಿ ಹೇಳಿಕೆ ನೀಡುತ್ತಿದ್ದಾರೆ. ಈ ರಸ್ತೆಯ ಬಗ್ಗೆ ಕಾನೂನು ಹೋರಾಟ ಮಾಡುವ ಬದಲು ಮೈಸೂರಿನ ವಿವಿಧ ರಸ್ತೆಗೆ ಬ್ರಿಟಿಷರ ಹೆಸರು ನಾಮಕರಣ ಮಾಡಿರುವ ಬಗ್ಗೆ ಕಾನೂನು ಹೋರಾಟ ಮಾಡಿ ಎಂದು ಕಿಡಿಕಾರಿದರು.

ಬಿಲ್ಲುಗಾರಿಕಾ ಸ್ಪರ್ಧೆಯಲ್ಲಿ ಉತ್ತಮ ಪ್ರದರ್ಶನ ನೀಡಿದ ಬುಡಕಟ್ಟು ಸ್ಪರ್ಧಿಗಳಿಗೆ ಪ್ರಶಂಸೆ



ಕೇರಳದಲ್ಲಿ ನಡೆದ ರಾಷ್ಟ್ರಮಟ್ಟದ ಬಿಲ್ಲುಗಾರಿಕೆ ಸ್ಪರ್ಧೆಯಲ್ಲಿ ಉತ್ತಮ ಪ್ರದರ್ಶನ ನೀಡಿ ನಗದು ಬಹುಮಾನ ಪಡೆದ ಪಿರಿಯಾಪಟ್ಟಣದ ಬುಡಕಟ್ಟು ಸಮುದಾಯದ ನಾಲ್ವರು ಸ್ಪರ್ಧಿಗಳಿಗೆ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಅಧಿಕಾರಿಗಳು ಅಭಿನಂಧಿಸಿದರು

ಮೈಸೂರು, ಡಿ.27(ಎಂಟಿವೈ)– ಕೇರಳದ ಕೋಝಿಕೋಡ್‌ನಲ್ಲಿ ನಡೆದ ರಾಷ್ಟ್ರ ಮಟ್ಟದ ಬಿಲ್ಲುಗಾರಿಕಾ ಸ್ಪರ್ಧೆಯಲ್ಲಿ ಉತ್ತಮ ಪ್ರದರ್ಶನ ನೀಡಿದ ಪಿರಿಯಾಪಟ್ಟಣ ತಾಲೂಕಿನ ನಾಲ್ವರು ಬುಡಕಟ್ಟು ಸಮುದಾಯ ಸ್ಪರ್ಧಿಗಳಿಗೆ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ವತಿಯಿಂದ ಪ್ರಮಾಣ ಪತ್ರ ವಿತರಿಸಲಾಯಿತು.

ಕೇರಳದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಂಶೋಧನೆ, ತರಬೇತಿ ಮತ್ತು ಅಭಿವೃದ್ಧಿ ಅಧ್ಯಯನ ಸಂಸ್ಥೆಯು ಕೋಝಿಕೋಡ್‌ನಲ್ಲಿ ಜನಜಾತೀಯ ಗೌರವ ವರ್ಷಾಚರಣೆ ಅಂಗವಾಗಿ ತಲಕ್ಕಾರ್ ಚಂದು ಸ್ಮರಣಾರ್ಥ ಆಯೋಜಿಸಿದ್ದ ರಾಷ್ಟ್ರಮಟ್ಟದ ಬಿಲ್ಲುಗಾರಿಕೆ ಸ್ಪರ್ಧೆಯಲ್ಲಿ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಮೈಸೂರು ಕಚೇರಿ ವತಿಯಿಂದ ತೆರಳಿದ್ದ ಪಿರಿಯಾಪಟ್ಟಣ ತಾಲೂಕಿನ ಬುಡಕಟ್ಟು ಸಮುದಾಯದ ಬಸಪ್ಪ, ಮೋಹನ್‌ಕುಮಾರ್, ಮಣಿ, ರಮೇಶ್‌ಜೆ.ಬಿ. ಉತ್ತಮ ಪ್ರದರ್ಶನ ನೀಡಿ ಗಮನ ಸೆಳೆದಿದ್ದಾರೆ.

ಮೈಸೂರು ಜಿಲ್ಲೆ ಪ್ರತಿನಿಧಿಸಿದ್ದ ನಾಲ್ವರು ಸ್ಪರ್ಧಿಗಳಿಗೆ ನಗದು ಬಹುಮಾನ ಮತ್ತು ಪ್ರಮಾಣ ಪತ್ರದೊಂದಿಗೆ ಪದಕ ಲಭಿಸಿತ್ತು. ಉತ್ತಮ ಪ್ರದರ್ಶನ ನೀಡಿ ಮೈಸೂರಿಗೆ ಆಗಮಿಸಿದ ನಾಲ್ವರಿಗೆ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ನಿರ್ದೇಶಕ ರಾಜ್‌ಕುಮಾರ್, ಉಪನಿರ್ದೇಶಕಿ ಪ್ರಭಾ ಅರಸ್, ಬಿ.ಆರ್. ಭವ್ಯ, ಗುಣಧರ್ ಅಭಿನಂದಿಸಿದರು.

ಬಿಟಿಎಲ್ ಶಾಲೆ, ಪಿಯು ಕಾಲೇಜಲ್ಲಿ ಕ್ರೀಡಾ ದಿನಾಚರಣೆ



ಮೈಸೂರಿನ ಬಿಟಿಎಲ್ ವಿದ್ಯಾಸಂಸ್ಥೆಯಲ್ಲಿ ನಡೆದ ಕ್ರೀಡಾ ದಿನಾಚರಣೆಯಲ್ಲಿ ಭಾಗವಹಿಸಿದ್ದ ಗಣ್ಯರು, ಸಂಸ್ಥೆ ಪದಾಧಿಕಾರಿಗಳು ಹಾಗೂ ಅಧ್ಯಾಪಕ ವೃಂದ.

ಮೈಸೂರು, ಡಿ.27(ಎಸ್‌ಬಿಡಿ)– ಮೈಸೂರಿನ ಬಿಟಿಎಲ್ ಶಾಲೆ ಹಾಗೂ ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ಕ್ರೀಡಾ ದಿನವನ್ನು ಆಚರಿಸಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ಈಜು ತರಬೇತುದಾರ, ರಾಷ್ಟ್ರೀಯ ಚಾಂಪಿಯನ್ ಈಜುಪಟು ಸ್ಕಂದ ಆರ್.ಅಶ್ವಥ್ ಅವರು ಶಾಂತಿ ಮತ್ತು ಕ್ರೀಡಾ ಮನೋಭಾವದ ಪ್ರತೀಕವಾದ ಪಾರಿವಾಳವನ್ನು ಹಾರಿಬಿಡುವ ಮೂಲಕ ಸಮಾರಂಭವನ್ನು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಶೈಕ್ಷಣಿಕ ಉತ್ಕೃಷ್ಟತೆ ಜೊತೆಗೆ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಕ್ರೀಡೆ ಬಹುಮುಖ್ಯ ಪಾತ್ರ ವಹಿಸುತ್ತದೆ. ಶಿಸ್ತು, ಏಕಾಗ್ರತೆ ಮತ್ತು ಸಂಘಟನಾತ್ಮಕ ಕಾರ್ಯಗಳಿಗೆ ಕ್ರೀಡೆ ಒತ್ತಾಸೆಯಾಗಿದೆ. ದೈಹಿಕ ಚಟುವಟಿಕೆಗಳಲ್ಲಿ ನಿಯಮಿತವಾಗಿ ಭಾಗವಹಿಸುವುದರಿಂದ ಮನಸ್ಸು ಚುರುಕುಗೊಳ್ಳುತ್ತದೆ ಸ್ಥಿತಿಸ್ಥಾಪಕತ್ವವನ್ನು ಸಾಧಿಸಬಹುದು. ಜೀವನದಲ್ಲಿ ಎದುರಾಗುವ ಸವಾಲುಗಳನ್ನು ಆತ್ಮವಿಶ್ವಾಸದಿಂದ ಎದುರಿಸಲು ಸಜ್ಜುಗೊಳಿಸುವ ಶಕ್ತಿ ಕ್ರೀಡೆಗಿದೆ ಎಂದು ಅಭಿಪ್ರಾಯಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷೆ ಕುಮಾರಿ ಅಪೂರ್ವ ಲಕ್ಷ್ಮಣ್, ಪ್ರೌಢಶಾಲೆ ಮುಖ್ಯೋಪಾಧ್ಯಾಯ ಚೇತನ್ ಕುಮಾರ್, ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸಬಾಹತ್ ಸುಲ್ತಾನ, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಗುರುಪ್ರಸಾದ್, ದೈಹಿಕ ಶಿಕ್ಷಣ ಶಿಕ್ಷಕರಾದ ಸನತ್ ಕುಮಾರ್ ಮತ್ತು ಪ್ರಸಾದ್, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು. ನಂತರ ವಿದ್ಯಾರ್ಥಿಗಳಿಗೆ ವಿವಿಧ ಕ್ರೀಡಾ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು.

ಉಡುಗೊರೆ ಆಸೆಗೆ 9 ಲಕ್ಷ ಕಳೆದುಕೊಂಡ ವೈದ್ಯರು!

ಮೈಸೂರು, ಡಿ.27(ಎಸ್‌ಬಿಡಿ)– ಕಸ್ಟಮ್ ಅಧಿಕಾರಿ ಸೋಗಿನಲ್ಲಿ ವೈದ್ಯರೊಬ್ಬರಿಗೆ ಕರೆ ಮಾಡಿ ತೆರಿಗೆ ಎಂದು 9 ಲಕ್ಷಕ್ಕೂ ಹೆಚ್ಚು ಹಣ ಪಡೆದು ವಂಚಿಸಿರುವ ಬಗ್ಗೆ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಲ್ಲಿನ ವಿದ್ಯಾನಗರದ ವೈದ್ಯರೊಬ್ಬರಿಗೆ ನಾಲ್ಕು ತಿಂಗಳ ಹಿಂದೆ ಕರೆ ಮಾಡಿ ಆತ್ಮೀಯತೆ ಬೆಳೆಸಿಕೊಂಡಿದ್ದ ವಂಚಕ, ಕೆಲವು ದಿನಗಳ ನಂತರ ಲಂಡನ್‌ನಿಂದ ಬೆಲೆಬಾಳುವ ವಸ್ತುವನ್ನು ಉಡುಗೊರೆಯಾಗಿ ಕಳುಹಿಸಿರುವುದಾಗಿ ತಿಳಿಸಿದ್ದಾನೆ. ಬಳಿಕ ಬೇರೊಂದು ನಂಬರ್‌ನಿಂದ ಕರೆ ಬಂದಿದ್ದು ಕಸ್ಟಮ್ ಆಫೀಸ್‌ನಿಂದ ಮಾತನಾಡುತ್ತಿರುವುದಾಗಿ ಹೇಳಿ, ನಿಮಗೆ ಬಂದಿರುವ ಪಾರ್ಸೆಲ್‌ಗೆ ತೆರಿಗೆ ಕಟ್ಟಬೇಕು ಎಂದು ತಿಳಿಸಲಾಗಿದೆ.

ಅದನ್ನು ನಂಬಿದ ವೈದ್ಯ, ಹಂತ ಹಂತವಾಗಿ ಒಟ್ಟು 9,21,174 ರೂ. ವರ್ಗಾವಣೆ ಮಾಡಿದ್ದಾರೆ. ಆದರೂ ಮತ್ತಷ್ಟು ಹಣಕ್ಕೆ ಬೇಡಿಕೆ ಇಟ್ಟಾಗ ಅನುಮಾನ ಬಂದು ವಿಚಾರಣೆ ನಡೆಸಿದಾಗ ತಾವು ಮೋಸ ಹೋಗಿರುವುದು ಗೊತ್ತಾಗಿದೆ. ಈ ಬಗ್ಗೆ ಸೆನ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಅಭಿನಂದನೆ



ಮೈಸೂರು ವಕೀಲರ ಗೃಹ ನಿರ್ಮಾಣದ ಸಹಕಾರ ಸಂಘದ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಗಂಜಾಂ ಪ್ರಸನ್ನ ಕುಮಾರ್ ಅವರನ್ನು ಸಂಘದ ಅಧ್ಯಕ್ಷ ಎಸ್.ಜೆ.ಲೋಕೇಶ್‌ಗೌಡ, ಮಾಜಿ ಅಧ್ಯಕ್ಷ ಶಂಭುಗೌಡ, ನಿರ್ದೇಶಕರಾದ ಶ್ರೀಧರ್, ಸೋಮ ನಾಯಕ, ಪುರುಷೋತ್ತಮ್, ತೇಜಸ್ವಿ, ಗೋಪಾಲ್‌ಗೌಡ ರಾಜಣ್ಣ, ಮೈಸೂರು ವಕೀಲರ ಸಂಘದ ಮಾಜಿ ಕಾರ್ಯದರ್ಶಿ ಬಿ.ಶಿವಣ್ಣ, ಸಂಘದ ನ್ಯಾಯವಾದಿ ಸೋಮಶೇಖರ್, ರಮೇಶ್, ಮಧು, ಪರಮೇಶ್, ಶ್ರೀನಿವಾಸ್ ಅಭಿನಂದಿಸಿದರು.

ಒಕ್ಕಣೆಗೆ ಕಣ ನಿರ್ಮಿಸಿಕೊಡದಿದ್ದರೆ ಹೋರಾಟ

ಕರ್ನಾಟಕ ಪ್ರಜಾ ಪಾರ್ಟಿ ಎಚ್ಚರಿಕೆ




ಕರ್ನಾಟಕ ಪ್ರಜಾ ಪಾರ್ಟಿ(ರೈತ ಪರ್ವ) ಸಂಸ್ಥಾಪಕ ರಾಜ್ಯಾಧ್ಯಕ್ಷ ಬಿ.ಶಿವಣ್ಣ, ರಸ್ತೆಯಲ್ಲಿ ಒಕ್ಕಣೆ ಹಾಕಿದ್ದ ರೈತರೊಂದಿಗೆ ಮಾತನಾಡುತ್ತಿರುವುದು.

ಮೈಸೂರು, ಡಿ.26(ಎಸ್‌ಬಿಡಿ)– ಪ್ರತಿ ಗ್ರಾಮದಲ್ಲೂ ಧಾನ್ಯ ಒಕ್ಕಣೆಗೆ ಕಣ ನಿರ್ಮಿಸಬೇಕು ಎಂದು ಕರ್ನಾಟಕ ಪ್ರಜಾ ಪಾರ್ಟಿ(ರೈತ ಪರ್ವ) ಆಗ್ರಹಿಸಿದೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಪಕ್ಷದ ಸಂಸ್ಥಾಪಕ ರಾಜ್ಯಾಧ್ಯಕ್ಷ ಬಿ.ಶಿವಣ್ಣ, ಕಾರ್ಯನಿಮಿತ್ತ ನಂಜನಗೂಡು ತಾಲೂಕಿನ ಹುಲ್ಲಹಳ್ಳಿ–ಹುರ ಮಾರ್ಗದಲ್ಲಿ ಸಂಚರಿಸುವಾಗ ರಸ್ತೆಯಲ್ಲಿ ಹುರುಳಿ ಒಕ್ಕಣೆ ಹಾಕಿದ್ದರು. ಇದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿತ್ತು. ಈ ಬಗ್ಗೆ ರೈತರನ್ನು ಪ್ರಶ್ನಿಸಿದಾಗ ನಮಗೆ ಒಕ್ಕಣೆ ಮಾಡಲು ಊರಿನಲ್ಲಿ ಕಣವಿಲ್ಲ. ಜನಪ್ರತಿನಿಧಿಗಳನ್ನು ಕೇಳಿದರೆ ಸಬೂಬು ಹೇಳುತ್ತಾರೆ. ಕಣ ಮಾಡುವುದಕ್ಕೂ ಜನ ಸಿಗುವುದಿಲ್ಲ. ಆದ್ದರಿಂದ ಅನಿವಾರ್ಯವಾಗಿ ಈ ರೀತಿ ಡಾಂಬರು ರಸ್ತೆಯಲ್ಲಿ ಹಾಕಿದ್ದೇವೆ ಎಂದು ಅಸಹಾಯಕತೆ ವ್ಯಕ್ತಪಡಿಸಿದರು ಎಂದು ತಿಳಿಸಿದ್ದಾರೆ.

ರಸ್ತೆಯಲ್ಲಿ ಒಕ್ಕಣೆ ಮಾಡುವ ರೈತರ ವಿರುದ್ಧ ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡುವುದಕ್ಕೂ ಮುನ್ನ ಅವರಿಗೆ ಅಗತ್ಯವಾದ ಕಣ ನಿರ್ಮಿಸಿಕೊಡಬೇಕಿದೆ. ಈ ವಿಚಾರವನ್ನು ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಿ, ರೈತಾಪಿ ವರ್ಗದವರ ನೆರವಿಗೆ ಮುಂದಾಗಬೇಕು. ದವಸ ಧಾನ್ಯಗಳ ಒಕ್ಕಣೆ ಮಾಡಲು ಪ್ರತಿ ಊರಿನಲ್ಲೂ ಕಣಗಳನ್ನು ನಿರ್ಮಿಸಿಕೊಡಬೇಕು. ನಿರ್ಲಕ್ಷ್ಯ ವಹಿಸಿದರೆ ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಲಾಗುವುದು ಎಂದು ಎಚ್ಚರಿಸಿದ್ದಾರೆ.

ರಾಷ್ಟ್ರೀಯ ಕಾರ್ಫ್‌ಬಾಲ್ ಚಾಂಪಿಯನ್‌ಶಿಪ್‌ಗೆ ಮೈಸೂರಿನ ಎಲ್.ಪೂರ್ವಿತಾ ಆಯ್ಕೆ



ಮೈಸೂರು, ಡಿ.27– ಮೈಸೂರಿನ ವಿದ್ಯಾರ್ಥಿನಿ ಎಲ್.ಪೂರ್ವಿತಾ, ಉತ್ತರಾಖಂಡದಲ್ಲಿ ನಡೆಯಲಿರುವ 26ನೇ ಜೂನಿಯರ್ ರಾಷ್ಟ್ರೀಯ ಕಾರ್ಫ್‌ಬಾಲ್ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾಗಿದ್ದಾಳೆ. ವಿವಿಧ ಹಂತಗಳ ಕಾರ್ಫ್‌ಬಾಲ್ ಪಂದ್ಯಾವಳಿಯಲ್ಲಿ ಉತ್ತಮ ಪ್ರದರ್ಶನ ನೀಡುವ ಮೂಲಕ ರಾಷ್ಟ್ರೀಯ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾಗಿರುವ ಎಂಐಟಿ ಪಬ್ಲಿಕ್ ಶಾಲೆಯ 6ನೇ ತರಗತಿಯ ವಿದ್ಯಾರ್ಥಿನಿ ಪೂರ್ವಿಕಾ, ಕಾಮನಕೆರೆಹುಂಡಿ ಪಿ.ಲೋಹಿತ್ ಅವರ ಪುತ್ರಿ. ಉತ್ತರಾಖಂಡದ ರುದ್ರಾಪುರ ಅಮೆನಿಟಿ ಪಬ್ಲಿಕ್ ಸ್ಕೂಲ್ ಆವರಣದಲ್ಲಿ ಡಿ.29ರಿಂದ 2025ರ ಜನವರಿ 1ರವರೆಗೆ 26ನೇ ಜೂನಿಯರ್ ರಾಷ್ಟ್ರೀಯ ಕಾರ್ಫ್‌ಬಾಲ್ ಚಾಂಪಿಯನ್‌ಶಿಪ್ ನಡೆಯಲಿದೆ.

ಡಾ.ಮನಮೋಹನ್ ಸಿಂಗ್‌ಗೆ ಕಾಂಗ್ರೆಸ್ ಶ್ರದ್ಧಾಂಜಲಿ



ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರಿಗೆ ಮೈಸೂರಿನ ಜಲದರ್ಶಿನಿ ಸರ್ಕಾರಿ ಅತಿಥಿ ಗೃಹದ ಆವರಣದಲ್ಲಿ ಶಾಸಕರು ಮತ್ತು ಕಾಂಗ್ರೆಸ್ ಮುಖಂಡರು ಶ್ರದ್ಧಾಂಜಲಿ ಸಲ್ಲಿಸಿದರು.

ಮೈಸೂರು, ಡಿ.27(ಜಿಎ)–ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರಿಗೆ ಮೈಸೂರಿನ ಜಲದರ್ಶಿನಿ ಸರ್ಕಾರಿ ಅತಿಥಿ ಗೃಹದ ಆವರಣದಲ್ಲಿ ಶಾಸಕರು ಮತ್ತು ಕಾಂಗ್ರೆಸ್ ಮುಖಂಡರು ಶ್ರದ್ಧಾಂಜಲಿ ಸಲ್ಲಿಸಿದರು.

ಮನಮೋಹನ್ ಸಿಂಗ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಶಾಸಕ ಕೆ.ಹರೀಶ್ ಗೌಡ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಮಾಜಿ ಉಪಮೇಯರ್‌ಗಳಾದ ಮೋದ ಮಣಿ, ಪುಷ್ಪವಲ್ಲಿ, ಚಾಮರಾಜ ಕ್ಷೇತ್ರದ ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಚೇಗೌಡನ ಕೊಪ್ಪಲು ರವಿ ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು ಗೌರವ ನಮನ ಸಲ್ಲಿಸಿದರು.

ಈ ವೇಳೆ ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಮೈಸೂರಿಗೂ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರಿಗೂ ಅವಿನಾಭವ ಸಂಬಂಧವಿದ್ದು, ನಾನು 95ರಲ್ಲಿ ಮೈಸೂರು ವಿವಿಯಲ್ಲಿ ಕಾರ್ಯ ನಿರ್ವಹಿಸುವಾಗ ಅಂದಿನ ಕುಲಪತಿ ಮಾದಯ್ಯ ಅವರಿಗೆ ಅಂದು ಸದಸ್ಯ ಕಾರ್ಯದರ್ಶಿಯಾಗಿದ್ದ ಮನಮೋಹನ್ ಸಿಂಗ್ ಅವರು ಉತ್ತಮ ಬಾಂದವ್ಯ ಹೊಂದಿದರು ಎಂದು ಸ್ಮರಿಸಿದರು.

ಅಂಬೇಡ್ಕರ್ ಸಂವಿಧಾನದ ಮೂಲಕ ಸರ್ವರಿಗೂ ಸಮಪಾಲು, ಸಮ ಬಾಳು ನೀಡಿದಂತೆ ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿ ಸಾಕಷ್ಟು ಯೋಜನೆ ನೀಡಿದ್ದಾರೆ. ಭಾರತದ ಆರ್ಥಿಕತೆಗೆ ಬೆನ್ನೆಲುಬಾಗಿ ಶ್ರಮಿಸಿ, ಸಾಕಷ್ಟು ಯೋಜನೆ ನೀಡಿದ್ದಾರೆ. ದೇಶ ಆರ್ಥಿಕವಾಗಿ ಸಧೃಡವಾಗಿರಲು ಮುಖ್ಯ ಪಾತ್ರ ವಹಿಸಿದ್ದಾರೆ. ನಾವುಗಳು ಸಮೃದ್ಧಿಯಾಗಿ ಜೀವನ ಮಾಡಲು ಅವರು ಕಾರಣರಾಗಿದ್ದು, ಮುಂದಿನ ಪೀಳಿಗೆಯೂ ನೆನಪಿನಲಿ ಇರುವ ಕಾರ್ಯ ಮಾಡಿದ್ದಾರೆ ಎಂದರು.

ಉಗನಿ ಸರ್ಕಾರಿ ಶಾಲೆ ಹಳೆ ವಿದ್ಯಾರ್ಥಿಗಳಿಂದ ಸಮವಸ್ತ್ರ, ಕ್ರೀಡಾ ಸಾಮಗ್ರಿ ವಿತರಣೆ



ಉಗನಿ ಗ್ರಾಮದ ಸರ್ಕಾರಿ ಶಾಲೆಗೆ ಹಳೆ ವಿದ್ಯಾರ್ಥಿಗಳ ಸಂಘದಿಂದ ಸಮವಸ್ತ್ರ, ಕ್ರೀಡಾ ಸಾಮಗ್ರಿ ವಿತರಿಸಲಾಯಿತು.

ಮೈಸೂರು, ಡಿ.27(ಎಂಟಿವೈ)– ಕೊಳ್ಳೇಗಾಲ ತಾಲೂಕಿನ ಉಗನಿಯ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹಳೆಯ ವಿದ್ಯಾರ್ಥಿಗಳ ಸಂಘದ ಸದಸ್ಯರು ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ಕ್ರೀಡಾ ಸಾಮಗ್ರಿ ಹಾಗೂ ಬ್ಯಾಂಡ್‌ಸೆಟ್ ಕೊಡುಗೆಯಾಗಿ ವಿತರಿಸಿ ತಮ್ಮ ಶಾಲೆಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಈ ಶಾಲೆಯಲ್ಲಿ ಓದಿ ವಿವಿಧ ಹುದ್ದೆಗಳಲ್ಲಿರುವ ಅನೇಕ ಹಿರಿಯ ವಿದ್ಯಾರ್ಥಿಗಳು ಒಗ್ಗೂಡಿ ಅಕ್ಷರ ಕಲಿತ ಶಾಲೆಗೆ ಕೊಡುಗೆ ನೀಡಬೇಕೆಂದು ನಿರ್ಧರಿಸಿ ಕಾರ್ಯಕ್ರಮ ಆಯೋಜಿಸಿದ್ದರು. ಶಾಲೆಯ ವಿದ್ಯಾರ್ಥಿಗಳಿಗೆ 75 ಜೊತೆ ಉತ್ತಮ ಗುಣಮಟ್ಟದ ಸಮವಸ್ತ್ರ, ಗುರುತಿನ ಚೀಟಿ, ಶಾಲಾ ಬ್ಯಾಂಡ್ ಸೆಟ್, ಕ್ರೀಡಾ ಪರಿಕರಗಳನ್ನು ಹಸ್ತಾಂತರಿಸಿದರು.

ಚಾಮರಾಜನಗರ ಜಿಲ್ಲಾಸ್ಪತ್ರೆಯ ರೆಡ್ ಕ್ರಾಸ್ ಸಂಸ್ಥೆಯ ವತಿಯಿಂದ ಉಚಿತ ಬ್ಲಡ್ ಗ್ರೂಪ್ ಡಿಟೆಕ್ಷನ್ ಕ್ಯಾಂಪ್ ಇದೇ ವೇಳೆ ಆಯೋಜಿಸಲಾಗಿತ್ತು. ಧನಗೆರೆ ಗ್ರಾ.ಪಂ ಪಿಡಿಓ ಕಮಲ್ ರಾಜ್ ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿ, ಸೇವಾ ಮನೋಭಾವ ಎಲ್ಲರಿಗೂ ಬರುವುದಿಲ್ಲ. ಆರ್ಥಿಕವಾಗಿ ಸಧೃಢವಾಗಿರುವವರಿಗೆ ಸಹಾಯ ಮಾಡುವ ಗುಣ ಇರುವುದಿಲ್ಲ. ದಾನ ಮಾಡುವ ಹೃದಯವಂತಿಕೆ ಇರುವವರಿಗೆ ಆರ್ಥಿಕ ಪರಿಸ್ಥಿತಿ ಉತ್ತಮವಾಗಿರುವುದಿಲ್ಲ. ಯಾರು ನನ್ನಿಂದ ಸಣ್ಣ ಅಳಿಲು ಸೇವೆಯನ್ನು ಮಾಡಬೇಕೆಂದು ಮುಂದೆ ಬರುತ್ತಾರೋ ಅವರೇ ನಿಜವಾದ ಹೃದಯ ಶ್ರೀಮಂತರು. ಅಂತಹ ಹೃದಯವಂತಿಕೆಯ ಸಹಾಯ ಮನೋಭಾವವನ್ನು ಹಳೆಯ ವಿದ್ಯಾರ್ಥಿಗಳು ತೋರಿರುವುದು ನಿಜಕ್ಕೂ ಶ್ಲಾಘನೀಯ.

ಇಂದು ಸರ್ಕಾರಿ ಶಾಲೆಗಳು ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿವೆ. ಪ್ರತಿಭಾನ್ವಿತ ಶಿಕ್ಷಕರು ನಮ್ಮ ಸರ್ಕಾರಿ ಶಾಲೆಗಳಲ್ಲಿ ಇದ್ದಾರೆ. ಸರ್ಕಾರಿ ಶಾಲೆ ಎನ್ನುವಂತಹ ಉದಾಸೀನತೆ ತೋರುವುದು ಬೇಡ. ಧೈರ್ಯವಾಗಿ ಮಕ್ಕಳನ್ನು ಸೇರಿಸಿ ಮಕ್ಕಳ ಭವಿಷ್ಯ ಉಜ್ವಲಗೊಳಿಸಿ ಎಂದು ಮನವಿ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಲೀಲಾವತಿ ವಹಿಸಿದ್ದರು. ಈ ಸಂದರ್ಭದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಆನಂದ್, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಮಹದೇವ್ ಕುಮಾರ್, ಶಿಕ್ಷಣ ಸಂಯೋಜನಾಧಿಕಾರಿ ಬಸವರಾಜು, ಪೊಲೀಸ್ ಪೇದೆ ಬಿ.ಮಹೇಶ್‌ಕುಮಾರ್, ಶಾಲೆಯ ಮುಖ್ಯ ಶಿಕ್ಷಕರಾದ ಸಿ.ಸರೋಜಾ, ಎಸ್‌ಡಿಎಂಸಿ ಅಧ್ಯಕ್ಷ ಮಹೇಶ್ ಕುಮಾರ್.ಬಿ, ನಾಗೇಶ್, ಭಾಗ್ಯಮ್ಮ, ಮಹೇಶ್, ರಾಜೇಂದ್ರ, ಗ್ರಾಮದ ಮುಖಂಡರುಗಳಾದ ಎಲ್.ರಾಚೇಗೌಡ, ಎಲ್.ವಾಸುಗೌಡ, ಬಿ.ಕೆಂಪಣ್ಣ, ಕೆ.ಲಿಂಗಪ್ಪ, ಶಾಂತಮೂರ್ತಿ, ಗ್ರಾ.ಪಂ. ಸದಸ್ಯರುಗಳಾದ ರಾಚಯ್ಯ, ಮಂಜು, ಮಾದಪ್ಪ, ಆಸೀಫ್, ಸಹಶಿಕ್ಷಕರಾದ ಮುಕುಂದ, ಮಧು, ಪ್ರೇಮಲತಾ, ಯುವ ಮುಖಂಡರಾದ ಮನೋಜ್ ಕುಮಾರ್.ಎಸ್, ಯೋಗೇಶ್. ಕೆ, ಮಹೇಂದ್ರ(ಭೀಮ), ಬೇವಿನಹಳ್ಳಿ ಮಹೇಶ್, ಗಿರೀಶ್ ಶುಕ್ಲಾಚಾರಿ ಹಾಗೂ ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷರು, ಸದಸ್ಯರು, ಯಜಮಾನರು, ಪೋಷಕರು ಹಾಗೂ ಹಳೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ದೇಶ - ವಿದೇಶ

ಇಸ್ರೇಲ್‌ನಿಂದ ಯೆಮೆನ್‌ನ ವಿಮಾನ ನಿಲ್ದಾಣ, ವಿದ್ಯುತ್ ಸ್ಥಾವರ ಧ್ವಂಸ



ಅಡೆನ್: ಯೆಮೆನ್ ರಾಜಧಾನಿ ಸನಾ ಮತ್ತು ಕೆಂಪು ಸಮುದ್ರದ ಬಂದರು ನಗರ ಹೊದೈದಾದಲ್ಲಿನ ಪ್ರಮುಖ ಮೂಲಸೌಕರ್ಯ ಮತ್ತು ಹೌತಿ ಉಗ್ರರ ನೆಲೆಗಳ ಮೇಲೆ ಇಸ್ರೇಲ್ ವೈಮಾನಿಕ ದಾಳಿ ನಡೆಸಿದೆ ಹೌತಿ ಗುಂಪಿನ ನಿಯಂತ್ರಣದಲ್ಲಿರುವ ಪ್ರದೇಶಗಳಾದ ಸನಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಹೆಜ್ಯಾಜ್ ವಿದ್ಯುತ್ ಸ್ಥಾವರದ ಮೇಲೆ ಈ ದಾಳಿಗಳು ನಡೆದಿವೆ ಎಂದು ವರದಿಯಾಗಿದೆ.

ಇದು ಮಾತ್ರವಲ್ಲದೇ ಹೊದೈದಾದಲ್ಲಿನ ಹಲವಾರು ಸ್ಥಳಗಳ ಮೇಲೆ ದಾಳಿ ನಡೆದಿವೆ ಎಂದು ಕ್ಸಿನ್ಹುವಾ ಸುದ್ದಿ ಸಂಸ್ಥೆ ವರದಿ ಮಾಡಿದೆ ಹೌತಿ ನಾಯಕ ಅಬ್ದುಲ್–ಮಲಿಕ್ ಅಲ್–ಹೌತಿ ಟಿವಿಯಲ್ಲಿ ಕಾಣಿಸಿಕೊಂಡು ಭಾಷಣ ಮಾಡುತ್ತಿರುವಾಗಲೇ ಇಸ್ರೇಲ್ ದಾಳಿ ನಡೆಸಿರುವುದು ಗಮನಾರ್ಹ. ಸನಾ ಮತ್ತು ಹೊದೈದಾವನ್ನು ಗುರಿಯಾಗಿಸಿಕೊಂಡು ಇಸ್ರೇಲ್ ತೀವ್ರ ವಾಯು ದಾಳಿ ನಡೆಸಿದೆ ಎಂದು ಇಸ್ರೇಲ್‌ನ ಸರ್ಕಾರಿ ಸ್ವಾಮ್ಯದ ಕಾನ್ ಟಿವಿ ವರದಿ ಮಾಡಿದೆ.

ಹೌತಿ ಪಡೆಗಳು ಇಸ್ರೇಲ್ ಮತ್ತು ಹಡಗು ಮಾರ್ಗಗಳ ಮೇಲೆ ದಾಳಿಯನ್ನು ಮತ್ತಷ್ಟು ತೀವ್ರಗೊಳಿಸುವ ಉದ್ದೇಶ ಹೊಂದಿರುವುದು ತಿಳಿದ ನಂತರ ಈ ದಾಳಿಗಳನ್ನು ನಡೆಸಲಾಗಿದೆ ಎಂದು ಇಸ್ರೇಲ್ ಮಾಧ್ಯಮಗಳು ತಿಳಿಸಿವೆ.

ರೈಲಿನಡಿಯಲ್ಲಿ ಅಡಗಿ 250 ಕಿ.ಮೀ ಸಂಚರಿಸಿದ ಯುವಕ ಬಂಧನ!

ಮಧ್ಯಪ್ರದೇಶ: ಸಾಮಾನ್ಯವಾಗಿ ರೈಲಿನಲ್ಲಿ ಟಿಕೆಟ್ ಇಲ್ಲದೆ, ರೀಲ್ಸ್ ಮಾಡಿಕೊಂಡು ಹೋಗಿರುವ ಸುದ್ದಿಗಳು ಆಗಾಗ ವೈರಲ್ ಆಗುತ್ತಿರುತ್ತವೆ. ಇದೀಗ ಮಧ್ಯಪ್ರದೇಶದಲ್ಲಿ ಆಘಾತಕಾರಿ ಘಟನೆಯೊಂದು ಬೆಳಕಿಗೆ ಬಂದಿದೆ. ಇಲ್ಲಿನ ಯುವಕನೊಬ್ಬ ರೈಲಿನ ಕೆಳಗೆ ಚಕ್ರಗಳ ನಡುವೆ ಅಡಗಿಕೊಂಡು ಕುಳಿತು 250 ಕಿಲೋಮೀಟರ್ ದೂರ ಪ್ರಯಾಣಿಸಿದ್ದಾನೆ. ತಕ್ಷಣ ಮಾಹಿತಿ ತಿಳಿದ ಆರ್‌ಪಿಎಫ್ ಯುವಕನನ್ನು ಬಂಧಿಸಿದೆ.

ವಾಸ್ತವವಾಗಿ, ಯುವಕನೊಬ್ಬ ಇಟಾರ್ಸಿ ಮತ್ತು ಜಬಲ್‌ಪುರ ನಡುವೆ ಓಡುತ್ತಿರುವ ದಾನಪುರ್ ಎಕ್ಸ್‌ಪ್ರೆಸ್ ರೈಲಿನ ಚಕ್ರಗಳ ಕೆಳಗೆ ಅಡಗಿಕೊಂಡು ಜಬಲ್‌ಪುರವನ್ನು ತಲುಪಿದ್ದಾನೆ ರೈಲಿನ ಎಸ್ 4 ಕೋಚ್ ಅನ್ನು ಪರಿಶೀಲಿಸಿದಾಗ ರೈಲ್ವೆ ನೌಕರರು ಯುವಕನೊಬ್ಬ ಚಕ್ರದಡಿಯಲ್ಲಿ ಅಡಗಿಕೊಂಡಿರುವುದನ್ನು ನೋಡಿದ್ದಾರೆ. ಈ ವೇಳೆ ಕದ್ದು ಪ್ರಯಾಣಿಸುತ್ತಿದ್ದ ಎಂದು ಮಾಹಿತಿ ಲಭ್ಯವಾಗಿದೆ. ಈ ಬಗ್ಗೆ ರೈಲ್ವೆ ಸಿಬ್ಬಂದಿ ರೈಲ್ವೆ ಪೊಲೀಸ್ ಪಡೆಗೆ ಮಾಹಿತಿ ನೀಡಿದ್ದು, ಬಳಿಕ ಯುವಕನನ್ನು ಆರ್‌ಪಿಎಫ್ ವಶಕ್ಕೆ ಪಡೆದುಕೊಂಡಿದೆ ಎನ್ನಲಾಗಿದೆ. ಯುವಕನ ಬಳಿ ರೈಲಿನಲ್ಲಿ ಪ್ರಯಾಣಿಸಲು ಹಣವಿಲ್ಲದ್ದರಿಂದ ಇಟಾರ್ಸಿಯಿಂದ ಜಬಲ್‌ಪುರಕ್ಕೆ ಅಡಗಿಕೊಂಡು, ಅದರಲ್ಲೂ ರೈಲಿನ ಅಡಿಯಲ್ಲಿ ಪ್ರಯಾಣಿಸಿದ್ದಾನೆ ಎನ್ನಲಾಗಿದೆ. ವರದಿ ಪ್ರಕಾರ ಈ ವ್ಯಕ್ತಿ ಮದ್ಯದ ಅಮಲಿನಲ್ಲಿದ್ದ ಎನ್ನಲಾಗಿದೆ.

ಮುಂಬೈ ದಾಳಿಯ ಸಂಚುಕೋರ ಅಬ್ದುಲ್ ರೆಹಮಾನ್ ಮಕ್ಕಿ ಸಾವು



ಲಾಹೋರ್: ಮುಂಬೈ 26/11 ಭಯೋತ್ಪಾದನಾ ದಾಳಿಯ ಸಂಚುಕೋರ ಮತ್ತು ಲಷ್ಕರ್ –ಎ–ತೈಬಾ (ಎಲ್‌ಇಟಿ) ಹಫೀಜ್ ಅಬ್ದುಲ್ ರಹಮಾನ್ ಮಕ್ಕಿ ಇಂದು ಪಾಕಿಸ್ತಾನದಲ್ಲಿ ಹೃದಯಾಘಾತದಿಂದ ಸಾವನ್ನಪ್ಪಿದ್ದಾನೆ. ಮಕ್ಕಿ ಕಳೆದ ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದು, ಲಾಹೋರ್‌ನ ಖಾಸಗಿ ಆಸ್ಪತ್ರೆಯಲ್ಲಿ ಶುಗರ್ ಮಟ್ಟ ಹೆಚ್ಚಿದ್ದ ಕಾರಣ ಚಿಕಿತ್ಸೆ ಪಡೆಯುತ್ತಿದ್ದ ಎಂದು ತಿಳಿದುಬಂದಿದೆ.

ಮೇ 2019ರಲ್ಲಿ ಮಕ್ಕಿಯನ್ನು ಪಾಕಿಸ್ತಾನ ಸರ್ಕಾರವು ಬಂಧಿಸಿತು ಮತ್ತು ಲಾಹೋರ್‌ನಲ್ಲಿ ಗೃಹಬಂಧನದಲ್ಲಿ ಇರಿಸಲಾಯಿತು. 2020 ರಲ್ಲಿ ಪಾಕಿಸ್ತಾನಿ ನ್ಯಾಯಾಲಯವು ಭಯೋತ್ಪಾದನೆಗೆ ಹಣಕಾಸು ಒದಗಿಸುವ ಪ್ರಕರಣಗಳಲ್ಲಿ ಆತನನ್ನು ದೋಷಿ ಎಂದು ಘೋಷಿಸಿ, ಜೀವಾವಧಿ ಶಿಕ್ಷೆ ವಿಧಿಸಿತು. 2023ರ ಜನವರಿಯಲ್ಲಿ, ಮಕ್ಕಿಯನ್ನು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಜಾಗತಿಕ ಭಯೋತ್ಪಾದಕ ಎಂದು ಘೋಷಿಸಿತು. 166 ಜನರ ಸಾವಿಗೆ ಕಾರಣವಾದ 26/11 ಮುಂಬೈ ಭಯೋತ್ಪಾದಕ ದಾಳಿಗೆ ಹಣಕಾಸು ಒದಗಿಸುವಲ್ಲಿ ಮಕ್ಕಿ ಭಾಗಿಯಾಗಿದ್ದ.

ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಯಲ್ಲಿ ಒಟ್ಟು ಒಂಬತ್ತು ಭಯೋತ್ಪಾದಕರು ಸಹ ಕೊಲ್ಲಲ್ಪಟ್ಟರು ಮತ್ತು ಒಬ್ಬ ಭಯೋತ್ಪಾದಕ ಅಮೀರ್ ಅಜ್ಮಲ್ ಕಸಬ್ ಜೀವಂತವಾಗಿ ಸಿಕ್ಕಿಬಿದ್ದಿದ್ದ

15 ವರ್ಷದ ಬಾಲಕನ ಮದುವೆಯಾದ ಮೂರು ಮಕ್ಕಳ ತಾಯಿ!

ಬಿಹಾರ: ಬಿಹಾರದಲ್ಲಿ 30 ವರ್ಷದ ಮೂರು ಮಕ್ಕಳ ತಾಯಿಯೊಬ್ಬಳು 7ನೇ ಕ್ಲಾಸ್‌ನಲ್ಲಿ ಓದುತ್ತಿರುವ 15 ವರ್ಷದ ಹುಡುಗನೊಬ್ಬನನ್ನು ಮದುವೆಯಾಗಿದ್ದಾಳೆ. ಈ ಪ್ರಕರಣವೀಗ ವಿವಾದಕ್ಕೀಡಾಗಿದ್ದು ತೀವ್ರ ಚರ್ಚೆಗೆ ಗ್ರಾಸವಾಗಿದೆ ಈ ವಿಚಾರದ ಬಗ್ಗೆ ಮಹಿಳೆಯನ್ನು ಸುದ್ದಿಗಾರರು ಪ್ರಶ್ನಿಸಿದಾಗ ಆಕೆ, ನಾವಿಬ್ಬರು ಪ್ರೀತಿ ಮಾಡ್ತಿದ್ದೆವು. ಹೀಗಾಗಿ ಮದುವೆಯಾಗಿದ್ದೇವೆ, ಇದರಲ್ಲಿ ತಪ್ಪೇನು ಎಂದು ಮಹಿಳೆ ವಿಶ್ವಾಸದಿಂದಲೇ ವರದಿಗಾರರನ್ನು ಮರು ಪ್ರಶ್ನಿಸಿದ್ದಾಳೆ. ಆಕೆಯ ಈ ಉತ್ತರ ಕೇಳಿದ ಜನ ಪ್ರೀತಿ, ವಯಸ್ಸು ಹಾಗೂ ಸಾಮಾಜಿಕ ನಿಯಮಗಳ ಬಗ್ಗೆ ಮಾತನಾಡುತ್ತಿದ್ದಾರೆ.

ಮಹಿಳೆಯನ್ನು ಸೀಮಾ ಎಂದು ಗುರುತಿಸಲಾಗಿದೆ. ಇತ್ತ ಈಕೆ ಮದುವೆಯಾದ ಹುಡುಗ ಅಪ್ರಾಪ್ತನಾಗಿದ್ದು, 7ನೇ ಕ್ಲಾಸ್‌ನಲ್ಲಿ ಓದುತ್ತಿದ್ದಾನೆ. ಇದೇ ಜಾಗದಲ್ಲಿ ಪುರುಷ ಇದ್ದಿದ್ದರೆ ಈಗ ಕಂಬಿ ಹಿಂದೆ ಕೂರಿಸುತ್ತಿದ್ದರು ಎಂದು ಅನೇಕರು ಹೇಳಿದ್ದಾರೆ. ಮತ್ತೆ ಕೆಲವರು ಮಹಿಳೆಯ ಕೆನ್ನೆಗೆ ಬಾರಿಸುವ ಅವಕಾಶವಿದ್ದರೆ ಇಲ್ಲೇ ಬಾರಿಸುತ್ತಿದೆ ಎಂದು ಸಿಟ್ಟಿಗೆದ್ದ ನೆಟ್ಟಿಗರೊಬ್ಬರು ಕಾಮೆಂಟ್ ಮಾಡಿದ್ದಾರೆ. ಮಹಿಳೆ ಸೀಮಾ ತನ್ನ ತಾಯಿ ಕಡೆಯಿಂದ ತನಗೆ ಮಾವ ನಾಗುವ ವ್ಯಕ್ತಿಯ ಮಗನನ್ನು ಮದುವೆಯಾಗಿದ್ದಾಳೆ. ತನ್ನ ಹಾಲಿ ಗಂಡ ತನ್ನನ್ನು ಪ್ರೀತಿಸುತ್ತಿಲ್ಲ, ಹೀಗಾಗಿಯೇ ಈ ಹುಡುಗನನ್ನು ಮದ್ವೆಯಾಗಲು ಮನೆ ಬಿಟ್ಟು ಓಡಿ ಬಂದಿದ್ದಾಗಿಯೂ ಆಕೆ ಹೇಳಿದ್ದಾಳೆ.

ರಾಮೇಶ್ವರಂ ಡ್ರೆಸ್ಸಿಂಗ್ ರೂಮಲ್ಲಿ ಮಹಿಳೆಯರ 200 ವಿಡಿಯೋ ಪತ್ತೆ

ರಾಮೇಶ್ವರಂ: ರಾಮೇಶ್ವರಂ ದೇವಸ್ಥಾನದ ಹತ್ತಿರದ ಖಾಸಗಿ ಡ್ರೆಸ್ಸಿಂಗ್ ರೂಮೊಂದರಲ್ಲಿ ರಹಸ್ಯ ಕ್ಯಾಮೆರಾ ಪತ್ತೆಯಾಗಿದ್ದು, ಇಬ್ಬರು ವ್ಯಕ್ತಿಗಳನ್ನು ಬಂಧಿಸಲಾಗಿದೆ. ಅವರ ಮೊಬೈಲ್‌ಗಳಲ್ಲಿ 200 ಕ್ಕೂ ಹೆಚ್ಚು ವಿಡಿಯೋಗಳು ಪತ್ತೆಯಾಗಿವೆ.

ರಾಮೇಶ್ವರಂನ ಅಗ್ನಿ ತೀರ್ಥ ಸಮುದ್ರದಲ್ಲಿ ಸ್ನಾನ ಮಾಡಿದ ನಂತರ ದೇವಸ್ಥಾನದೊಳಗಿನ 22 ತೀರ್ಥಗಳಲ್ಲಿ ಸ್ನಾನ ಮಾಡಿ ಬಳಿಕ ದೇವರ ದರ್ಶನ ಪಡೆಯುವುದು ವಾಡಿಕೆ. ಪುದುಕೊಟ್ಟೈ ಜಿಲ್ಲೆಯ ತಿರುಮಯಂ ಪ್ರದೇಶದಿಂದ ಬಂದ ಕುಟುಂಬವೊಂದು ಪವಿತ್ರ ಸ್ನಾನಕ್ಕಾಗಿ ರಾಮೇಶ್ವರಂಗೆ ಬಂದಿತ್ತು. ಅವರು ಅಗ್ನಿ ತೀರ್ಥ ಸಮುದ್ರದಲ್ಲಿ ಸ್ನಾನ ಮಾಡಿ, ಅದರ ಎದುರಿನಲ್ಲಿರುವ ಖಾಸಗಿ ಟೀ ಅಂಗಡಿಯೊಂದಿಗೆ ಇರುವ ಡ್ರೆಸ್ಸಿಂಗ್ ರೂಮಿಗೆ ಬಟ್ಟೆ ಬದಲಾಯಿಸಲು ಹೋಗಿದ್ದಾರೆ.

ಆಗ ಡ್ರೆಸ್ಸಿಂಗ್ ರೂಮ್ ಸುರಕ್ಷಿತವಾಗಿದೆಯೇ ಎಂದು ಸುತ್ತಲೂ ನೋಡಿದಾಗ, ಟೈಲ್ಸ್ ಗೋಡೆಯಲ್ಲಿ ರಹಸ್ಯ ಕ್ಯಾಮೆರಾ ಅಳವಡಿಸಿರುವುದನ್ನು ಕಂಡು ಆಘಾತಕ್ಕೊಳಗಾಗಿ ಕಿರುಚಿದ್ದಾರೆ. ಈ ಬಗ್ಗೆ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ. ತಕ್ಷಣ ಸ್ಥಳಕ್ಕೆ ಧಾವಿಸಿದ ಪೊಲೀಸರು ಅಲ್ಲಿ ಅಳವಡಿಸಲಾಗಿದ್ದ ರಹಸ್ಯ ಕ್ಯಾಮೆರಾವನ್ನು ವಶಪಡಿಸಿಕೊಂಡಿದ್ದಾರೆ. ಆನ್‌ಲೈನ್‌ನಲ್ಲಿ ಖರೀದಿಸಿ ಕ್ಯಾಮೆರಾ ಅಳವಡಿಸಿದ್ದ ಟೀ ಅಂಗಡಿ ಮಾಲೀಕ ರಾಜೇಶ್ ಕುಮಾರ್, ಆತನ ಸ್ನೇಹಿತ ಮಿಯಾನ್ ಮೈದೀನ್ ಇಬ್ಬರನ್ನೂ ಬಂಧಿಸಲಾಗಿದೆ.

ಸ್ಕೂಟರ್‌ಗೆ ಟಿಟಿ ವಾಹನ ಡಿಕ್ಕಿ: ಯುವಕ ಸಾವು



ಸ್ಕೂಟರ್‌ಗೆ ಟಿಟಿ ವಾಹನ ಡಿಕ್ಕಿ ಹೊಡೆದ ಪರಿಣಾಮ ಯುವಕ ಸ್ಥಳದಲ್ಲೇ ಮೃತಪಟ್ಟಿರುವುದು.

ಕುಶಾಲನಗರ, ಡಿ.27– ಸ್ನೇಹಿತರೊಂದಿಗೆ ಜನ್ಮದಿನ ಆಚರಿಸಿಕೊಂಡು ಸ್ಕೂಟರ್‌ನಲ್ಲಿ ಮನೆಗೆ ಬರುತ್ತಿದ್ದ ಯುವಕನಿಗೆ ಟಿಟಿ ವಾಹನ ಡಿಕ್ಕಿ ಹೊಡೆದ ಪರಿಣಾಮ ಆತ ಸ್ಥಳದಲ್ಲೇ ಮೃತಪಟ್ಟ ಘಟನೆ ಸಮೀಪದ ಹಾರಂಗಿ–ಸುಂದರನಗರ ರಸ್ತೆಯಲ್ಲಿ ಶುಕ್ರವಾರ ನಡೆದಿದೆ.

ಪಟ್ಟಣದ ಸುಂದರನಗರದ ನಿವಾಸಿ ಕವಿ(22) ಮೃತಪಟ್ಟ ಯುವಕ. ಈತ ತನ್ನ ಸ್ನೇಹಿತರಾದ ಗೊಂದಿಬಸವನಹಳ್ಳಿ ಶರತ್ ಹಾಗೂ ಚಿಕ್ಕತ್ತೂರಿನ ಹೇಮಂತ್ ಅವರೊಂದಿಗೆ ಹುಟ್ಟುಹಬ್ಬ ಆಚರಿಸಿಕೊಂಡು ಸ್ಕೂಟರ್‌ನಲ್ಲಿ ಮನೆಗೆ ಬರುತ್ತಿದ್ದಾಗ ಹಾರಂಗಿ ಜಲಾಶಯ ಬಳಿ ಟಿಟಿ ವಾಹನ ಡಿಕ್ಕಿ ಹೊಡೆದಿದೆ. ಪರಿಣಾಮ ಯುವಕ ಕವಿ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ.

ಹಿಂಬದಿ ಸವಾರರಾದ ಶರತ್ ಹಾಗೂ ಹೇಮಂತ್ ಗಂಭೀರವಾಗಿ ಗಾಯಗೊಂಡಿದ್ದಾರೆ. ಸ್ಥಳೀಯರು ಗಾಯಾಳುಗಳನ್ನು ಕುಶಾಲನಗರ ಆಸ್ಪತ್ರೆಗೆ ದಾಖಲಿಸಿದ್ದಾರೆ. ಸ್ಥಳಕ್ಕೆ ಗ್ರಾಮಾಂತರ ಠಾಣಾಧಿಕಾರಿ ಮೋಹನ್ ರಾಜ್, ಸಂಚಾರಿ ಗ್ರಾಮಾಂತರ ಠಾಣಾಧಿಕಾರಿ ಗಣೇಶ್ ಮತ್ತು ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು. ಈ ಸಂಬಂಧ ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರೋಗ್ಯಕರ ಸಮಾಜ ಕಾಪಾಡುವುದು ಕಾನೂನಿನ ಉದ್ದೇಶ

● ನ್ಯಾಯಾಧೀಶ ಹೊಸಮನಿ ಪುಂಡಲೀಕ ಹೇಳಿಕೆ ● ಪೊಲೀಸ್ ಕ್ರೀಡಾಕೂಟದ ಸಮಾರೋಪ

ಮಡಿಕೇರಿ, ಡಿ.27–ಕ್ರೀಡಾಕೂಟಗಳಿಂದ ನಾಯಕತ್ವ ಗುಣದೊಂದಿಗೆ ಪರಸ್ಪರ ಸಹೋದರತೆ ಭಾವ ಬೆಳೆಯುತ್ತದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಹೊಸಮನಿ ಪುಂಡಲೀಕ ಹೇಳಿದರು.

ಕೊಡಗು ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ನಡೆದ ಮೂರು ದಿನಗಳ ಪೊಲೀಸ್ ಕ್ರೀಡಾಕೂಟದ ಸಮಾರೋಪದಲ್ಲಿ ಮಾತನಾಡಿದ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯಡಿ ಸಮಾಜದ ಆರೋಗ್ಯ ಕಾಪಾಡುವುದು ಕಾನೂನಿನ ಉದ್ದೇಶವಾಗಿದೆ. ಕಾನೂನು ಕಾಪಾಡುತ್ತಲೇ ತಮ್ಮ ಆರೋಗ್ಯ ಕಾಪಾಡಿಕೊಳ್ಳುವ ಕಡೆ ಗಮನ ಹರಿಸುವುದು ಪೊಲೀಸರಿಗೆ ಕಷ್ಟಕರ. ಇಂತಹ ಕಾರ್ಯಕ್ರಮಗಳಿಂದ ಆರೋಗ್ಯ ಕಾಪಾಡಿಕೊಳ್ಳಲು ಸಹಕಾರಿಯಾಗಲಿದೆ ಎಂದರು.

ಕ್ರೀಡಾಕೂಟಗಳಿಂದ ನಾಯಕತ್ವದ ಬೆಳವಣಿಗೆಯೊಂದಿಗೆ ಸಹೋದರತ್ವ ಭಾವನೆ ಬೆಳೆಯುತ್ತದೆ. ಎಲ್ಲರೂ ಒಂದೇ ಕುಟುಂಬದಂತೆ ಕೆಲಸ ಮಾಡಲು ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಮಾತನಾಡಿ, ಪ್ರತಿವರ್ಷ ಪೊಲೀಸ್ ಕ್ರೀಡಾಕೂಟ ಆಯೋಜಿಸಲಾಗುತ್ತಿದೆ. ಇದರಿಂದಾಗಿ ಒಂದು ತಂಡ ರಚನೆಯೊಂದಿಗೆ ಎಲ್ಲರೂ ಒಂದೇ ಕುಟುಂಬ ಎಂಬಂತೆ ಬೆರೆಯಲು ಸಾಧ್ಯವಾಗುತ್ತೆ. ದೈಹಿಕ ಸಾಮರ್ಥ್ಯ ವೃದ್ಧಿಯೊಂದಿಗೆ ಇತರರಿಗೂ ಮಾದರಿಯಾಗಿ ಎಲ್ಲರೂ ಪಾಲ್ಗೊಳ್ಳಬೇಕು ಎಂಬ ಆಸಕ್ತಿ ಮೂಡಿಸುತ್ತದೆ ಎಂದರು.



ಮಡಿಕೇರಿಯಲ್ಲಿ ನಡೆದ ಪೊಲೀಸ್ ಕ್ರೀಡಾಕೂಟ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಒತ್ತಡದ ಕೆಲಸದಲ್ಲಿರುವ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಎಂದಿಗೂ ಒಂದಾಗಿ ಬೆರೆಯಲು ಸಾಧ್ಯವೇ ಆಗುವುದಿಲ್ಲ. ಎಲ್ಲರೂ ಪ್ರತಿನಿತ್ಯ ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಭಾಗಿಗಳಾಗುತ್ತಾರೆ. ಹಾಗಾಗಿ ಇಂತಹ ಕ್ರೀಡಾಕೂಟಗಳನ್ನು ಆಯೋಜನೆ ಮಾಡುವ ಮೂಲಕ ಎಲ್ಲರೂ ಒಂದಾಗಿ ಬೆರೆಯಲು ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದರು.

ಸೋಲು–ಗೆಲುವು ಜೀವನದ ಒಂದು ಭಾಗವಾಗಿದೆ. ಪೊಲೀಸರಿಗೆ ಸಮಸ್ಯೆ ಎದುರಾದಾಗ ಎಲ್ಲರೂ ಒಂದಾಗಬೇಕು. ಕುಟುಂಬದ ರೀತಿಯಲ್ಲಿ ಬೆರೆಯಬೇಕೆಂದು ಕಿವಿಮಾತು ಹೇಳಿದರು.

ಇದೇ ವೇಳೆ ಕ್ರೀಡಾಕೂಟ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ವೇದಿಕೆಯಲ್ಲಿ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ್ ರಾಜ್, ಪ್ರೊಬೇಷನರಿ ವರಿಷ್ಠಾಧಿಕಾರಿ ಡಾ.ಬೆನಕ ಪ್ರಸಾದ್, ಡಿವೈಎಸ್‌ಪಿಗಳಾದ ಮಹೇಶ್ ಕುಮಾರ್, ಮೋಹನ್ ಕುಮಾರ್, ಗಂಗಾಧರಪ್ಪ, ರವಿ ಉಪಸ್ಥಿತರಿದ್ದರು.

ಮನೆ ಬಾಗಿಲಿಗೆ ಔಷಧ ತಲುಪಿಸುವ ಅನುಮತಿ ಹಿಂಪಡೆಯಲಿ

ಮಡಿಕೇರಿ, ಡಿ.27–ಔಷಧಗಳನ್ನು ಮನೆ ಬಾಗಿಲಿಗೆ ತಲುಪಿಸಲು ಕೋವಿಡ್ ಸಂದರ್ಭ ನೀಡಲಾಗಿದ್ದ ವಿಶೇಷ ಅನುಮತಿ ದುರುಪಯೋಗವಾಗುತ್ತಿರುವುದರಿಂದ ತಕ್ಷಣ ಈ ಅನುಮತಿ ಹಿಂಪಡೆಯಬೇಕು ಎಂದು ಕೊಡಗು ಜಿಲ್ಲಾ ಔಷಧ ವ್ಯಾಪಾರಿಗಳ ಸಂಘ ಆರೋಗ್ಯ ಇಲಾಖೆಯನ್ನು ಒತ್ತಾಯಿಸಿದೆ.



ಎ.ಕೆ.ಜೀವನ್

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಕಾರ್ಯದರ್ಶಿಗಳಿಗೆ 3ನೇ ಬಾರಿಗೆ ಪತ್ರ ಬರೆದು ಅನುಮತಿ ರದ್ದುಪಡಿಸಬೇಕೆಂದು ಕೋರಲಾಗಿದೆ. ಅಕ್ರಮವಾಗಿ ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳಿಂದ ವಿಶೇಷ ಅನುಮತಿ ನಿಯಮ ದುರುಪಯೋಗವಾಗುತ್ತಿದ್ದು, ಇದು ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಬಹುದು ಎಂದು ಸಂಘದ ಜಿಲ್ಲಾಧ್ಯಕ್ಷ ಎ.ಕೆ.ಜೀವನ್ ಆತಂಕ ವ್ಯಕ್ತಪಡಿಸಿದ್ದಾರೆ.

2020ರ ಮಾರ್ಚ್‌ನಲ್ಲಿ ಕೆಲವು ಷರತ್ತುಗಳೊಂದಿಗೆ ಮನೆ ಬಾಗಿಲಿಗೆ ಔಷಧಗಳ ಪೂರೈಕೆಗೆ ಅನುಮತಿ ನೀಡಲಾಗಿತ್ತು. ತುರ್ತು ಸಂದರ್ಭಗಳಲ್ಲಿ ಔಷಧಗಳನ್ನು ತಲುಪಿಸುವುದು ಮುಖ್ಯ ಉದ್ದೇಶವಾಗಿದೆ. ಆದರೆ, ಪ್ರಸ್ತುತ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳು ಅಗತ್ಯ ನಿಯಂತ್ರಣ ಅನುಸರಿಸದೆ ಔಷಧಗಳನ್ನು ಮನೆಗೆ ತಲುಪಿಸುತ್ತಿವೆ ಎಂದು ಆರೋಪಿಸಿದ್ದಾರೆ.

ವೈದ್ಯರ ಚೀಟಿ ಇಲ್ಲದೆ ಔಷಧಗಳನ್ನು ಮಾರಾಟ ಮಾಡುತ್ತಿದ್ದು, ಸ್ವಯಂ–ಔಷಧ, ಮಾದಕ ವ್ಯಸನ ಮತ್ತು ಆಂಟಿಮೈಕ್ರೋಬಿಯಲ್ ಪ್ರತಿರೋಧದಂತಹ ಗಂಭೀರ ಸಮಸ್ಯೆಗಳು ಹೆಚ್ಚಿಸುತ್ತಿವೆ. ಇಂತಹ ಕಾನೂನು ಬಾಹಿರ ವ್ಯವಹಾರ ಸಂಸ್ಥೆಗಳು ರೋಗಿಗಳ ಸುರಕ್ಷತೆಯನ್ನು ಕಡೆಗಣಿಸಿ ತಮ್ಮ ಲಾಭದತ್ತ ಮಾತ್ರ ಗಮನಹರಿಸುತ್ತಿವೆ.

ಆನ್‌ಲೈನ್ ಪ್ಲಾಟ್ ಫಾರ್ಮ್ ಗಳು ತಮ್ಮ ಅನುಕೂಲಕ್ಕಾಗಿ ಔಷಧ ವಿತರಣೆ ನಿಯಮಗಳನ್ನು ನಿರ್ಲಕ್ಷಿಸುತ್ತಿವೆ. ಇದು ಸಾರ್ವಜನಿಕರ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ ಎಂದು ಎ.ಕೆ.ಜೀವನ್ ಪತ್ರದ ಮೂಲಕ ಆರೋಗ್ಯ ಇಲಾಖೆ ಗಮನ ಸೆಳೆದಿದ್ದಾರೆ.

ಯೂಚೀರಿಯೊ ವಿದ್ಯಾರ್ಥಿಗಳಿಗೆ ಪ್ರಥಮ ಬಹುಮಾನ...



ಕೇರಳದ ಕಣ್ಣೂರಿನ ಶ್ರೀಪುರದಲ್ಲಿ ನಡೆದ ಇಂಟರ್‌ನ್ಯಾಷನಲ್ ಮಾರ್ಷಲ್ ಆರ್ಟ್ಸ್ ಅಕಾಡೆಮಿ ಮತ್ತು ರೋಟರಿ ಬುಡೋ ಕಪ್–2024ರ ಕರಾಟೆ ಪಂದ್ಯಾವಳಿಯಲ್ಲಿ ವಿರಾಜಪೇಟೆ ಯೂಚೀರಿಯೊ ಕರಾಟೆ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಗಳಿಸಿದರು. ಯೂಚೀರಿಯೊ ಕರಾಟೆ ಮುಖ್ಯ ತರಬೇತುದಾರ ಶಿಯಾನ್ ಶಿವಪ್ಪ, ವಿದ್ಯಾರ್ಥಿಗಳಾದ ಶಶಾಂಕ್, ಅನ್‌ಸಿಲ್, ಯಶ್ವಂತ್, ಅಮಿನ್ ಅಸೇನ್, ದಿಪಾನ್ವಿತ್, ಹನಿಯಾ ಫಾತಿಮಾ, ಜಯಶ್ರೀ, ಹಾಜಿರಾ ಫಾತಿಮಾ ಇದ್ದರು.

ಅಮಿತ್ ಶಾ ಹೇಳಿಕೆಗೆ ಖಂಡನೆ



ವಿ.ಕೆ.ಸತೀಶ್

ವಿರಾಜಪೇಟೆ: ಬಾಬಾ ಸಾಹೇಬ್ ಅಂಬೇಡ್ಕರ್ ಬಗ್ಗೆ ಅವಹೇಳನವಾಗಿ ಮಾತನಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಶೋಭೆ ತರುವಂತದಲ್ಲ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ವಿ.ಕೆ.ಸತೀಶ್‌ಕುಮಾರ್ ಹೇಳಿದ್ದಾರೆ.

ಅವರ ಹೇಳಿಕೆಯನ್ನು ತೀವ್ರವಾಗಿ ಖಂಡಿಸಲಾಗುವುದು. ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ದೇಶಕ್ಕೆ ಉತ್ತಮ ಸಂವಿಧಾನ ರಚಿಸಿಕೊಟ್ಟ ಹಾಗೂ ಎಲ್ಲರಿಗೂ ಮೀಸಲಾತಿ ಕಲ್ಪಿಸಿಕೊಟ್ಟ ದೇವರೆಂದು ಜಪಿಸುತ್ತೇವೆ. ಶಿಕ್ಷಣವೇ ಶಕ್ತಿ ಎಂದು ತಲೆ ಎತ್ತಿ ಬಾಳಲು ಸಂವಿಧಾನ ಕಾರಣ. ಇಂತಹ ಮಹನೀಯರ ಬಗ್ಗೆ ಕೀಳಾಗಿ ಮಾತನಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ನಡೆ ಸರಿಯಲ್ಲ ಎಂದು ಸತೀಶ್ ಖಂಡಿಸಿದ್ದಾರೆ.

ಯೇಸು ಬಗ್ಗೆ ಅವಹೇಳನ: ಪೊಲೀಸ್ ಠಾಣೆಗಳಲ್ಲಿ ದೂರು ದಾಖಲು

ಮಡಿಕೇರಿ: ಕ್ರೈಸ್ತರ ಆರಾಧ್ಯದೇವ ಯೇಸು ಕ್ರಿಸ್ತರ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನ ಮಾಡಿದ್ದು, ಕಿಡಿಗೇಡಿಗಳನ್ನು ತಕ್ಷಣ ಬಂಧಿಸಬೇಕೆಂದು ಒತ್ತಾಯಿಸಿ ಕೊಡಗು ಜಿಲ್ಲಾ ರೋಮನ್ ಕ್ಯಾಥೋಲಿಕ್ ಅಸೋಸಿಯೇಷನ್ ಮತ್ತು ಅಸೋಸಿಯೇಷನ್‌ನ ವಿವಿಧ ಘಟಕಗಳು ವಿವಿಧ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಿಸಿವೆ.



ಜಾನ್ಸನ್ ಪಿಂಟೋ

ಮಡಿಕೇರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ಮಾತನಾಡಿದ ರೋಮನ್ ಕ್ಯಾಥೋಲಿಕ್ ಅಸೋಸಿಯೇಷನ್ ಜಿಲ್ಲಾಧ್ಯಕ್ಷ ಜಾನ್ಸನ್ ಪಿಂಟೋ, ಯೇಸು ಕ್ರಿಸ್ತರನ್ನು ಅವಹೇಳನ ಮಾಡಿ ಕ್ರೈಸ್ತ ಸಮುದಾಯದ ಭಾವನೆಗೆ ಧಕ್ಕೆ ತಂದಿರುವ ಪ್ರಕರಣವನ್ನು ತೀವ್ರವಾಗಿ ಖಂಡಿಸುವುದಾಗಿ ತಿಳಿಸಿದರು.

ಸಾವಿರಾರು ವರ್ಷಗಳಿಂದ ಶಾಂತಿಧೂತ ಯೇಸು ಜನ್ಮ ದಿನದಂದು ಕ್ರಿಸ್‌ಮಸ್ ಹಬ್ಬವಾಗಿ ವಿಶ್ವದೆಲ್ಲೆಡೆ ಶ್ರದ್ಧಾಭಕ್ತಿಯಿಂದ ಆಚರಿಸಲಾಗುತ್ತಿದೆ. ಆದರೆ, ಕಿಡಿಗೇಡಿಯೊಬ್ಬ ಕ್ರಿಸ್‌ಮಸ್ ಕುರಿತು ಅಗೌರವದ ಪೋಸ್ಟ್ ಮಾಡಿರುವುದಲ್ಲದೆ, ಯೇಸುಕ್ರಿಸ್ತರನ್ನು ಕೀಳಾಗಿ ಕಂಡಿದ್ದಾನೆ. ಈತನ ಹೇಳಿಕೆಗೆ ಬೆಂಬಲವಾಗಿ ಮತ್ತೊಬ್ಬ ಕಿಡಿಗೇಡಿ ಅವಹೇಳನಕಾರಿಯಾಗಿ ಮತ್ತೊಂದು ಪೋಸ್ಟ್ ಮಾಡಿದ್ದಾನೆ. ಇದು ಸಮಾಜದಲ್ಲಿ ಅಶಾಂತಿ ಮೂಡಿಸುವ ಪ್ರಯತ್ನವಾಗಿದ್ದು, ಪೊಲೀಸರು ತಪ್ಪಿತಸ್ಥರನ್ನು ತಕ್ಷಣ ಬಂಧಿಸಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಕಿಡಿಗೇಡಿಗಳ ಬಂಧನವಾಗದಿದ್ದಲ್ಲಿ ಎಲ್ಲಾ ಕ್ರೈಸ್ತರು ಒಗ್ಗೂಡಿ ಜಿಲ್ಲೆಯಾದ್ಯಂತ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.

ಅಸೋಸಿಯೇಷನ್‌ನ ಮಡಿಕೇರಿ, ಕುಶಾಲನಗರ, ವಿರಾಜಪೇಟೆ ಮತ್ತು ಸೋಮವಾರಪೇಟೆ ಘಟಕಗಳು ಆಯಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ಕಠಿಣ ಕ್ರಮಕ್ಕಾಗಿ ಒತ್ತಾಯಿಸಿವೆ.

ನಾಳೆ ಪತ್ರಿಭಾ ಪುರಸ್ಕಾರ, ಸನ್ಮಾನ ಕಾರ್ಯಕ್ರಮ

ಮಡಿಕೇರಿ: ಕೊಡಗು ಗೌಡ ವಿದ್ಯಾ ಸಂಘ, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಸಹಯೋಗದಲ್ಲಿ ಡಿ.29ರಂದು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪತ್ರಿಭಾ ಪುರಸ್ಕಾರ ಮತ್ತು ಸಾಧಕರಿಗೆ ಸನ್ಮಾನ ಸಮಾರಂಭ ನಡೆಯಲಿದೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೊಡಗು ಗೌಡ ವಿದ್ಯಾ ಸಂಘದ ಅಧ್ಯಕ್ಷ ಅಂಬೆಕಲ್ಲು ನವೀನ್, ನಗರದ ಕೊಡಗು ಗೌಡ ಸಮಾಜದಲ್ಲಿ ಅಂದು ಬೆಳಗ್ಗೆ 10 ಗಂಟೆಗೆ ನಡೆಯುವ ಕಾರ್ಯಕ್ರಮವನ್ನು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಉದ್ಘಾಟಿಸಲಿದ್ದಾರೆ ಎಂದು ತಿಳಿಸಿದರು.

ಸೋಮವಾರಪೇಟೆ ಸಾಂದೀಪನಿ ಪ್ರೌಢಶಾಲೆ ಅಧ್ಯಕ್ಷ ಮೂಡಗದ್ದೆ ದಾಮೋದರ, ವಿದ್ಯಾನಿಧಿ ದಾನಿಗಳಾದ ಕಾಫಿ ಬೆಳೆಗಾರ ಅಚ್ಚುಡ ಅನಂತ ಕುಮಾರ್, ತಳೂರು ಮುತ್ತಮ್ಮ ರಾಜಗೋಪಾಲ, ಮದೆನಾಡು ನಿವೃತ್ತ ಮುಖ್ಯ ಶಿಕ್ಷಕ ಬಾರಿಯಂಡ ಜೋಯಪ್ಪ ಹಾಗೂ ಕಾಫಿ ಮಂಡಳಿಯ ನಿವೃತ್ತ ಸಂಪರ್ಕಾಧಿಕಾರಿ ಬಾರಿಕೆ ಎನ್.ಅಯ್ಯಪ್ಪ ಪಾಲ್ಗೊಳ್ಳಲಿದ್ದಾರೆ ಎಂದರು. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಶೇ.80ಕ್ಕಿಂತ ಹೆಚ್ಚು ಆಂಗ್ಲ ಮಾಧ್ಯಮದಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು ಹಾಗೂ ಪಿಯುಸಿ, ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಅರೆಭಾಷೆ ಬಂಧುಗಳನ್ನು ಸನ್ಮಾನಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ವಿದ್ಯಾ ಸಂಘದ ಉಪಾಧ್ಯಕ್ಷ ಅಮೆ ಸಿ.ಸೀತಾರಾಮ್, ಕಾರ್ಯದರ್ಶಿ ಪೇರಿಯನ ಕೆ.ಉದಯಕುಮಾರ್, ಖಜಾಂಚಿ ಕಾಳೇರಮ್ಮನ ಲತಾ ನಂದಕುಮಾರ್, ನಿರ್ದೇಶಕರಾದ ಪುದಿಯ ನೆರವನ ರೇವತಿ ರಮೇಶ್, ಚೊಕ್ಕಾಡಿ ಎನ್.ಅಪ್ಪಯ್ಯ ಉಪಸ್ಥಿತರಿದ್ದರು.

ದೇಶದ ಆರ್ಥಿಕತೆಗೆ ಸಿಂಗ್ ಕೊಡುಗೆ ಅಪಾರ

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಮಾಜಿ ಪ್ರಧಾನಿಗೆ ಶ್ರದ್ಧಾಂಜಲಿ



ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಚಾಮರಾಜನಗರ: ದೇಶದ ಸಮಗ್ರ ಅಭಿವೃದ್ಧಿ ಹಾಗೂ ಆರ್ಥಿಕ ಬೆಳವಣಿಗೆಗೆ ಉತ್ತಮ ಆರ್ಥಿಕ ನೀತಿಯನ್ನು ರೂಪಿಸಿ, ಭಾರತವನ್ನು ಎತ್ತರಕ್ಕೆ ಬೆಳೆಸಿದ ಕೀರ್ತಿ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರಿಗೆ ಸಲ್ಲುತ್ತದೆ ಎಂದು ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್ ಸ್ಮರಿಸಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಮನಮೋಹನ್ ಸಿಂಗ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಎರಡು ಬಾರಿ ಪ್ರಧಾನಿಯಾಗಿ ಉತ್ತಮ ಆಡಳಿತ ನಡೆಸುವ ಜೊತೆಗೆ ಸಮಗ್ರ ಅಭಿವೃದ್ಧಿಗೆ ಭದ್ರ ಬುನಾದಿ ಹಾಕಿದ್ದರು. ಆರ್ಥಿಕ ತಜ್ಞರಾಗಿದ್ದ ಮನಮೋಹನ್ ಸಿಂಗ್ ದೇಶದ ರೈತಾಪಿ ಹಾಗೂ ದುಡಿಯುವ ವರ್ಗಗಳಿಗೆ ಅನುಕೂಲವಾಗುವಂತಹ ಬಹಳಷ್ಟು ಯೋಜನೆಗಳನ್ನು ರೂಪಿಸಿದ್ದರು ಎಂದರು.

ಆಹಾರ ಭದ್ರತೆ ಕಾಯ್ದೆ ಜಾರಿಗೊಳಿಸಿ ಹಸಿದವರು, ಬಡವರು ಕಡ್ಡಾಯವಾಗಿ ಸರ್ಕಾರದಿಂದ ಆಹಾರ ಪಡೆಯುವ ಹಕ್ಕು ನೀಡಿದರು. ಮನಮೋಹನ್ ಸಿಂಗ್ ಅವರ ಆರ್ಥಿಕ ಶಿಸ್ತು ಮತ್ತು ಚಿಂತನೆ ಫಲವಾಗಿ ದೇಶದ ಇತಿಹಾಸದಲ್ಲೇ 2006–2007ರಲ್ಲಿ ಜಿಡಿಪಿ ದರ ಶೇ.10.08 ಮಟ್ಟಕ್ಕೆ ತಲುಪುವಂತೆ ಮಾಡಿದ್ದರು. ಅವರ ತತ್ವಾದರ್ಶಗಳು ನಮ್ಮೆಲ್ಲರಿಗೂ ದಾರಿದೀಪವಾಗಿವೆ ಎಂದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎ.ಎಸ್.ಗುರುಸ್ವಾಮಿ, ಮಹಮದ್ ಅಸ್ಗರ್, ಜಿಲ್ಲಾ ವಕ್ತಾರ ಕೆರೆಹಳ್ಳಿ ನವೀನ್, ಎಪಿಎಂಸಿ ಮಾಜಿ ಅಧ್ಯಕ್ಷ ಸೋಮೇಶ್, ಅಯೂಬ್ ಖಾನ್, ಎಚ್‌ಎನ್ ಖಾನ್, ಇಮ್ರಾನ್, ಕಾಗಲವಾಡಿ ಚಂದ್ರು, ಚುಡಾ ಸದಸ್ಯ ಎಸ್.ರಾಜು, ಕಾಗಲವಾಡಿ ಚಂದ್ರು, ಹೆಬ್ಬಸೂರು ರಂಗಸ್ವಾಮಿ, ವೀರಭದ್ರಸ್ವಾಮಿ, ಕರಿನಂಜನಪುರಸ್ವಾಮಿ, ಮಹೇಶ್ ಕುದರ್, ಸೋಮಣ್ಣ, ಮಹದೇವಶೆಟ್ಟಿ, ಕಾಡಹಳ್ಳಿ ರೂಪೇಶ್, ಕುಮಾರ್, ಮಹದೇವಯ್ಯ ಮೊದಲಾದವರು ಇದ್ದರು.

ಮಲೆ ಮಹದೇಶ್ವರಬೆಟ್ಟದಲ್ಲಿ ಮುಂದಿನ ತಿಂಗಳು ಸಚಿವ ಸಂಪುಟ ಸಭೆ ಹಿನ್ನೆಲೆ

ಸಿದ್ಧತೆ ಪರಿಶೀಲಿಸಿದ ಜಿಲ್ಲಾಧಿಕಾರಿ ಶಿಲ್ಪನಾಗ್

ಹನೂರು, ಡಿ.27–ತಾಲೂಕಿನ ಮಲೆ ಮಹದೇಶ್ವರಬೆಟ್ಟದಲ್ಲಿ ಜನವರಿಯಲ್ಲಿ ರಾಜ್ಯ ಸರ್ಕಾರದ ಸಚಿವ ಸಂಪುಟ ಸಭೆ ನಡೆಸಲು ತೀರ್ಮಾನಿಸಲಾಗಿದ್ದು, ಇದಕ್ಕಾಗಿ ಜಿಲ್ಲಾಡಳಿತದಿಂದ ಸಕಲ ಸಿದ್ಧತೆ ಕೈಗೊಳ್ಳಲಾಗುತ್ತಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ನಡೆಯಲಿರುವ ಸಂಪುಟ ಸಭೆಯಿಂದ ಜಿಲ್ಲೆಯ ಅಭಿವೃದ್ಧಿಗೆ ಪೂರಕವಾದ ಯೋಜನೆಗಳು ಜಾರಿಯಾಗಲಿದೆ ಎಂಬ ನಿರೀಕ್ಷೆ ಜಿಲ್ಲೆಯ ಜನರಲ್ಲಿ ಮೂಡಿದ್ದು, ಇದಕ್ಕಾಗಿ ಜಿಲ್ಲೆಯ ಅಧಿಕಾರಿಗಳು ಎಲ್ಲಾ ತಯಾರಿ ನಡೆಸುತ್ತಿದ್ದಾರೆ.

ವಿವಿಧ ಸಮಿತಿ ರಚನೆ: ಸಚಿವ ಸಂಪುಟ ಸಭೆ ಮಹದೇಶ್ವರಬೆಟ್ಟದಲ್ಲಿ ನಡೆಯಲಿರುವುದರಿಂದ ಸಕಲ ಸಿದ್ಧತೆ ಸಂಬಂಧ ವಿವಿಧ ಸಮಿತಿಗಳನ್ನು ಜಿಲ್ಲಾಧಿಕಾರಿ ಶಿಲ್ಪನಾಗ್ ರಚಿಸಿದ್ದು, ಯಾವುದೇ ಲೋಪದೋಷ ಆಗದಂತೆ ಕ್ರಮ ಕೈಗೊಳ್ಳಬೇಕು ಎಂದು ಸಮಿತಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ನಾಗಮಲೆ ಭವನದಲ್ಲಿ ಸಭೆ: ಮಹದೇಶ್ವರಬೆಟ್ಟ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ನಾಗಮಲೆ ಭವನದಲ್ಲಿ ಶುಕ್ರವಾರ ಜಿಲ್ಲಾಧಿಕಾರಿ ಶಿಲ್ಪನಾಗ್ ನೇತೃತ್ವದಲ್ಲಿ ಪೂರ್ವಭಾವಿ ಸಭೆ ನಡೆಸಲಾಯಿತು.



ಮಹದೇಶ್ವರಬೆಟ್ಟದಲ್ಲಿ ನಡೆಯುತ್ತಿರುವ ವಿವಿಧ ಕಾಮಗಾರಿಗಳನ್ನು ಡಿಸಿ ಶಿಲ್ಪನಾಗ್, ಶಾಸಕ ಎಂ.ಆರ್.ಮಂಜುನಾಥ್ ಪರಿಶೀಲನೆ ನಡೆಸಿದರು.

ಈ ವೇಳೆ ಜಿಲ್ಲಾಧಿಕಾರಿ ಮಾತನಾಡಿ, ಸಚಿವ ಸಂಪುಟ ಸಭೆಯನ್ನು ಮಹದೇಶ್ವರ ಬೆಟ್ಟದಲ್ಲಿ ಮೊದಲ ಬಾರಿಗೆ ನಡೆಸುತ್ತಿದ್ದು, ಎಲ್ಲಾ ಸಚಿವರು, ಶಾಸಕರು ಮತ್ತು ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಹೀಗಾಗಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಯಾವುದೇ ಲೋಪದೋಷ ಆಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶಿಸಿದರು.

ವಿವಿಧೆಡೆ ಪರಿಶೀಲನೆ: ಮಹದೇಶ್ವರಬೆಟ್ಟದಲ್ಲಿ ಮಹದೇಶ್ವರಸ್ವಾಮಿ ಪ್ರತಿಮೆ ಸ್ಥಳದಲ್ಲಿ ನಡೆಯುತ್ತಿರುವ ಕಾಮಗಾರಿ ಪರಿಶೀಲನೆ ನಡೆಸಿ, ನಿಗದಿತ ಸಮಯದಲ್ಲಿ ಪೂರ್ಣಗೊಳಿಸಿ ಸಕಲ ಸಿದ್ಧತೆಯೊಂದಿಗೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಯುಜಿಡಿ ಕಾಮಗಾರಿ ಪರಿಶೀಲನೆ: ಬೆಟ್ಟದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಲು ಬಹುನಿರೀಕ್ಷಿತ ಯುಜಿಡಿ ಕಾಮಗಾರಿಯನ್ನು ಪರಿಶೀಲಿಸಿ, ಕಾಮಗಾರಿ ಗುಣಮಟ್ಟದಿಂದ ನಿಗದಿತ ಸಮಯದಲ್ಲಿ ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ತಿಳಿಸಿದರು.

ಪರಿಶೀಲನೆ: ಬೆಟ್ಟದಲ್ಲಿ ಬಹುನಿರೀಕ್ಷಿತ 512 ಕೊಠಡಿ ಕಾಮಗಾರಿ ನಡೆಯುತ್ತಿರುವ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಜೊತೆಗೆ ಸಚಿವ ಸಂಪುಟ ಸಭೆ ಬೆಟ್ಟದಲ್ಲಿ ನಡೆಯಲಿರುವುದರಿಂದ ಹೆಚ್ಚುವರಿ ಹೆಲಿಪ್ಯಾಡ್ ನಿರ್ಮಿಸಲು ಸ್ಥಳ ಪರಿಶೀಲಿಸಿದರು. ನಂತರ ಬೆಟ್ಟದ ಧಾರ್ಮಿಕ ಕ್ಷೇತ್ರದಲ್ಲಿ ಭಕ್ತರ ಸಕಲ ಸಿದ್ಧತೆಗಳ ಬಗ್ಗೆ ಪ್ರಸ್ತಾವನೆ ಸಲ್ಲಿಸಲು ಸಿದ್ಧತೆಗೊಳಿಸುವಂತೆ ಅಧಿಕಾರಿಗಳಿಗೆ ಆದೇಶಿಸಿದರು.

> ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ನೇತೃತ್ವದಲ್ಲಿ ಮಹದೇಶ್ವರಬೆಟ್ಟದಲ್ಲಿ ಮೊದಲ ಬಾರಿಗೆ ಸಚಿವ ಸಂಪುಟ ಸಭೆ ನಡೆಯಲಿದ್ದು, ಯಾವುದೇ ಲೋಪದೋಷ ಆಗದಂತೆ ಜಿಲ್ಲೆ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು.
> –ಸಿ.ಟಿ.ಶಿಲ್ಪಾನಾಗ್, ಜಿಲ್ಲಾಧಿಕಾರಿ

ಈ ವೇಳೆ ಸಾಲೂರು ಬೃಹನ್ ಮಠದ ಪೀಠಾಧಿಪತಿ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಶಾಸಕ ಎಂ.ಆರ್.ಮಂಜುನಾಥ್, ಮಹದೇಶ್ವರಬೆಟ್ಟ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ಎ.ಇ.ರಘು, ಉಪಕಾರ್ಯದರ್ಶಿ ಚಂದ್ರಶೇಖರ್, ಡಿವೈಎಸ್‌ಪಿ ಧರ್ಮೇಂದರ್, ಉಪವಿಭಾಗಾಧಿಕಾರಿ ಮಹೇಶ್, ತಹಸೀಲ್ದಾರ್ ಗುರುಪ್ರಸಾದ್, ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

800 ಮಂದಿಗೆ ಆರೋಗ್ಯ ತಪಾಸಣೆ



ಚಾಮರಾಜನಗರ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನಡೆದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಡಾ.ಚಿದಂಬರ್ ಉದ್ಘಾಟಿಸಿದರು.

ಚಾಮರಾಜನಗರ: ನಗರದ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಮೈಸೂರು ಜೆಎಸ್‌ಎಸ್ ಆಸ್ಪತ್ರೆ, ಡಾ.ಬಾಬು ಸೋಶಿಯಲ್ ವೆಲ್‌ಫೇರ್ ಅಂಡ್ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಇಎನ್‌ಟಿ ರಿಸರ್ಚ್ ಅಂಡ್ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ನಡೆದ ಉಚಿತ ಶಿಬಿರದಲ್ಲಿ 800 ಮಂದಿಗೆ ಆರೋಗ್ಯ ತಪಾಸಣೆ ನಡೆಸಲಾಯಿತು.

ಶಿಬಿರಕ್ಕೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಚಿದಂಬರ್ ಚಾಲನೆ ನೀಡಿದರು. ಬಳಿಕ ಆಸ್ಪತ್ರೆ ವಿವಿಧ ವಿಭಾಗದ ತಜ್ಞ ವೈದ್ಯರ ತಂಡ ತಪಾಸಣೆ ನಡೆಸಿತು. ಕಿವಿ, ಮೂಗು, ಗಂಟಲು ತೊಂದರೆಯುಳ್ಳ 400 ಮಂದಿಗೆ ತಪಾಸಣೆ, ಅಲರ್ಜಿ ಅಸ್ತಮಾ ತೊಂದರೆಯುಳ್ಳ 105, ಕಣ್ಣಿನ ತೊಂದರೆಯುಳ್ಳ 150 ಮಂದಿ ತಪಾಸಣೆ ನಡೆಸಲಾಯಿತು. ಕಣ್ಣಿನ ಪೊರೆಯುಳ್ಳ 20 ಮಂದಿಯನ್ನು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ಕಳುಹಿಸಲಾಯಿತು. ಕಿವುಡುತನವುಳ್ಳ 150 ಮಂದಿಯನ್ನು ಗುರುತಿಸಿ, ಅವರಿಗೆ ಚಿಕಿತ್ಸೆ ನೀಡುವ ಜೊತೆಗೆ ಎಲ್ಲರಿಗೂ ವಾಕ್ ಶ್ರವಣ ಯಂತ್ರವನ್ನು ಉಚಿತವಾಗಿ ನೀಡಲಾಗುವುದು ಎಂದು ಶಿಬಿರದ ಆಯೋಜಕ ಡಾ.ಎ.ಆರ್.ಬಾಬು ತಿಳಿಸಿದರು.

ಕಾರ್ಯಕ್ರಮದಲ್ಲಿ ಇಎನ್‌ಟಿ ರಿಸರ್ಚ್ ಅಂಡ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷೆ ಡಾ.ಭಾರತಿ, ನಗರಸಭೆ ಅಧ್ಯಕ್ಷ ಸುರೇಶ್, ಉಪಾಧ್ಯಕ್ಷೆ ಮಮತಾ ಬಾಲಸುಬ್ರಮಣ್ಯ, ಜೆಎಸ್‌ಎಸ್ ಆಸ್ಪತ್ರೆ ವೈದ್ಯಾಧಿಕಾರಿ ವಿಕಾಸ್, ವೈದ್ಯರು, ಸಿಬ್ಬಂದಿ ಉಪಸ್ಥಿತರಿದ್ದರು.

ಸಂವಿಧಾನದಿಂದ ಕಟ್ಟಕಡೆ ವ್ಯಕ್ತಿಗೂ ಉನ್ನತ ಸ್ಥಾನ



ಚಾಮರಾಜನಗರ ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಸಂವಿಧಾನ ಅರಿವು ಕಾರ್ಯಕ್ರಮವನ್ನು ಪ್ರಾಂಶುಪಾಲ ಮಹದೇವಸ್ವಾಮಿ ಉದ್ಘಾಟಿಸಿದರು.

ಚಾಮರಾಜನಗರ. ಡಿ.27–ಅಂಬೇಡ್ಕರ್ ಇಡೀ ವಿಶ್ವವೇ ಮೆಚ್ಚುವ ಸಂವಿಧಾನ ರಚಿಸಿದ್ದು, ಇದರಿಂದ ಸಮಾಜದ ಕಟ್ಟಕಡೆ ವ್ಯಕ್ತಿ ಉನ್ನತ ಸ್ಥಾನಮಾನ ಪಡೆಯಲು ಸಾಧ್ಯವಾಗಿದೆ ಎಂದು ಚಾಮರಾಜನಗರ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಅಭಿಪ್ರಾಯಪಟ್ಟರು.


ನಗರದ ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜಿನಲ್ಲಿ ಜನಹಿತಾಶಕ್ತಿ ಹೋರಾಟ ವೇದಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಡೆದ ಸಂವಿಧಾನ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ದೇಶದ ಅಭಿವೃದ್ಧಿಗೆ ಸುಭದ್ರ ಸಂವಿಧಾನ ರಚಿಸಿದ್ದಾರೆ. ಶಾಲಾ–ಕಾಲೇಜು ವಿದ್ಯಾರ್ಥಿಗಳು ವಿದ್ಯಾರ್ಥಿ ದೆಸೆಯಲ್ಲೇ ಸಂವಿಧಾನ ಅಧ್ಯಯನ ಮಾಡಬೇಕು. ನಾವು ಇಂದು ಉನ್ನತಮಟ್ಟದ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದೇವೆ ಎಂದರೆ ಅದಕ್ಕೆ ಸಂವಿಧಾನವೇ ಕಾರಣ ಎಂದು ತಿಳಿಸಿದರು.

ಪ್ರಾಂಶುಪಾಲ ಸಿ.ರಂಗಸ್ವಾಮಿ ಮಾತನಾಡಿ, ಅಂಬೇಡ್ಕರ್ ಪ್ರಪಂಚದ 60 ದೇಶಗಳಿಗೆ ಭೇಟಿ ಅಲ್ಲಿನ ಸಂವಿಧಾನ ಓದಿ, ವಿವಿಧ ಭಾಷೆ, ಧರ್ಮ, ಜಾತಿ ಮತಗಳಿರುವ ಭಾರತ ಭವಿಷ್ಯದ ದೃಷ್ಟಿಯಿಂದ ಉತ್ತಮ ಸಂವಿಧಾನ ರಚಿಸಿದ್ದಾರೆ. ಇದರಿಂದ ಸಮಾಜದ ಎಲ್ಲಾ ವರ್ಗದವರು ಸಂವಿಧಾನಾತ್ಮಕ ಸೌಲಭ್ಯ ಪಡೆಯಲು ಸಾಧ್ಯವಾಗಿದೆ ಎಂದರು. ಜನಹಿತಾಶಕ್ತಿ ಹೋರಾಟ ವೇದಿಕೆ ಜಿಲ್ಲಾಧ್ಯಕ್ಷ ರಾಮಸಮುದ್ರ ಸುರೇಶ್, ಉಪನ್ಯಾಸಕರಾದ ಶಶಿಕಲಾ, ಕುಸುಮ, ವಿದ್ಯಾರ್ಥಿಗಳು ಹಾಜರಿದ್ದರು.

ಪಡಿತರ ಅಕ್ಕಿ ಸಾಗಣೆ: ಓರ್ವ ಬಂಧನ

ಯಳಂದೂರು, ಡಿ.27–ಅಕ್ರಮವಾಗಿ ಪಡಿತರ ಅಕ್ಕಿ ಸಾಗಿಸುತ್ತಿದ್ದ ಓರ್ವನನ್ನು ಬಂಧಿಸಿರುವ ಅಗರ ಮಾಂಬಳ್ಳಿ ಪೊಲೀಸರು, 760 ಕೆಜಿ ಅಕ್ಕಿ ಹಾಗೂ ವ್ಯಾನ್ ಅನ್ನು ವಶಪಡಿಸಿಕೊಂಡಿದ್ದಾರೆ.

ಕೊಳ್ಳೇಗಾಲ ಈದ್ಗಾ ಮೊಹಲ್ಲಾ ನಿವಾಸಿ ಈದಾಯತ್ (34) ಬಂಧಿತ. ತಾಲೂಕಿನ ಕಿನಕಹಳ್ಳಿಯಿಂದ ಕೊಳ್ಳೇಗಾಲ ಕಡೆಗೆ ಪಡಿತರ ಅಕ್ಕಿಯನ್ನು ವ್ಯಾನ್‌ನಲ್ಲಿ ಸಾಗಿಸುತ್ತಿದ್ದ. ಈ ವೇಳೆ ದಾಳಿ ನಡೆಸಿದ ಪೊಲೀಸರು, ಈದಾಯತ್‌ನನ್ನು ಬಂಧಿಸಿ, 11,350 ರೂ. ಮೌಲ್ಯದ ಅಕ್ಕಿಯನ್ನು ವಶಪಡಿಸಿ ಕೊಂಡಿದ್ದಾರೆ. ಕಾರ್ಯಾಚರಣೆಯಲ್ಲಿ ಸಬ್‌ಇನ್ಸ್‌ಪೆಕ್ಟರ್ ಕರಿಬಸಪ್ಪ ಹಾಗೂ ಆಹಾರ ನಿರೀಕ್ಷಕ ಬಿಸಲಯ್ಯ, ಸಿಬ್ಬಂದಿ ಪರಶಿವಮೂರ್ತಿ, ಸಿದ್ದರಾಜು, ಶಿವಕುಮಾರ್, ಅಭಿಷೇಕ್, ಪ್ರಕಾಶ್ ಭಾಗವಹಿಸಿದ್ದರು. ಈ ಸಂಬಂಧ ಅಗರ–ಮಾಂಬಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಅಕ್ರಮವಾಗಿ ಪಡಿತರ ಅಕ್ಕಿ ಸಾಗಿಸುತ್ತಿದ್ದ ವ್ಯಾನ್ ವಶಪಡಿಸಿಕೊಂಡಿರುವುದು.

ಯಳಂದೂರಲ್ಲಿ ಮನಮೋಹನ್ ಸಿಂಗ್‌ಗೆ ಶ್ರದ್ಧಾಂಜಲಿ...



ಯಳಂದೂರಿನ ಬ್ಲಾಕ್ ಕಾಂಗ್ರೆಸ್ ಕಚೇರಿಯಲ್ಲಿ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಪಟ್ಟಣ ಪಂಚಾಯಿತಿ ಸದಸ್ಯರಾದ ವೈ.ಜಿ.ರಂಗನಾಥ್, ಮಹೇಶ್, ರವಿ, ನಾಮನಿರ್ದೇಶನ ಸದಸ್ಯರಾದ ಬಳೇಪೇಟೆ ಲಿಂಗರಾಜುಮೂರ್ತಿ, ಮುನವ್ವರ್ ಬೇಗ್, ಕಾಂಗ್ರೆಸ್ ಮುಖಂಡರಾದ ಗುಂಬಳ್ಳಿ ರಾಜಣ್ಣ, ಮಲ್ಲು, ಪ್ರಕಾಶ್, ರಾಚಶೆಟ್ಟಿ, ಉಪ್ಪಿನಮೋಳೆ ಮಹೇಶ್ ಇತರರಿದ್ದರು.

ಮೈಸೂರು ರೈಲ್ವೆ ನಿಲ್ದಾಣದ ಬಳಿ ಸಾರಿಗೆ ಬಸ್‌ನಲ್ಲಿ ಬೆಂಕಿ



ಬೆಂಕಿ ನಂದಿಸುತ್ತಿರುವ ಅಗ್ನಿಶಾಮಕ ದಳ ಸಿಬ್ಬಂದಿ.

ಮೈಸೂರು, ಡಿ. 27(ಆರ್‌ಕೆ)– ಚಲಿಸುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಆಕಸ್ಮಿಕ ಬೆಂಕಿ ಕಾಣಿಸಿಕೊಂಡು ಕೆಲ ಕಾಲ ಆತಂಕ ಪರಿಸ್ಥಿತಿ ಉಂಟಾದ ಘಟನೆ ಮೈಸೂರಿನ ರೈಲ್ವೆ ನಿಲ್ದಾಣ ಬಳಿಯ ದಾಸಪ್ಪ ಸರ್ಕಲ್‌ನಲ್ಲಿ ಇಂದು ಮಧ್ಯಾಹ್ನ ಸಂಭವಿಸಿದೆ.

ಮೈಸೂರಿನ ಸಬರ್ಬನ್ ಬಸ್ ನಿಲ್ದಾಣದಿಂದ ವಿರಾಜಪೇಟೆಗೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ (ಕೆಎ 09–ಎಫ್ 4386) ದಾಸಪ್ಪ ವೃತ್ತ ತಲುಪುತ್ತಿದ್ದಂತೆಯೇ ಇಂಜಿನ್‌ನಲ್ಲಿ ದಿಢೀರ್ ಬೆಂಕಿ ಕಾಣಿಸಿಕೊಂಡಿತು. ತಕ್ಷಣ ಎಚ್ಚೆತ್ತ ಬಸ್ ಚಾಲಕ ಹಾಗೂ ಕಂಡಕ್ಟರ್ ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ತಕ್ಷಣ ಸ್ಥಳಕ್ಕೆ ಧಾವಿಸಿದ ಸಿಬ್ಬಂದಿ ಬೆಂಕಿ ನಂದಿಸಿದರು. ಅಷ್ಟರಲ್ಲಿ ಬಸ್‌ನಲ್ಲಿದ್ದ ಪ್ರಯಾಣಿಕರನ್ನು ಕೆಳಗಿಳಿಸಿದ ಕಂಡಕ್ಟರ್ ಬಸ್ ಅನ್ನು ಪಕ್ಕಕ್ಕೆ ನಿಲ್ಲಿಸುವಂತೆ ಸೂಚನೆ ನೀಡಿ ಪ್ರಯಾಣಿಕರನ್ನು ಅಪಾಯದಿಂದ ಪಾರು ಮಾಡಿದರು. ಅದೃಷ್ಟವಶಾತ್ ಯಾರಿಗೂ ತೊಂದರೆ ಆಗಿಲ್ಲ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ದೇವರಾಜ ಠಾಣೆ ಪೊಲೀಸರು ಮಹಜರು ನಡೆಸಿದರು.

ದತ್ತಾತ್ರೇಯ ಉತ್ಸವ



ದತ್ತಾತ್ರೇಯ ಜಯಂತಿ ಅಂಗವಾಗಿ ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ ಶ್ರೀ ಸತ್ಯನಾರಾಯಣ ದತ್ತಾತ್ರೇಯ ದೇವಸ್ಥಾನದಿಂದ ದತ್ತಾತ್ರೇಯ ಸ್ವಾಮಿ ಉತ್ಸವ ನಡೆಸಲಾಯಿತು.

ಮೈಸೂರಲ್ಲಿ ನಾಳೆ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ಪೂರ್ವಭಾವಿ ಪರೀಕ್ಷೆ

ಮೈಸೂರು, ಡಿ.27(ಆರ್‌ಕೆ)– ಮೈಸೂರಿನ 27 ಕೇಂದ್ರಗಳಲ್ಲಿ ಡಿಸೆಂಬರ್ 29ರಂದು ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ಕರ್ನಾಟಕ ಲೋಕ ಸೇವಾ ಆಯೋಗವು ಪೂರ್ವಭಾವಿ ಪರೀಕ್ಷೆಗಳನ್ನು ನಡೆಸಲಿದೆ.

ಮಹಾರಾಣಿ, ಮಹಾರಾಜ, ಎಂ.ಜಿ. ಕೊಪ್ಪಲು ಪದವಿ ಪೂರ್ವ ಕಾಲೇಜು, ಪೀಪಲ್ಸ್ ಪಾರ್ಕ್, ಮಹಾರಾಣಿ ಮಹಿಳಾ ವಾಣಿಜ್ಯ ಕಾಲೇಜು, ಮಹಾರಾಜ ಪಿಯು ಕಾಲೇಜು, ದೇವರಾಜ, ಶಾರದ ವಿಲಾಸ, ಮಹಾಜನ, ಡಿ.ಬನುಮಯ್ಯ, ವಿದ್ಯಾವರ್ಧಕ, ಟೆರೇಷಿಯನ್, ಸೆಂಟ್ ಥಾಮಸ್, ಜೆಎಸ್‌ಎಸ್, ವಿಜಯ ವಿಠಲ ಪಿಯು ಕಾಲೇಜು ಸೇರಿದಂತೆ ಮೈಸೂರಿನ ಒಟ್ಟು 27 ಕಾಲೇಜು ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ.

ಪರೀಕ್ಷೆ ಹಿನ್ನೆಲೆಯಲ್ಲಿ ಡಿಸೆಂಬರ್ 29ರಂದು ಬೆಳಗ್ಗೆ 6ರಿಂದ ಸಂಜೆ 6 ಗಂಟೆವರೆಗೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023ರ ಸೆಕ್ಷನ್ 163 ರೀತ್ಯಾ ಕೇಂದ್ರಗಳ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಆದೇಶಿಸಿದ್ದಾರೆ.

ಈ ಪ್ರದೇಶದಲ್ಲಿ ಪರೀಕ್ಷಾರ್ಥಿಗಳು ಹಾಗೂ ಸಿಬ್ಬಂದಿಗಳನ್ನು ಹೊರತುಪಡಿಸಿ ಬೇರೆ ವ್ಯಕ್ತಿಗಳು ಸಂಚರಿಸಬಾರದು ಹಾಗೂ ಸುತ್ತಲಿನ ಜೆರಾಕ್ಸ್ ಅಂಗಡಿಗಳನ್ನು ಬಂದ್ ಮಾಡಿಸಬೇಕೆಂದು ಆಯುಕ್ತರು ಆದೇಶದಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ 45 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್‌ಗೆ ಶ್ರದ್ಧಾಂಜಲಿ

ತಿ.ನರಸೀಪುರ/ನಂಜನಗೂಡು, ಡಿ.27– ಭಾರತದ ಆರ್ಥಿಕ ಸುಧಾರಣೆಯ ಹರಿಕಾರ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರಿಗೆ ತಿ.ನರಸೀಪುರ, ನಂಜನಗೂಡಿನಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.





ಮಾಜಿ ಪ್ರಧಾನಿ ಡಾ.ಮನಮೋಹನ ಸಿಂಗ್ ಅವರಿಗೆ ತಿ.ನರಸೀಪುರ ಹಾಗೂ ನಂಜನಗೂಡಿನಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ತಿ.ನರಸೀಪುರ: ಆರ್ಥಿಕ ಸುಧಾರಣೆಗಳು, ಉದಾರೀಕರಣ ನೀತಿಗಳನ್ನು ಜಾರಿಗೆ ತರುವ ಮೂಲಕ ಭಾರತದ ಅರ್ಥ ವ್ಯವಸ್ಥೆಗೆ ಹೊಸ ದಿಕ್ಕು ತೋರಿಸಿದ ಕೀರ್ತಿ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರಿಗೆ ಸಲ್ಲುತ್ತದೆ ಎಂದು ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ ತಿಳಿಸಿದರು.

ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ನಿಧನರಾದ ಹಿನ್ನೆಲೆಯಲ್ಲಿ ಪಟ್ಟಣದ ನಾಗರಿಕ ವೇದಿಕೆಯಿಂದ ವಿದ್ಯೋದಯ ಕಾಲೇಜು ವೃತ್ತದ ಶಿವಾನಂದ ಶರ್ಮಾ ಪ್ರತಿಮೆ ಬಳಿ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಮನಮೋಹನ್ ಸಿಂಗ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು. ಹಣಕಾಸು ಸಚಿವರಾಗಿ ಅವರು ಭಾರತವನ್ನು ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣದತ್ತ ಮುನ್ನಡೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಇಂದು ಭಾರತ ಜಾಗತಿಕ ಮಟ್ಟದಲ್ಲಿ ಆರ್ಥಿಕ ಪ್ರಗತಿ ಸಾಧಿಸಿದ್ದರೆ ಅದಕ್ಕೆ ಪ್ರಮುಖ ಕಾರಣ ಮನಮೋಹನ್ ಸಿಂಗ್ ಅವರ ಕ್ರಾಂತಿಕಾರಿ ನೀತಿಗಳು. ದೇಶ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾಗ ಜಾಗತೀಕರಣಕ್ಕೆ ಒಡ್ಡಿಕೊಳ್ಳುವ ಮೂಲಕ ದೇಶ ಕಾಪಾಡಿದ ಆಪದ್ಬಾಂಧವ. ಇಂದು ಸಿಂಗ್ ಅವರು ದೈಹಿಕವಾಗಿ ನಮ್ಮಿಂದ ದೂರವಾಗಿರಬಹುದು. ಆದರೆ ಅವರು ಈ ದೇಶಕ್ಕೆ ನೀಡಿರುವ ಕೊಡುಗೆ ಮೂಲಕ ಸದಾ ಜೀವಂತವಾಗಿರುತ್ತಾರೆ ಎಂದರು.

ಕೃಷಿಕ ಸಮಾಜದ ಅಧ್ಯಕ್ಷ ಬಿ.ಎಂ.ಶಿವಮಲ್ಲಪ್ಪ ಮಾತನಾಡಿ, 1991ರಿಂದ 1996ರವರೆಗೆ ಡಾ.ಮನಮೋಹನ್ ಸಿಂಗ್ ಅವರು ಭಾರತದ ಹಣಕಾಸು ಸಚಿವರಾಗಿ ಸೇವೆ ಸಲ್ಲಿಸಿದ ವೇಳೆ ಸ್ವತಂತ್ರ ಭಾರತದ ಆರ್ಥಿಕ ಇತಿಹಾಸದಲ್ಲಿ ಮಹತ್ವದ ತಿರುವು ಮೂಡಿತು. ಅವರು ಆಗ ಮಾಡಿದ ಆರ್ಥಿಕ ಸುಧಾರಣೆಗಳಿಗೆ ಈಗಲೂ ವಿಶ್ವ ಮನ್ನಣೆ ಇದೆ. ಡಾ.ಮನಮೋಹನ ಸಿಂಗ್ ಅವರು ಸಾಮಾಜಿಕ ಕ್ಷೇತ್ರದ ತಮ್ಮ ಅದ್ವಿತೀಯ ಸಾಧನೆಗಾಗಿ ಹತ್ತು ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದು, ಪ್ರಧಾನಿ ಹುದ್ದೆ ಅಲಂಕರಿಸಿದ ಮೊದಲ ಸಿಖ್ ವ್ಯಕ್ತಿಯಾಗಿ ಡಾ.ಸಿಂಗ್ ತಮ್ಮದೇ ಛಾಪು ಮೂಡಿಸಿದ್ದರು. ಅವರ ನಾಯಕತ್ವ ಗಮನಾರ್ಹವಾದ ಆರ್ಥಿಕ ಪರಿವರ್ತನೆ ಮಾಡಿದ್ದಲ್ಲದೇ, ಕಷ್ಟ ಕಾಲದಲ್ಲಿ ಭಾರತವನ್ನು ಮುನ್ನಡೆಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು.

ಮನಮೋಹನ ಸಿಂಗ್ ಅವರು ಆರ್ಥಿಕ ಸಚಿವರಾಗಿ ಅಧಿಕಾರ ಸ್ವೀಕರಿಸಿದಾಗ ಭಾರತ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿತ್ತು. ಈ ಸಂದರ್ಭ ಸಿಂಗ್ ಅವರ ದಿಟ್ಟ ಆರ್ಥಿಕ ಸುಧಾರಣೆಗಳು ದೇಶದ ಆರ್ಥಿಕ ಮಾರ್ಗವನ್ನು ಪರಿವರ್ತಿಸಲು ಸಾಕಷ್ಟು ಕೆಲಸ ಮಾಡಿತು. ಅವರು ಆಗ ಕೈಗೊಂಡ ನಿರ್ಣಾಯಕ ಉದಾರೀಕರಣ ಕ್ರಮಗಳಿಂದ ದೇಶದ ಹಣಕಾಸು ಪರಿಸ್ಥಿತಿ ಸುಧಾರಣೆ ಕಂಡಿತು. ಈ ವೇಳೆ ಅವರು ರೂಪಾಯಿ ಅಪಮೌಲ್ಯಗೊಳಿಸಿ ತೆರಿಗೆ ಹೊರೆಗಳನ್ನು ಕಡಿಮೆ ಮಾಡಿದರು. ದೇಶವನ್ನು ಸರಿಯಾದ ಹಳಿಗೆ ತರಲು, ವಿದೇಶಿ ಹೂಡಿಕೆಯನ್ನು ಆಕರ್ಷಿಸಿದರು. ಈ ಮೂಲಕ ಭಾರತದ ಆರ್ಥಿಕತೆ ಸ್ಥಿರಗೊಳಿಸಿದರು ಮತ್ತು ಭವಿಷ್ಯದ ಬೆಳವಣಿಗೆಗೆ ವೇದಿಕೆ ಸಿದ್ಧಪಡಿಸಿದರು ಎಂದು ಸ್ಮರಿಸಿದರು.

ಕೃಷಿಕ ಸಮಾಜದ ನಿರ್ದೇಶಕರಾದ ಆಲಗೂಡು ನಾಗರಾಜು, ಹಿರಿಯೂರು ಪಿ.ವಿರೂಪಾಕ್ಷ, ಆದಿಬೆಟ್ಟಹಳ್ಳಿ ನಂಜುಂಡಸ್ವಾಮಿ, ಹೊಸೂರುಹುಂಡಿ ನಾಗರಾಜು, ಅಕ್ಕಿ ನಾಗಪ್ಪ, ಅನಾಥ ಶವಗಳ ಮುಕ್ತಿದಾತ ಡಾ.ಎಂ.ಮಾದೇಶ್, ಮಣಿಕಂಠ ರಾಜ್‌ಗೌಡ, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ತಾಪಂ ಮಾಜಿ ಸದಸ್ಯ ಎಂ.ರಮೇಶ್, ತಾಲೂಕು ವೀರಶೈವ ಸಮಾಜದ ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್, ನಿವೃತ್ತ ಕೆಇಬಿ ನೌಕರ ಸಿದ್ದಲಿಂಗಸ್ವಾಮಿ, ಮೆಡಿಕಲ್ ಕುಮಾರ್, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸೋಮಶೇಖರಪ್ಪ, ತೊಂಟೇಶ್, ಅಂಗಡಿ ನಾಗೇಶ್, ಚೌಹಳ್ಳಿ ಮಲ್ಲೇಶ್, ಕಿರಗಸೂರು ಶಂಕರ್, ಪ್ರಸಾದ್ ನಾಯಕ್, ಬೃಂದಾ ಆಸ್ಪತ್ರೆ ಗುರು, ವಕೀಲ ಜ್ಞಾನೇಂದ್ರ ಮೂರ್ತಿ, ಆಡಿಟರ್ ಮಂಜುನಾಥ್, ಧರ್ಮಯ್ಯನ ಹುಂಡಿಪ್ರಭು ಕೆಎಸ್‌ಐಸಿ ನಾಗೇಂದ್ರ ಮತ್ತಿತರಿದ್ದರು.

ನಂಜನಗೂಡು: ಡಾ.ಮನಮೋಹನ ಸಿಂಗ್ ಅವರು ಖ್ಯಾತ ಅರ್ಥಶಾಸ್ತ್ರಜ್ಞ, ಹಣಕಾಸು ಸಚಿವರಾಗಿ ಭಾರತದ ಆರ್ಥಿಕತೆಗೆ ಭದ್ರ ಬುನಾದಿ ಹಾಕಿದ್ದರಲ್ಲದೆ ಪ್ರಧಾನಿಯಾಗಿ ದೇಶವನ್ನು ಪ್ರಗತಿ ಯತ್ತ ನಡೆಸಿದ ಮಹಾನ್ ನಾಯಕ ಎಂದು ಮಾಜಿ ಶಾಸಕ ಕೇಶವಮೂರ್ತಿ ಹೇಳಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಡಾ.ಮನಮೋಹನ್ ಸಿಂಗ್ ಅವರಿಗೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಡಾ.ಮನಮೋಹನ್ ಸಿಂಗ್ ಅವರು ದೇಶದ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ, ಉದಾರೀಕರಣದಂತಹ ಕಾರ್ಯಕ್ರಮಗಳನ್ನು ಪರಿಚಯಿಸಿ ದೇಶದ ಆರ್ಥಿಕ ಪರಿಸ್ಥಿತಿ ಚೇತರಿಕೆಗೆ ಕಾರಣಿಭೂತರಾಗಿದ್ದರು. ಅಂದು ಅವರು ಹಾಕಿದ್ದ ಅಡಿಪಾಯದಿಂದಾಗಿ ಭಾರತ ಇಂದು ವಿಶ್ವದ ಅತಿ ವೇಗದ ಆರ್ಥಿಕತೆಯಾಗಿ ಬೆಳೆಯಲು ಸಾಧ್ಯ ವಾಗಿದೆ. ಮನಮೋಹನ್ ಸಿಂಗ್ ಅವರು ಪಕ್ಷಾತೀತವಾಗಿ ಭಾರತದಲ್ಲಿ ಮಾತ್ರವಲ್ಲದೆ ಜಾಗತಿಕವಾಗಿ ಅಪಾರ ಗೌರವಕ್ಕೆ ಪಾತ್ರರಾಗಿದ್ದರು. ಅಂತಹ ಮೇಧಾವಿ ಅರ್ಥಶಾಸ್ತ್ರಜ್ಞ, ರಾಜಕೀಯ ಶಾಸ್ತ್ರಜ್ಞರನ್ನು ಕಳೆದುಕೊಂಡಿರುವುದು ದೇಶಕ್ಕೆ ತುಂಬಲಾರದ ನಷ್ಟ, ದೇವರು ಅವರ ಆತ್ಮಕ್ಕೆ ಶಾಂತಿ ದೊರಕುವಂತೆ ಮಾಡಲಿ, ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ನೀಡಲಿ ಎಂದರು. ಈ ವೇಳೆ ನಂಜನಗೂಡು ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿಎಂ ಶಂಕರ್, ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ, ಉಪಾಧ್ಯಕ್ಷೆ ರಿಯಾನಬಾನು, ಸದಸ್ಯರಾದ ಪ್ರದೀಪ್, ಮುಖಂಡರಾದ ನಾಗರಾಜಯ್ಯ, ಮುರಳಿ, ಗೋವಿಂದರಾಜು, ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ಮುಖಂಡರು ಹಾಜರಿದ್ದರು.

ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣಕ್ಕೆ ಅನುಮತಿ ನೀಡಿ

ರಾಜ್ಯ ರೈತ ಕಲ್ಯಾಣ ಸಂಘದ ಅಧ್ಯಕ್ಷ ಭೂಮಿಪುತ್ರ ಚಂದನ್‌ಗೌಡ



ಅರಣ್ಯಾಧಿಕಾರಿಗಳೊಂದಿಗೆ ಚಂದನ್‌ಗೌಡ ಮಾತನಾಡಿದರು.

ಸರಗೂರು, ಡಿ.27– ತಾಲೂಕಿನ ಬೇಗೂರು ಬಳಿ ಅರಣ್ಯ ಇಲಾಖೆ ಅಧಿಕಾರಿಗಳು ತಡೆಯೊಡ್ಡಿರುವ ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣ ಸ್ಥಳಕ್ಕೆ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ಅಧ್ಯಕ್ಷ ಭೂಮಿಪುತ್ರ ಚಂದನ್‌ಗೌಡ ಭೇಟಿ ನೀಡಿ ಪರಿಶೀಲಿಸಿದರು.

ಬಳಿಕ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಕರೆ ಮಾಡಿ ಅವರನ್ನು ಬರಮಾಡಿಕೊಂಡು ಮಾತನಾಡಿದ ಅವರು, ಕಾಡಂಚಿನ ಗ್ರಾಮಗಳಾದ ಹೊಸಕೋಟೆ, ಕಾಡುಬೇಗೂರು, ಸಿದ್ದಪ್ಪಾಜಿ ಕಾಲೋನಿಯ ಜನರ ಅನುಕೂಲಕ್ಕಾಗಿ ಟ್ಯಾಂಕ್ ನಿರ್ಮಾಣ ಮಾಡಲು ಅನುಮತಿ ನೀಡಬೇಕು. ಅಲ್ಲದೇ ಕಾಡುಪ್ರಾಣಿಗಳು ಹಾಗೂ ಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರ ನೀಡಬೇಕು. ಅಲ್ಲದೇ ಈ ಭಾಗದ ರೈತರ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂದು ಒತ್ತಾಯಿಸಿದರು.

ಎಸಿಎಫ್ ಸತೀಶ್ ಮಾತನಾಡಿ, ಬೇಗೂರು ಗ್ರಾಮದ ಸರ್ವೆ ನಂ.06ರಲ್ಲಿ ನಿರ್ಮಾಣವಾಗುತ್ತಿರುವ ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣ ಸ್ಥಳ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಮೊಳೆಯೂರು ವಲಯದ ಮೀಸಲು ಅರಣ್ಯವಾಗಿದೆ. ಅಲ್ಲದೇ ಕಾಮಗಾರಿ ನಡೆಸಲು ಅರಣ್ಯ ಇಲಾಖೆಯ ಇ–ಪರಿವೇಶ್ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸದ ಕಾರಣ ಕಾಮಗಾರಿಗೆ ತಡೆಯೊಡ್ಡಲಾಗಿದೆ. ಈ ಸಂಬಂಧ ನೀರಿನ ಟ್ಯಾಂಕ್ ನಿರ್ಮಾಣಕ್ಕೆ ಎಇಇ ಅವರು ಅರ್ಜಿ ಸಲ್ಲಿಸಿ ಅನುಮತಿ ದೊರೆತ ನಂತರ ಕಾಮಗಾರಿ ಪ್ರಾರಂಭಿಸಬಹುದು ಎಂದರು.

ಆರ್‌ಎಫ್‌ಓ ಅಮೃತ ಮಾತನಾಡಿ, ಇ–ಪರಿವೇಶ್ ತಂತ್ರಾಂಶದಲ್ಲಿ ಅರ್ಜಿ ಅಪ್ರೂವಲ್ ಆಗಿ ಬರುವ ತನಕ ಅರಣ್ಯ ಇಲಾಖೆಯೊಂದಿಗೆ ಗ್ರಾಮಸ್ಥರು, ರೈತರು ಸಹಕರಿಸಬೇಕು ಎಂದರು.

ಈ ವೇಳೆ ಗ್ರಾಪಂ ಅಧ್ಯಕ್ಷ ಎಂ.ನಾಗೇಂದ್ರ, ರೈತ ಮುಖಂಡರಾದ ದೇವದಾಸ್, ಹೇಮಾಜಿ ನಾಯಕ, ಶಿವಾಜಿ ನಾಯಕ, ಸುಂದರ್, ಜೈಶಂಕರ್, ನಾರಾಯಣನಾಯ್ಕ, ನಟರಾಜು, ಹೆಚ್.ಗಣೇಶ್, ಬಸವಣ್ಣ, ನಾಗರಾಜು, ಮಲ್ಲೇಶ್ ನಾಯ್ಕ, ರಾಜ್ಯ ರೈತ ಕಲ್ಯಾಣ ಸಂಘ ಘಟಕದ ಉಪಾಧ್ಯಕ್ಷ ಎಸ್.ಬಿ.ಸಮಂತ್ ಹಾಗೂ ಹರೀಶ್, ಅನಿಲ್, ತಾಲೂಕು ಅಧ್ಯಕ್ಷ ಲೋಕೇಶ್, ಉಮೇಶ್, ನವೀನ್, ಪುಟ್ಟರಾಜು, ದಾಸೇಗೌಡ, ಶಿವಣ್ಣ, ಮಣಿ ಗ್ರಾಮಸ್ಥರು ಇದ್ದರು.

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಕುಟುಂಬದ ವಿರುದ್ಧ

ಎಂಎಲ್‌ಸಿ ವಿಶ್ವನಾಥ್ ಆರೋಪ ಸತ್ಯಕ್ಕೆ ದೂರ

ಕೊಡಗು ಕಾಫಿ ಬೆಳೆಗಾರರ ಸಹಕಾರ ಸಂಘದ ಅಧ್ಯಕ್ಷ ಎಂ.ಬಿ.ದೇವಯ್ಯ



ಸುದ್ದಿಗೋಷ್ಠಿಯಲ್ಲಿ ಎಂ.ಬಿ.ದೇವಯ್ಯ ಮಾತನಾಡಿದರು.

ಹುಣಸೂರು, ಡಿ.27– ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಕುಟುಂಬದ ವಿರುದ್ಧ ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಆರೋಪ ಸತ್ಯಕ್ಕೆ ದೂರ ಎಂದು ಕೊಡಗು ಕಾಫಿ ಬೆಳೆಗಾರರ ಸಹಕಾರ ಸಂಘದ ಅಧ್ಯಕ್ಷ ಎಂ.ಬಿ.ದೇವಯ್ಯ ಸ್ಪಷ್ಟಪಡಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಎಂಎಲ್‌ಸಿ ಹೆಚ್.ವಿಶ್ವನಾಥ್ ಅವರು ಕಾಫಿ ವರ್ಕ್ಸ್‌ನ ಭೂಮಿ ಪಕ್ಕದ ಸರ್ಕಾರಿ ಖರಾಬಿನಲ್ಲಿ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಕುಟುಂಬದವರು ಸ್ವಿಮ್ಮಿಂಗ್ ಪೂಲ್ ನಿರ್ಮಿಸಿಕೊಂಡಿದ್ದಾರೆ ಎಂದು ಆರೋಪಿಸಿದ ಹಿನ್ನೆಲೆಯಲ್ಲಿ ಸ್ಪಷ್ಟನೆ ನೀಡಿದ ಅವರು, ಹುಣಸೂರು ಕೊಡಗು ಕಾಫಿ ಬೆಳೆಗಾರರ ಸಹಕಾರ ಸಂಘದ ಉದ್ದಿಮೆಗೆ ಸೇರಿದ ಭೂಮಿಯನ್ನು 11 ತಿಂಗಳ ಕರಾರಿನ ಮೇಲೆ ಮಾಜಿ ಶಾಸಕರು ಸೇರಿದಂತೆ ಹಲವರಿಗೆ ಬಾಡಿಗೆಗೆ ನೀಡಲಾಗಿತ್ತು. ಆದರೆ ಯಾರಿಗೂ ಮಾರಾಟ ಮಾಡಿಲ್ಲ. 1967ರಲ್ಲಿ ಸರ್ಕಾರದಿಂದ 37 ಎಕರೆ ಭೂಮಿ ಸಹಕಾರ ಸಂಘಕ್ಕೆ ಖರೀದಿಸಿದ್ದು, ಈ ಪೈಕಿ ಮಿನಿವಿಧಾನಸೌಧಕ್ಕೆ ಜಾಗ ನೀಡಿದ್ದೇವೆ. ಅಲ್ಲದೇ ಉಚಿತವಾಗಿ ರಾಷ್ಟ್ರೀಯ ಹೆದ್ದಾರಿ 275ಕ್ಕೆ ಹಾಗೂ ಬೈಪಾಸ್ ಸಂಪರ್ಕ ರಸ್ತೆಗೆ ಭೂಮಿ ನೀಡಲಾಗಿದೆ. ಉಳಿದ 33 ಎಕರೆ ಭೂಮಿ ಸಂಘದ ಆಸ್ತಿಯಾಗಿ ಉಳಿದಿದೆ. ಈ ಪೈಕಿ ದೊಡ್ಡ ಹುಣಸೂರು ಸರ್ವೆ ನಂ.28ರಲ್ಲಿ 4.10 ಎಕರೆ ಎ.ಖರಾಬು ಭೂಮಿ ಸಹ ಇದ್ದು, ಇದು ನಮ್ಮ ಅನುಭವದಲ್ಲಿದೆ. 1962ರ ನಂತರ ಕಾಫಿ ಬೆಳೆಯನ್ನು ಓಪನ್ ಮಾರುಕಟ್ಟೆ ಮಾಡಿದ್ದರಿಂದ ಸಂಘವು ನಷ್ಟದಲ್ಲಿದ್ದು, ಹಿಂದಿನಂತೆ ವಹಿವಾಟು ನಡೆಯದೆ ಸ್ಥಗಿತಗೊಂಡಿರುವುದನ್ನು ಮನಗಂಡು ಕೆಲವು ವರ್ಷಗಳಿಂದ ವಿವಿಧ ಚಟುವಟಿಕೆ ನಡೆಸಲು ನಮ್ಮ ಭೂಮಿಯನ್ನು ಬಾಡಿಗೆಗೆ ನೀಡಿದ್ದೇವೆ ಎಂದರು.

ಸಂಘದ ಉಪ ಕಾರ್ಯದರ್ಶಿ ದೇಚಮ್ಮ ಮಾತನಾಡಿ, ಸಂಘಕ್ಕೆ ಸೇರಿದ 7.10 ಎಕರೆ ಭೂಮಿಯಲ್ಲಿ ಸರ್ಕಾರಿ ಖರಾಬು ಯಾವ ಸ್ಥಳದಲ್ಲಿ ಬರುತ್ತದೆ ಎಂದು ತಿಳಿದಿಲ್ಲ. ಈ ಸಮಸ್ಯೆಗಳನ್ನು ಅಂತ್ಯಗೊಳಿಸಲು ನಮ್ಮ ಕಾಫಿ ಬೆಳೆಗಾರರ ಸಹಕಾರ ಸಂಘ ಸಂಪೂರ್ಣ ದಾಖಲೆ ಸಮೇತ ಅಕ್ರಮ–ಸಕ್ರಮ ಸಮಿತಿಗೆ ಅರ್ಜಿ ಸಲ್ಲಿಸಿ ದಾಖಲೆ ಸರಿಪಡಿಸಿಕೊಳ್ಳಲಿದೆ. ಈವರೆಗೂ ಸಂಘದಲ್ಲಿ ಯಾವುದೇ ಅಕ್ರಮಗಳು ನಡೆದಿಲ್ಲ. ವಿವಿಧ ಸಾರ್ವಜನಿಕ ಚಟುವಟಿಕೆಗಳನ್ನು ನಡೆಸಲೆಂದು ಬಾಡಿಗೆಗೆ ನೀಡಿದ್ದೇವೆ ಯಾರಿಗೂ ಮಾರಾಟ ಮಾಡಿಲ್ಲ ಎಂದು ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ನಿರ್ದೇಶಕರಾದ ಲೀಲಾ ಮೇದಪ್ಪ ಎನ್.ಕೆ.ಅಯ್ಯಣ್ಣ, ವ್ಯವಸ್ಥಾಪಕ ನಾಣಯ್ಯ ಉಪಸ್ಥಿತರಿದ್ದರು.

ಮಾದೇಶ್‌ಗೆ ಭಾರತ ಸೇವಾರತ್ನ ಪ್ರಶಸ್ತಿ



ತಿ.ನರಸೀಪುರ, ಡಿ.27– ಹೈದರಾಬಾದ್‌ನ ಅಕ್ಷಯ ಪ್ರಾರ್ಥನಾ ಫೌಂಡೇಷನ್ ವತಿಯಿಂದ ಸಾಮಾಜಿಕ, ಸಾಂಸ್ಕೃತಿಕ, ಕಲೆ, ಸಾಹಿತ್ಯ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರಿಗೆ ಕೊಡಮಾಡುವ ರಾಷ್ಟ್ರಮಟ್ಟದ ಭಾರತ ಸೇವಾರತ್ನ–2024ರ ಪ್ರಶಸ್ತಿಗೆ ಪಟ್ಟಣದ ಅನಾಥ ಶವಗಳ ಮುಕ್ತಿದಾತ ಡಾ.ಎಂ.ಮಾದೇಶ್ ಭಾಜನರಾಗಿದ್ದಾರೆ.

ವೈಯಕ್ತಿಕ ಖರ್ಚಿನಿಂದಲೇ ಹಲವು ದಶಕಗಳಿಂದ ಅನಾಥ ಶವಗಳಿಗೆ ಮುಕ್ತಿ ನೀಡುತ್ತಿರುವ ಡಾ.ಎಂ.ಮಾದೇಶ್ ಅವರನ್ನು ಸಂಸ್ಥೆ ಗುರುತಿಸಿದ್ದು, ರಾಷ್ಟ್ರಮಟ್ಟದ ಪ್ರಶಸ್ತಿಗೆ ಆಯ್ಕೆ ಮಾಡಿದೆ. ಬೆಂಗಳೂರಿನ ಗಾಂಧಿ ಭವನದ ಬಾಪು ಸಭಾಂಗಣದಲ್ಲಿ ಡಿ.29ರಂದು ಬೆಳಗ್ಗೆ 10.30ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಅಕ್ಷಯ ಪ್ರಾರ್ಥನಾ ಫೌಂಡೇಷನ್ ಮುಖ್ಯಸ್ಥೆ ರಮಾದೇವಿ(ಸಿಂಧು) ಹಾಗೂ ಪಪಂ ವಾಲ್ಮೀಕಿ ನೌಕರರ ಒಕ್ಕೂಟದ ಅಧ್ಯಕ್ಷ ಪಿ.ಮೋಹನ್ ಕಿಶೋರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಪ್ರ ಮಕ್ಕಳ ಪ್ರಗತಿಗೆ ಶಾಶ್ವತ ಶೈಕ್ಷಣಿಕ ನಿಧಿ ಸ್ಥಾಪಿಸಿ

ಸಮಾಜ ಸೇವಕ ಯು.ಎನ್.ಪದ್ಮನಾಭರಾವ್



ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ನಂಜನಗೂಡು, ಡಿ.27– ವಿಪ್ರ ಸಮಾಜದ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ಸಂಘದಿಂದ ಶಾಶ್ವತ ನಿಧಿ ಸ್ಥಾಪಿಸಿ ಶಿಕ್ಷಣಕ್ಕೆ ನೆರವಾಗಿ ಎಂದು ಸಮಾಜ ಸೇವಕ ಯು.ಎನ್.ಪದ್ಮನಾಭರಾವ್ ತಿಳಿಸಿದರು.

ನಗರದ ಬ್ರಾಹ್ಮಣರ ಕ್ಷೇಮಾಭಿವೃದ್ಧಿ ಸಂಘದ ಕಚೇರಿಯಲ್ಲಿ ನಡೆದ ಎಸ್ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಯಾವುದೇ ಸಮಾಜದ ಏಳಿಗೆಗೆ ಶಿಕ್ಷಣವೇ ಪ್ರಮುಖ ಅಸ್ತ್ರ. ಆದ್ದರಿಂದ ಬ್ರಾಹ್ಮಣರ ಕ್ಷೇಮಾಭಿವೃದ್ಧಿ ಸಂಘದಿಂದ ಸಮಾಜದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವಾಗುವಂತಹ ಕಾರ್ಯಕ್ರಮ ರೂಪಿಸಬೇಕು. ಜೊತೆಗೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಪ್ರತಿಭಾ ಪುರಸ್ಕಾರದಂತಹ ಕಾರ್ಯಕ್ರಮಗಳು ಸಹಕಾರಿಯಾಗಲಿವೆ. ಈ ನಿಟ್ಟಿನಲ್ಲಿ ಸಂಘದಿಂದ ಶಾಶ್ವತ ಶೈಕ್ಷಣಿಕ ನಿಧಿ ಸ್ಥಾಪಿಸಿ ಎಂದು ಸಲಹೆ ನೀಡಿದರು.

ನೂತನ ವರ್ಷದ ದಿನದರ್ಶಿಕೆ ಬಿಡುಗಡೆಗೊಳಿಸಿದ ಕಿರುತೆರೆ ಕಲಾವಿದ ಮಯಂತಿ ನಾಗರಾಜ್ ಸಂಘದಿಂದ ಸಾಮಾಜಿಕ ಕಾರ್ಯಕ್ರಮಗಳನ್ನು ಏರ್ಪಡಿಸಿ, ಜೊತೆಗೆ ವಿದ್ಯಾರ್ಥಿಗಳಲ್ಲಿ ದೇಶದ ಸಂಸ್ಕೃತಿ ಪರಿಚಯಿಸುವಂತಹ ಕಾರ್ಯಕ್ರಮ ಏರ್ಪಡಿಸಿ ಅರಿವು ಮೂಡಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಅತೀ ಹೆಚ್ಚು ಅಂಕ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಸಂಘದ ಅಧ್ಯಕ್ಷ ಎಂ.ಎನ್. ಗೋಪಾಲ್‌ರಾವ್, ರಂಗನಾಥನ್, ಇಂದಿರೇಶ್, ನಾಗರಾಜು, ಕೇಶವಮೂರ್ತಿ, ನಾಗಶಯನ, ಸತೀಶ್, ಫಣೀಶ್, ಸದಾನಂದ, ಅನಂತರಾಮು, ನಾಗೇಂದ್ರ, ರವೀಶ್, ಶ್ರೀಪತಿ, ಎನ್.ಎಸ್.ರಮೇಶ ಉಪಸ್ಥಿತರಿದ್ದರು.

ಹೆಚ್.ಮಟಕೆರೆ ವ್ಯವಸಾಯ ಸೇವಾ ಸಹಕಾರ ಸಂಘದ ಅಧ್ಯಕ್ಷ

ಬೊಪ್ಪನಹಳ್ಳಿ ಭಾಸ್ಕರ್‌ಗೆ ಸನ್ಮಾನ



ನೂತನ ಅಧ್ಯಕ್ಷ ಬೊಪ್ಪನಹಳ್ಳಿ ಭಾಸ್ಕರ್ ಅವರನ್ನು ಮೈಮುಲ್ ನಿರ್ದೇಶಕ ಈರೇಗೌಡ ಸನ್ಮಾನಿಸಿದರು.

ಹೆಚ್.ಡಿ.ಕೋಟೆ, ಡಿ.27– ತಾಲೂಕಿನ ಹೆಚ್.ಮಟಕೆರೆ ವ್ಯವಸಾಯ ಸೇವಾ ಸಹಕಾರ ಸಂಘದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಬೊಪ್ಪನಹಳ್ಳಿ ಭಾಸ್ಕರ್ ಅವರನ್ನು ಮೈಮುಲ್ ನಿರ್ದೇಶಕ ಈರೇಗೌಡ ಸನ್ಮಾನಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಬೊಪ್ಪನಹಳ್ಳಿ ಭಾಸ್ಕರ್, ಎಲ್ಲರ ಸಹಕಾರದಿಂದ ಅವಿರೋಧವಾಗಿ ಆಯ್ಕೆಯಾಗಿದ್ದೇನೆ. ಇದಕ್ಕಾಗಿ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ಮುಂದಿನ ದಿನಗಳಲ್ಲಿ ಎಲ್ಲರ ಸಹಕರದೊಂದಿಗೆ ರೈತರ ಅನುಕೂಲಕ್ಕಾಗಿ ಸಾಲ ಮಂಜೂರು, ಯಶಸ್ವಿನಿ ಯೋಜನೆ ಜಾರಿ ಜೊತೆಗೆ ಸಂಘದ ನೂತನ ಕಟ್ಟಡ ನಿರ್ಮಾಣ ಹಾಗೂ ಸಂಘದ ಅಭಿವೃದ್ಧಿ ಕೆಲಸಗಳಲ್ಲಿ ಶ್ರಮಿಸುತ್ತೇನೆ. ಆ ಮೂಲಕ ಸಂಘವನ್ನು ಮಾದರಿಯಾಗಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಪಿ.ರವಿ, ಸರಗೂರು ತಾಲೂಕು ಕಸಾಪ ಅಧ್ಯಕ್ಷ ಕೆಂಡಗಣ್ಣಸ್ವಾಮಿ, ಚಾ.ನಂಜುಂಡಮೂರ್ತಿ, ಸರಗೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಾಗರಾಜು, ಅಕ್ರಮ ಸಕ್ರಮ ಸದಸ್ಯ ಶಿವಶಂಕರ್, ಬೆಟ್ಟಬೀಡು ಡೈರಿ ಅಧ್ಯಕ್ಷ ಗಣೇಶ್, ತುಂಬಸೋಗೆ ಕಿಟ್ಟಿ ಹಾಜರಿದ್ದರು.

ಅಭಿನಂದನಾ ಕಾರ್ಯಕ್ರಮ ಮುಂದೂಡಿಕೆ

ಮೈಸೂರು, ಡಿ.27– ಮೈಸೂರಿನ ಜನಸ್ಪಂದನಾ ಟ್ರಸ್ಟ್ ವತಿಯಿಂದ ಏರ್ಪಡಿಸಲಾಗಿದ್ದ ರಾಷ್ಟ್ರಕವಿ ಕುವೆಂಪು ಅವರ ಜಯಂತ್ಯೋತ್ಸವ ಹಾಗೂ ಅಂತರ್ಜಾತಿ ವಿವಾಹಿತರ ಅಭಿನಂದನಾ ಕಾರ್ಯಕ್ರಮವನ್ನು ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ನಿಧನದ ಶೋಕಾಚರಣೆ ಹಿನ್ನೆಲೆಯಲ್ಲಿ ಮುಂದೂಡಲಾಗಿದೆ. ಶೋಕಾಚರಣೆ ಮುಗಿದ ನಂತರ ದಿನಾಂಕ ನಿಗದಿಪಡಿಸಿ ತಿಳಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.


ಕಬಡ್ಡಿ ಪಂದ್ಯಾವಳಿ: ಬಿಎಸ್‌ಎಫ್ ತಂಡ ಪ್ರಥಮ



ಕಬಡ್ಡಿ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದ ಬಿಎಸ್‌ಎಫ್ ತಂಡ.

ಕಂಪಲಾಪುರ, ಡಿ.27– ಗ್ರಾಮದ ವಿನಾಯಕ ಗೆಳೆಯರ ಬಳಗದಿಂದ ಗುರುವಾರ ರಾತ್ರಿ ರಾಜ್ಯ ಮಟ್ಟದ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ ಆಯೋಜಿಸಲಾಗಿತ್ತು. ಪಂದ್ಯಾವಳಿಯಲ್ಲಿ 24 ತಂಡಗಳು ಭಾಗವಹಿಸಿದ್ದವು. ಅಂತಿಮವಾಗಿ ಸತತ 2ನೇ ಬಾರಿಗೆ ಕಂಪಲಾಪುರದ ಬಿಎಸ್‌ಎಫ್ ತಂಡ ಪ್ರಥಮ ಬಹುಮಾನ ಪಡೆಯಿತು. ಈ ವೇಳೆ ವಿಜೇತ ತಂಡದೊಂದಿಗೆ ಫ್ರಾಂಚೈಸಿಗಳಾದ ಭರತ್ ಗೌಡ , ಕೆ.ಆರ್. ವಿನಯ್, ಕೆ.ಆರ್. ರಿತೇಶ್, ಕೆ.ಎಸ್.ಸಂಜಯ್, ಕೆ.ಎನ್.ಹರ್ಷ, ಕೆ.ಆರ್.ಕುಮಾರ್ ಮತ್ತಿತರರಿದ್ದರು.

ನೂತನ ಕ್ಯಾಲೆಂಡರ್ ಬಿಡುಗಡೆ



ಪಿರಿಯಾಪಟ್ಟಣ ತಾಲೂಕಿನ ಕಲ್ಪವೃಕ್ಷ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ 2025ನೇ ಸಾಲಿನ ಕ್ಯಾಲೆಂಡರ್ ಅನ್ನು ಸೊಸೈಟಿ ಅಧ್ಯಕ್ಷ ಪ್ರಶಾಂತ್‌ಗೌಡ ಬಿಡುಗಡೆಗೊಳಿಸಿದರು. ಉಪಾಧ್ಯಕ್ಷ ಕೃಷ್ಣೇಗೌಡ, ನಿರ್ದೇಶಕರಾದ ದೇವರಾಜ್, ದಿನೇಶ್, ನಟೇಶ್, ಕೆಂಪಣ್ಣ, ಸಿಬ್ಬಂದಿ ಮಂಜು, ಚಿತ್ರ, ಆಶಾ, ಮಹದೇವ್, ಕುಮಾರಿ ಉಪಸ್ಥಿತರಿದ್ದರು.

ಚುಂಚನಕಟ್ಟೆ ಜಾತ್ರೆ ಅಂಗವಾಗಿ

ಅಂಗಡಿ ಮುಂಗಟ್ಟು, ದನಗಳ ಗೊಬ್ಬರ ಹರಾಜು ಪ್ರಕ್ರಿಯೆ



ಹರಾಜು ಪ್ರಕ್ರಿಯೆಯಲ್ಲಿ ರೈತರು ಮತ್ತು ತಹಸೀಲ್ದಾರ್ ವಾಗ್ವಾದ ನಡೆಸುತ್ತಿರುವುದು.

ಚುಂಚನಕಟ್ಟೆ, ಡಿ.27– ಸಾಲಿಗ್ರಾಮ ತಾಲೂಕಿನ ಇತಿಹಾಸ ಪ್ರಸಿದ್ಧ ಚುಂಚನಕಟ್ಟೆ ಜಾನುವಾರು ಜಾತ್ರೆ ಮತ್ತು ಬ್ರಹ್ಮ ರಥೋತ್ಸವದ ಅಂಗವಾಗಿ ಇಲ್ಲಿನ ಶ್ರೀರಾಮದೇವರ ದೇವಾಲಯದ ಪ್ರಾಂಗಣದಲ್ಲಿ ಅಂಗಡಿ ಮುಂಗಟ್ಟುಗಳ ಮತ್ತು ದನಗಳ ಗೊಬ್ಬರ ಹರಾಜು ಪ್ರಕ್ರಿಯೆ ತಹಸೀಲ್ದಾರ್ ನೇತೃತ್ವದಲ್ಲಿ ನಡೆಯಿತು.

ಈ ವೇಳೆ ಜಾತ್ರಾ ಮಾಳದಲ್ಲಿ ತೆರೆಯುವ ಅಂಗಡಿ ಮುಂಗಟ್ಟುಗಳ ಸುಂಕ ವಸೂಲಾತಿ 6.20 ಲಕ್ಷ ರೂ.ಗಳಿಗೆ ಹರಾಜಾಯಿತು. ಆದರೆ ಗೊಬ್ಬರ ಹರಾಜು ಮಾಡಲು ಮುಂದಾದಾಗ ಕಳೆದ ಬಾರಿಗಿಂತ ಈ ಬಾರಿ ತೀರಾ ಕಡಿಮೆ ದರದಲ್ಲಿ ಹರಾಜು ನಿಂತ ಕಾರಣ ಕಡಿಮೆ ದರಕ್ಕೆ ಬಿಡ್ ನೀಡಲು ಸಾಧ್ಯವಿಲ್ಲ ಎಂಬ ಕಾರಣಕ್ಕೆ ತಹಸೀಲ್ದಾರ್ ನರಗುಂದ ಅವರು ಗೊಬ್ಬರ ಹರಾಜನ್ನು ರದ್ದು ಮಾಡಿ ಮುಂದಿನ ದಿನಾಂಕವನ್ನು ನಿಗದಿ ಪಡಿಸಲಾಗುವುದು ಎಂದು ಹೇಳಿದಾಗ ರೈತರು ರೊಚ್ಚಿಗೆದ್ದರು.

ಕಳೆದ ಬಾರಿಗಿಂತ ಈ ಬಾರಿ ಅಂಗಡಿ ಮುಂಗಟ್ಟುಗಳ ಹರಾಜು ಜಾಸ್ತಿ ದರಕ್ಕೆ ಹೋದಾಗ ಸುಮ್ಮನಾದ ನೀವು ಗೊಬ್ಬರ ಹರಾಜು ದರ ಕಡಿಮೆಯಾದಾಗ ಏಕೆ ರದ್ದು ಮಾಡುತ್ತೀರಿ. ಗೊಬ್ಬರವನ್ನು ರೈತರು ಮಾತ್ರ ಖರೀದಿ ಮಾಡುತ್ತಾರೆ. ಅವರಿಗಾಗಿ ರಿಯಾಯಿತಿ ದರದಲ್ಲೇ ಬಿಡ್ ನಿಲ್ಲಿಸಬೇಕು ಎಂದು ತಾಕೀತು ಮಾಡಿದರು. ರೈತ ಮುಖಂಡ ಮಿರ್ಲೆ ಕುಮಾರಪ್ಪ ಮಾತನಾಡಿ, ವರ್ಷದಿಂದ ವರ್ಷಕ್ಕೆ ಜಾತ್ರೆಗೆ ಆಗಮಿಸುವ ದನಕರುಗಳ ಸಂಖ್ಯೆ ಕಡಿಮೆಯಾಗುತ್ತಿದ್ದು, ಕಳೆದ ಬಾರಿಯಂತೆ ಹೆಚ್ಚು ದರದಲ್ಲಿ ಗೊಬ್ಬರವನ್ನು ಹರಾಜು ಪ್ರಕ್ರಿಯೆಯಲ್ಲಿ ಕೊಳ್ಳಲು ಸಾಧ್ಯವಿಲ್ಲ. ಬಿಡ್‌ನಲ್ಲಿ ಘೋಷಣೆಯಾಗಿರುವ ದರದಲ್ಲೇ ಗೊಬ್ಬರ ಹರಾಜು ಪ್ರಕ್ರಿಯೆ ಮುಗಿಸಿ ಎಂದರು.

ಚುಂಚನಕಟ್ಟೆ ರೈತ ಮನೋಹರ್ ಮಾತನಾಡಿ, ದನಗಳ ಜಾತ್ರೆಗೆ ಮೀಸಲಾಗಿಟ್ಟಿರುವ ಜಾಗದಲ್ಲಿ ಸರ್ವೆ ನಂ.69ರಲ್ಲಿರುವವರು ಅಕ್ರಮವಾಗಿ ಮನೆ ನಿರ್ಮಿಸಿದ್ದು, ಅವರ ಮನೆಯ ಪಕ್ಕದ ಜಾಗದಲ್ಲಿ ದನಕರುಗಳನ್ನು ಕಟ್ಟಲು ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ಪ್ರಶ್ನಿಸಿದರೆ ಜಗಳ ಇಳಿಯುತ್ತಿದ್ದು, ಈ ಅಕ್ರಮ ತಡೆಯುವಲ್ಲಿ ಜಿಲ್ಲಾಡಳಿತ, ತಾಲೂಕು ಆಡಳಿತ ವಿಫಲವಾಗಿದೆ ಎಂದು ದೂರಿದರು.

ಇದಕ್ಕೆ ಸ್ಪಷ್ಟನೆ ನೀಡಿದ ತಹಸೀಲ್ದಾರ್ ನರಗುಂದ ಅವರು, ಕಡಿಮೆ ದರದಲ್ಲಿ ಬಿಡ್ಡನ್ನು ನೀಡಲು ಸಾಧ್ಯವಿಲ್ಲ. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಮಾಹಿತಿ ನೀಡಿ ಮುಂದಿನ ಬಿಡ್ ದಿನಾಂಕ ಘೋಷಿಸಲಾಗುವುದು. ಆ ಸಂದರ್ಭ ಯಾರೂ ಕೂಡ ಬಿಡ್‌ನಲ್ಲಿ ಭಾಗವಹಿಸದೆ ಹೋದರೆ ಈ ಬಾರಿ ಬಿಡ್ ಆಗಿರುವ ರೈತರಿಗೆ ಗೊಬ್ಬರ ಹರಾಜು ನೀಡಲಾಗುವುದು ಎಂದು ತಿಳಿಸಿದಾಗ ಪರಿಸ್ಥಿತಿ ಶಾಂತವಾಯಿತು.

ಸಭೆಯಲ್ಲಿ ಚುಂಚನಕಟ್ಟೆ ಉಪ ತಹಸೀಲ್ದಾರ್ ಕೆ.ಜೆ.ಶರತ್ ಕುಮಾರ್, ಗ್ರೇಡ್–2 ತಹಸೀಲ್ದಾರ್ ಸಣ್ಣರಾಮಪ್ಪ, ಶಿರಸ್ತೇದಾರ್ ಸತೀಶ್ ಕುಮಾರ್, ಸಿಬ್ಬಂದಿಗಳಾದ ರಾಕೇಶ್, ನವ್ಯ, ಪಾರುಪತ್ತೇದಾರ ಯತಿರಾಜ್ ಸೇರಿದಂತೆ ಮತ್ತಿತರರಿದ್ದರು.

ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ

ಹಂಪಾಪುರ, ಡಿ.27– ಹೆಚ್.ಡಿ.ಕೋಟೆ ತಾಲೂಕಿನ ಹಂಪಾಪುರದಲ್ಲಿ ಬೆಳೆಗೆ ಕನಿಷ್ಠ ಬೆಂಬಲ ಬೆಲೆ ಖಾತ್ರಿ ಕಾನೂನು ಜಾರಿಯಾಗಬೇಕೆಂದು ಪಂಜಾಬ್– ಹರಿಯಾಣದ ಕನೋರಿ ಗಡಿಯಲ್ಲಿ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ರೈತ ಮುಖಂಡ ಜಗಜಿತ್ ದಲ್ಲೆವಾಲಾ ಹೋರಾಟ ಬೆಂಬಲಿಸಿ, ಕೇಂದ್ರ ಸರ್ಕಾರದ ವಿರುದ್ಧ ಕಬ್ಬು ಬೆಳೆಗಾರರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು. ಈ ವೇಳೆ ಕಬ್ಬು ಬೆಳೆಗಾರರ ಸಂಘದ ತಾಲೂಕು ಅಧ್ಯಕ್ಷ ರಾಜೇಶ್, ಕೆಂಡಗಣ್ಣೇಗೌಡ, ಸಿದ್ದನಾಯಕ, ಗಂಗಾಧರ್, ಕುಳ್ಳೇಗೌಡ ಇತರರಿದ್ದರು.

ನಿಧನ

ಯಶೋಧ



ಕೆ.ಆರ್.ನಗರ, ಡಿ.27– ತಾಲೂಕಿನ ಬಾಲೂರು ಗ್ರಾಮದ ಜವರೇಗೌಡರ ಪತ್ನಿ ಯಶೋಧ(73) ಶುಕ್ರವಾರ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಬೆಳಗ್ಗೆ ಸ್ವಗ್ರಾಮದ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಿವಮ್ಮ



ಭೇರ್ಯ, ಡಿ.27– ತಾಲೂಕಿನ ಗಂಧನಹಳ್ಳಿ ಗ್ರಾಮದ ನಿವಾಸಿ, ತಾಪಂ ಮಾಜಿ ಅಧ್ಯಕ್ಷ ದಿ.ಜಿ.ಆರ್.ನಾಗೇಗೌಡರ ಪತ್ನಿ ಶಿವಮ್ಮ(64) ಗುರುವಾರ ರಾತ್ರಿ ನಿಧನರಾದರು. ಮೃತರು ಮೂವರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ತೋಟದಲ್ಲಿ ಶುಕ್ರವಾರ ಮಧ್ಯಾಹ್ನ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಂದು ಅರಮನೆ ಬಳಿಯಿಂದ ಜಯನಗರ ಇಸ್ಕಾನ್‌ವರೆಗೆ ಶ್ರೀಕೃಷ್ಣ–ಬಲರಾಮ ರಥಯಾತ್ರೆ


● ಜ.10ರಂದು ವೈಕುಂಠ ಏಕಾದಶಿ ● ಇಸ್ಕಾನ್ ಮೈಸೂರು ಪ್ರಧಾನ ವ್ಯವಸ್ಥಾಪಕ ಪಂಕಜಾಂಘ್ರಿದಾಸ ಮಾಹಿತಿ

ಮೈಸೂರು, ಡಿ.27(ಎಂಟಿವೈ)– ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯ ಮುಂಭಾಗದಿಂದ ಜಯನಗರದ ಇಸ್ಕಾನ್ ದೇವಾಲಯದವರೆಗೆ ಶನಿವಾರ (ಡಿ.28) ಸಂಜೆ 4.30ಕ್ಕೆ ಶ್ರೀಕೃಷ್ಣ–ಬಲರಾಮ ರಥಯಾತ್ರೆ ಆಯೋಜಿಸಲಾಗಿದೆ ಎಂದು ಇಸ್ಕಾನ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ಪಂಕಜಾಂಘ್ರಿದಾಸ ತಿಳಿಸಿದ್ದಾರೆ.

ಮೈಸೂರಿನ ಜಯನಗರದಲ್ಲಿರುವ ಇಸ್ಕಾನ್ ಸಂಸ್ಥೆ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂತಾರಾಷ್ಟ್ರೀಯ ಕೃಷ್ಣ ಪ್ರಜ್ಞಾ ಸಂಸ್ಥೆ (ಇಸ್ಕಾನ್) ವತಿಯಿಂದ 27ನೇ ವಾರ್ಷಿಕ ಶ್ರೀಕೃಷ್ಣ–ಬಲರಾಮ ರಥಯಾತ್ರೆ ಉತ್ಸವವನ್ನು ಈ ಬಾರಿ ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಲಾಗಿದೆ. ಅರಮನೆ ಮುಂಭಾಗದ ಕೋಟೆ ಆಂಜನೇಯ ಸ್ವಾಮಿ ದೇವಾಲಯ ಆವರಣದಲ್ಲಿ ಶನಿವಾರ ಸಂಜೆ 4.30ಕ್ಕೆ ರಥಯಾತ್ರೆ ಆರಂಭವಾಗಲಿದ್ದು, ಈ ಸಂದರ್ಭದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ವಿಧಾನ ಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್, ಇಸ್ಕಾನ್ ಮೈಸೂರು ಅಧ್ಯಕ್ಷ ಶ್ರೀ ಸ್ತೋಕ ಕೃಷ್ಣಸ್ವಾಮಿ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು.

ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ಸಾಗುವ ರಥಯಾತ್ರೆ, ದೊಡ್ಡಗಡಿಯಾರ ವೃತ್ತ, ಮಹಾತ್ಮ ಗಾಂಧಿ ವೃತ್ತ, ಸಯ್ಯಾಜಿರಾವ್ ರಸ್ತೆ, ಚಿಕ್ಕ ಗಡಿಯಾರ, ದೇವರಾಜ ಅರಸು ರಸ್ತೆ, ನಾರಾಯಣಶಾಸ್ತ್ರಿ ರಸ್ತೆ, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತ, ನ್ಯೂ ಕಾಂತರಾಜ್ ಅರಸು ರಸ್ತೆ, ಜಯನಗರ 2ನೇ ಮುಖ್ಯರಸ್ತೆಯ ಮೂಲಕ ಇಸ್ಕಾನ್ ದೇವಾಲಯ ಆವರಣ ತಲುಪಲಿದೆ. ರಥಯಾತ್ರೆಯಲ್ಲಿ ವಿವಿಧ ಸಾಂಸ್ಕೃತಿಕ ಕಲಾತಂಡಗಳು ಪಾಲ್ಗೊಳ್ಳಲಿವೆ. ಅಲ್ಲದೆ, ಮಂಗಳವಾದ್ಯ, ಇಸ್ಕಾನ್ ಭಕ್ತರಿಂದ ಸಂಕೀರ್ತನೆ ನಡೆಯಲಿದೆ. 35 ಅಡಿ ರಥದಲ್ಲಿ ಶ್ರೀಕೃಷ್ಣ ಬಲರಾಮರ ವಿಗ್ರಹವನ್ನು ಮೆರವಣಿಗೆ ಮಾಡಲಾಗುತ್ತದೆ. ಕಾರ್ಯಕ್ರಮದ ಅಂಗವಾಗಿ 30 ಸಾವಿರ ಭಕ್ತರಿಗೆ ಪ್ರಸಾದ ವಿತರಣೆ ಮಾಡಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಜ.10, ವೈಕುಂಠ ಏಕಾದಶಿ: ಮೈಸೂರಿನ ಇಸ್ಕಾನ್ ದೇವಾಲಯದಲ್ಲಿ ಜ.10ರಂದು 'ವೈಕುಂಠ ಏಕಾದಶಿ'ಯ ವಿಶೇಷ ಪೂಜಾ ಮಹೋತ್ಸವ ಏರ್ಪಡಿಸಲಾಗಿದೆ. ದೇವಾಲಯದ ಆವರಣದಲ್ಲಿ ವಿಶಿಷ್ಟ ರೀತಿಯಲ್ಲಿ 'ವೈಕುಂಠ ದ್ವಾರ'ವನ್ನು ನಿರ್ಮಿಸಲಾಗುತ್ತದೆ. ದ್ವಾರದ ಮೂಲಕ ದೇವರ ದರ್ಶನಕ್ಕೆ ಭಕ್ತರಿಗೆ ಅವಕಾಶ ನೀಡಲಾಗುತ್ತದೆ. ಅಂದು ಬೆಳಗ್ಗೆ 6.30ಕ್ಕೆ ವೈಕುಂಠ ದ್ವಾರ ಪೂಜೆ ಮಾಡಲಾಗುತ್ತದೆ. ಬಳಿಕ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಯಲಿವೆ. ಭಕ್ತರಿಗೆ ಬೆಳಗ್ಗೆ 7.30ರಿಂದ ರಾತ್ರಿ 10ಗಂಟೆವರೆಗೆ ವೈಕುಂಠ ದ್ವಾರ ಪ್ರವೇಶಕ್ಕೆ ಅವಕಾಶ ನೀಡಲಾಗುತ್ತದೆ ಎಂದರು.



ಇಸ್ಕಾನ್ ದೇವಾಲಯದ ಆವರಣದಲ್ಲಿ ನಿರ್ಮಿಸಲು ಉದ್ದೇಶಿಸಿರುವ ನವ ಬೃಂದಾವನ ಧಾಮದ ನಕ್ಷೆ.



ಮೈಸೂರಿನ ಜಯನಗರ ಇಸ್ಕಾನ್ ದೇವಾಲಯದಲ್ಲಿ ಇಸ್ಕಾನ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ಪಂಕಜಾಂಘ್ರಿ ದಾಸ ಮಾತನಾಡಿದರು.

ನವ ಬೃಂದಾವನ ಧಾಮ ನಿರ್ಮಾಣಕ್ಕೆ ಭಕ್ತರಿಂದ ದೇಣಿಗೆ ನಿರೀಕ್ಷೆ

ಮೈಸೂರಿನ ಇಸ್ಕಾನ್ ಆವರಣದಲ್ಲಿ ಬೆಂಗಳೂರಿನಲ್ಲಿರುವಂತೆ ನವ ಬೃಂದಾವನ ಧಾಮ ನಿರ್ಮಿಸಲಾಗುತ್ತಿದೆ. 150 ಕೋಟಿ ರೂ. ವೆಚ್ಚದಲ್ಲಿ 5.50 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ನವ ಬೃಂದಾವನ ಧಾಮ ನಿರ್ಮಿಸಲಾಗುತ್ತಿದೆ. ಹೊಯ್ಸಳ ವಾಸ್ತುಶಿಲ್ಪ ಮಾದರಿಯಲ್ಲಿ ನಿರ್ಮಾಣ ಮಾಡುವ ಧಾಮ 200 ಅಡಿ ಎತ್ತರ ಹೊಂದಿರುತ್ತದೆ. ಈ ಧಾಮದಲ್ಲಿ ರಾಧಕೃಷ್ಣ ದೇವಾಲಯ, ಅನಂತ ಪದ್ಮನಾಭ ದೇವಾಲಯವಿರುತ್ತದೆ. ಬೃಂದಾವನ ಧಾಮದ ಮೊದಲ ಹಂತದಲ್ಲಿ 40 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ಆರಂಭಿಸಲಾಗಿದೆ. 2ನೇ ಹಂತದ ಕಾಮಗಾರಿಗೆ 110 ಕೋಟಿ ರೂ. ಹಣ ಬೇಕಾಗಿದೆ. ಇಲ್ಲಿ ರಾಧಾಕೃಷ್ಣ ದೇವಸ್ಥಾನವನ್ನು ನಿರ್ಮಿಸಲಾಗುತ್ತದೆ. ಪ್ರತಿನಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಧಾರ್ಮಿಕವಾಗಿ ನಡೆಯುತ್ತಿರುವ ಈ ಕೆಲಸಕ್ಕೆ ಭಕ್ತರು ದೇಣಿಗೆ ನೀಡಿ ಸಹಕರಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂ.ಸಂಖ್ಯೆ 0821–2500582 ಸಂಪರ್ಕಿಸುವಂತೆ ಕೋರಿದರು.

ಮೈಸೂರಿನ ರಿಂಗ್ ರಸ್ತೆಗೆ ಎಸ್.ಎಂ.ಕೃಷ್ಣರ ಹೆಸರಿಡಿ

ಎಸ್.ಎಂ.ಕೃಷ್ಣ ಅಭಿಮಾನಿಗಳ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ ಒತ್ತಾಯ



ಮೈಸೂರು,ಡಿ.27(ಪಿಎಂ)– ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಮೈಸೂರಿಗೆ ಗಣನೀಯ ಕೊಡುಗೆ ನೀಡಿದ್ದಾರೆ. ಹಾಗಾಗಿ ಅವರ ಹೆಸರನ್ನು ಮೈಸೂರಿನ ರಿಂಗ್ ರಸ್ತೆಗೆ ನಾಮಕರಣ ಮಾಡಬೇಕೆಂದು ಎಸ್.ಎಂ.ಕೃಷ್ಣ ಅಭಿಮಾನಿಗಳ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ ಒತ್ತಾಯಿಸಿದ್ದಾರೆ.

ಮೈಸೂರಿನ ರಿಂಗ್ ರಸ್ತೆ ನಿರ್ಮಾಣಕ್ಕೂ ಕೃಷ್ಣ ಅವರೇ ಕಾರಣ. ಅವರು ಕೈಗಾರಿಕಾ ಸಚಿವರಾಗಿದ್ದಾಗ ಮೈಸೂರಿನಲ್ಲಿ ವಿಕ್ರಾಂತ್ ಟೈರ್ಸ್ ಕಂಪನಿ ಸ್ಥಾಪನೆಗೆ ಕಾರಣರಾದರು. ಇನ್ಫೋಸಿಸ್ ಕಂಪನಿಗೆ ಮೈಸೂರಿನಲ್ಲಿ ಜಾಗ ಮಂಜೂರು ಮಾಡಲು ಕ್ರಮ ವಹಿಸಿದರು. ಅಲ್ಲದೆ, ಮೈಸೂರು–ಬೆಂಗಳೂರು ಜೋಡಿ ರಸ್ತೆ ನಿರ್ಮಾಣಕ್ಕೂ ಕ್ರಮ ವಹಿಸಿ ಸಂಚಾರ ದಟ್ಟಣೆ ನಿವಾರಿಸಲು ಕಾರಣರಾದರು.

ಗ್ರಾಮೀಣ ಪ್ರದೇಶದ ಬಡ ವಿದ್ಯಾರ್ಥಿಗಳಿಗೆ ಕ್ಲಿಯೋನಿಕ್ಸ್ ಕಂಪನಿಯಿಂದ ಕಂಪ್ಯೂಟರ್ ಕಲಿಕೆಗೆ ಅವಕಾಶ ಕಲ್ಪಿಸಿದರು. ಜೊತೆಗೆ ಕಾಂಗ್ರೆಸ್ ಕಾರ್ಯಕರ್ತರಿಗೆ ನಿವೇಶನ ಮಂಜೂರು ಆಗಲೂ ಕಾರಣರಾದರು. ತಮ್ಮ ಅಧಿಕಾರಾವಧಿಯಲ್ಲಿ ನಿಗಮ ಮಂಡಳಿಗಳಲ್ಲಿ ಮೈಸೂರಿನವರು ಅಧ್ಯಕ್ಷರು ಹಾಗೂ ಸದಸ್ಯರಾಗಿ ನೇಮಕವಾದರು. ಹಾಗಾಗಿ ಎಸ್.ಎಂ.ಕೃಷ್ಣ ಅವರು ಮೈಸೂರಿಗೆ ನೀಡಿರುವ ಕೊಡುಗೆಗಳನ್ನು ಗುರುತಿಸಿ ಜಿಲ್ಲಾಡಳಿತವು ಮೈಸೂರು ರಿಂಗ್ ರಸ್ತೆಗೆ ಅವರ ಹೆಸರು ನಾಮಕರಣ ಮಾಡಲು ಕ್ರಮ ವಹಿಸಬೇಕೆಂದು ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.

ಬೀದಿಬದಿ ವ್ಯಾಪಾರಿಗಳಿಗೆ ಐದು ದಿನಗಳ ಆಹಾರ ಸುರಕ್ಷತೆ ತರಬೇತಿ



ಪಾಲಿಕೆ ಆಯುಕ್ತ ಅಶಾದ್ ಉರ್‌ರೆಹಮಾನ್ ಷರೀಫ್, ಬೀದಿಬದಿ ವ್ಯಾಪಾರಿಗಳಿಗೆ ಆಹಾರ ಸುರಕ್ಷತೆ ಬಗ್ಗೆ ತರಬೇತಿ ನೀಡಿ, ಪ್ರಮಾಣ ಪತ್ರಗಳನ್ನು ವಿತರಿಸಿದರು.

ಮೈಸೂರು, ಡಿ.27(ಆರ್‌ಕೆ)–ಮೈಸೂರಿನ ರೋಟರಿ ಜಾವಾ ಸಭಾಂಗಣದಲ್ಲಿ ಆಹಾರ ಸಂರಕ್ಷಣೆ ಮತ್ತು ಗುಣಮಟ್ಟ ಕಾಪಾಡುವ ಕುರಿತು ರಸ್ತೆ ಬದಿ ವ್ಯಾಪಾರಿಗಳಿಗೆ 5 ದಿನಗಳ ತರಬೇತಿ ಕಾರ್ಯಕ್ರಮ ಇಂದಿನಿಂದ ಆರಂಭವಾಯಿತು.


ಮೈಸೂರು ಮಹಾನಗರಪಾಲಿಕೆ, ರಾಷ್ಟ್ರೀಯ ಬೀದಿಬದಿ ವ್ಯಾಪಾರಿಗಳ ಸಂಘ, ಪಟ್ಟಣ ವ್ಯಾಪಾರ ಸಮಿತಿ ಹಾಗೂ ನೆಸ್ಲೆ ಕಂಪನಿ ಸಹಯೋಗದಲ್ಲಿ ಆಯೋಜಿಸಿರುವ ತರಬೇತಿ ಕಾರ್ಯಕ್ರಮವನ್ನು ಮೈಸೂರು ಪಾಲಿಕೆ ಆಯುಕ್ತ ಅಶಾದ್ ಉರ್‌ರೆಹಮಾನ್ ಷರೀಫ್ ಉದ್ಘಾಟಿಸಿದರು.

ಬೀದಿ ಬದಿ ವ್ಯಾಪಾರಿಗಳನ್ನುದ್ದೇಶಿಸಿ ಮಾತನಾಡಿದ ಅವರು, ಅಗತ್ಯ ದಾಖಲಾತಿಗಳನ್ನು ಸಲ್ಲಿಸಿ ಬೀದಿಬದಿ ವ್ಯಾಪಾರಿಗಳು ಪಾಲಿಕೆಯಿಂದ ಅಧಿಕೃತ ದೃಢೀಕರಣ ಪತ್ರ ಪಡೆದುಕೊಂಡು ನಿಗದಿತ ಸ್ಥಳದಲ್ಲಿ ಸ್ವಚ್ಛತೆ, ಗುಣಮಟ್ಟ ಕಾಪಾಡಿಕೊಂಡು ಆಹಾರ ಮಾರಾಟ ಮಾಡುವ ಮೂಲಕ ಸಾರ್ವಜನಿಕರ ಆರೋಗ್ಯ ರಕ್ಷಿಸಬೇಕೆಂದು ಸಲಹೆ ನೀಡಿದರು.

ಪಾಲಿಕೆ ಹೆಚ್ಚುವರಿ ಆಯುಕ್ತೆ ಕುಸುಮಾ ಕುಮಾರಿ, ಉಪಆಯುಕ್ತ (ಕಂದಾಯ) ಸೋಮಶೇಖರ್, ವಲಯಾಧಿಕಾರಿಗಳು, ಆಹಾರ ಭದ್ರತೆ ಸಹಾಯಕ ನಿರ್ದೇಶಕ ಡಾ.ರವೀಂದ್ರ ಪಟ್ಟಣ ವ್ಯಾಪಾರ ಸಮಿತಿಯ ರವಿ, ಶಂಕರ್, ವಿಶ್ವನಾಥ, ಗುರುಸ್ವಾಮಿ, ಭರತ್, ಉಮಾಪತಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು. ಮೊದಲ ದಿನವಾದ ಇಂದು 100 ಮಂದಿ ಬೀದಿಬದಿ ವ್ಯಾಪಾರಿಗಳಿಗೆ ಆಹಾರ ಸುರಕ್ಷತೆ ಬಗ್ಗೆ ತರಬೇತಿ ನೀಡಿ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಪ್ರತೀ ದಿನ 100 ಮಂದಿಯಂತೆ 5 ದಿನ 500 ಮಂದಿ ಬೀದಿಬದಿ ವ್ಯಾಪಾರಿಗಳಿಗೆ ತರಬೇತಿ ನೀಡಲಾಗುವುದು.

ನರ್ಮ್, ನರೇಗಾ ಮೂಲಕ ಮೈಸೂರಿಗೆ ಅಪಾರ ಕೊಡುಗೆ ನೀಡಿದ್ದ ಮನಮೋಹನ್ ಸಿಂಗ್

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಅಯೂಬ್ ಖಾನ್



ಮೈಸೂರು, ಡಿ.27(ಜಿಎ)–ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರು ನರ್ಮ್ ಮತ್ತು ನರೇಗಾ ಯೋಜನೆ ಮೂಲಕ ಮೈಸೂರಿಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ ಎಂದು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಅಯೂಬ್ ಖಾನ್ ತಿಳಿಸಿದ್ದಾರೆ.

ಡಾ.ಮನಮೋಹನ್ ಅವರ ಅಗಲಿಕೆ ದುಃಖದ ಸಂಗತಿ. ದೇಶ ಹಾಗೂ ಮೈಸೂರಿಗೆ ವಿಶೇಷವಾಗಿ ಕೊಡುಗೆ ನೀಡಿದ್ದಾರೆ. ದೇಶದ ಆರ್ಥಿಕತೆ ಕುಸಿಯುವ ಸಂದರ್ಭದಲ್ಲಿ ಉನ್ನತ ಹುದ್ದೆ ಸ್ವೀಕರಿಸಿ ಅಪಾರ ಕೊಡುಗೆ ನೀಡಿದ್ದಾರೆ. ಭಾರತದ ಆರ್ಥಿಕತೆಯ ವ್ಯವಸ್ಥೆಯನ್ನು ಮಾದರಿಯಾಗಿ ತೋರಿಸಿದ್ದಾರೆ. ಆಹಾರ ಭದ್ರತಾ ಕಾಯ್ದೆ ಸೇರಿದಂತೆ ವಿವಿಧ ಕಾಯ್ದೆ ತಂದು ಜನರಿಗೆ ಸೇವೆ ಸಲ್ಲಿಸಿದ್ದಾರೆ. ಪ್ರಮುಖವಾಗಿ ನರ್ಮ್ ಯೋಜನೆ ಮೂಲಕ ಮೈಸೂರಿಗೆ ಕುಡಿಯುವ ನೀರು, ರಿಂಗ್ ರಸ್ತೆ, ಮನೆಗಳು ಬಸ್ ತಂಗುದಾಣ ಸೇರಿ ಅಪಾರ ಕೊಡುಗೆ ನೀಡಿದ್ದು, ನರೇಗಾ ಯೋಜನೆ ಮೂಲಕ ಸಾವಿರಾರೂ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಿದ್ದಾರೆ. ಅವರ ಅಗಲಿಕೆ ಮೈಸೂರು ಜನತೆಗೆ ಆಘಾತ ತಂದಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿ.31ರಂದು ರಾಜ್ಯದಲ್ಲಿ ಸಾರಿಗೆ ಬಸ್ ಸಂಚಾರ ಸ್ಥಗಿತ!

ಮೈಸೂರು,ಡಿ.27(ಜಿಎ)–ಸಾರಿಗೆ ನೌಕರರ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ, ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ವತಿಯಿಂದ ಡಿ.31ರಿಂದ ರಾಜ್ಯಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುತ್ತಿದ್ದು, ಅಂದಿನಿಂದ ರಾಜ್ಯದ 4 ನಿಗಮಗಳಿಂದ ಬಸ್‌ಗಳು ಸಂಚರಿಸುವುದಿಲ್ಲ ಎಂದು ಸಮಿತಿಯ ಮಲ್ಲಯ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಮುಷ್ಕರಕ್ಕೆ ರಾಜ್ಯದ ವಿವಿಧ ಸಂಘಟನೆಗಳು ಸಾಥ್ ನೀಡಿದ್ದು, ಚಾಲಕರು, ನಿರ್ವಾಹಕರು ಕೈಜೋಡಿಸಿದ್ದಾರೆ ಎಂದರು.

ಈಗಾಗಲೇ ಮುಷ್ಕರ ನಡೆಸುವುದರ ಬಗ್ಗೆ ಸರ್ಕಾರಕ್ಕೆ ತಿಳಿಸಿದ್ದು, ಪತ್ರ ತಲುಪಿಸಿದ್ದೇವೆ. ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದ ಸಮಯದಲ್ಲಿ ಬೆಳಗಾವಿ ಚಲೋ ನಡೆಸಿ, ಮೊದಲ ದಿನವೇ ಸಾವಿರಾರು ಸಾರಿಗೆ ಕಾರ್ಮಿಕರು ಈ ಚಲೋದಲ್ಲಿ ಪಾಲ್ಗೊಂಡು ಮನವಿ ಸಲ್ಲಿಸಿದರು. ಅಂದು ಸಚಿವ ದಿನೇಶ್ ಗುಂಡೂರಾವ್ ಪತ್ರ ಸ್ವೀಕರಿಸಿ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸುವ ಬಗ್ಗೆ ಭರವಸೆ ನೀಡಿದರು. ಆದರೆ, ಈವರೆಗೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಈ ಹಿನ್ನೆಲೆ ರಾಜ್ಯಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ನಿರ್ಧರಿಸಲಾಗಿದೆ ಎಂದರು.

ಸಾರಿಗೆ ರಾಜ್ಯ ನೌಕರರ ರಾಜ್ಯ ಕೂಟವೂ ಈ ಮುಷ್ಕರಕ್ಕೆ ಬೆಂಬಲ ಸೂಚಿಸಿಲ್ಲ. ಅವರು ಕಾರ್ಮಿಕರನ್ನು ಸರ್ಕಾರಿ ನೌಕರರು ಎಂದು ಪರಿಗಣಿಸಬೇಕೆಂದು ಆಗ್ರಹಿಸಿದ್ದಾರೆ. ಆದರೆ, ಕಾನೂನಿನಲ್ಲಿ ಇದಕ್ಕೆ ಅವಕಾಶವಿಲ್ಲ. ಕೂಟ ಬೆಂಬಲವಿಲ್ಲದಿದ್ದರೂ ಕಾರ್ಮಿಕರು ಮುಷ್ಕರಕ್ಕೆ ಬೆಂಬಲ ಸೂಚಿಸಿದ್ದಾರೆ ಎಂದರು.

ಜ.7ರಿಂದ ಐದು ದಿನ ಅಧಿಕಾರಿ, ಸಿಬ್ಬಂದಿಗೆ ತರಬೇತಿ

ಮೈಸೂರು,ಡಿ.27(ಪಿಎಂ)– ಧಾರವಾಡದ ಗುಂಗರಗಟ್ಟಿಯ ಕರ್ನಾಟಕ ಅರಣ್ಯ ಅಕಾಡೆಮಿಯಲ್ಲಿ 2025ರ ಜ.7ರಿಂದ 11ರವರೆಗೆ ಐದು ದಿನಗಳ ಕಾಲ ಕರ್ತವ್ಯನಿರತ ಅಧಿಕಾರಿಗಳು ಮತ್ತು ಸಿಬ್ಬಂದಿಗೆ 'ಇನ್ನರ್ ಇಂಜಿನಿಯರಿಂಗ್ ಫಾರ್ ಲೀಡರ್‌ಶಿಪ್' ಕುರಿತು ತರಬೇತಿ ಹಮ್ಮಿಕೊಳ್ಳಲಾಗಿದೆ. ತರಬೇತಿಗೆ ತಮ್ಮ ವ್ಯಾಪ್ತಿಯ ಮೂವರು ಅಧಿಕಾರಿಗಳನ್ನು ನಿಯೋಜಿಸಬೇಕೆಂದು ಕರ್ನಾಟಕ ಅರಣ್ಯ ಅಕಾಡೆಮಿಯ ಜಂಟಿ ನಿರ್ದೇಶಕರೂ ಆದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಇಲಾಖೆಯ ಮೈಸೂರು ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳನ್ನು ಪತ್ರ ಮುಖೇನ ವಿನಂತಿಸಿದ್ದಾರೆ. ಮೈಸೂರು ಎಲಿಫೆಂಟ್ ಟಾಸ್ಕ್ ಫೋರ್ಸ್‌ನ ಡಿಸಿಎಫ್ ಎಂ.ಎನ್.ನವೀನ್, ಮಂಡ್ಯ (ಸಾಮಾಜಿಕ ಅರಣ್ಯ) ಡಿಸಿಎಫ್ ಎಸ್.ಸುಮಂತ್ ಮತ್ತು ಮೈಸೂರು (ಸಾಮಾಜಿಕ ಅರಣ್ಯ) ಡಿಸಿಎಫ್ ಶಂಕರೇಗೌಡ ಅವರನ್ನು ತರಬೇತಿಗೆ ಆಯ್ಕೆ ಮಾಡಲಾಗಿದೆ.

ಡಿ.29ರಂದು ಮೈಸೂರು ಧರ್ಮಕ್ಷೇತ್ರದ ಜ್ಯೂಬಿಲಿ 2025ರ ಉದ್ಘಾಟನೆ

2026ರ ಜ.6ರವರೆಗೆ ಆಚರಣೆ ; ಧರ್ಮಕ್ಷೇತ್ರದ ಪ್ರೇಷಿತ ಆಡಳಿತಾಧಿಕಾರಿ ಡಾ.ಬರ್ನಾರ್ಡ್ ಮೊರಾಸ್ ಮಾಹಿತಿ

ಮೈಸೂರು,ಡಿ.27(ಪಿಎಂ)– ಕ್ಯಾಥೋಲಿಕ್ ಚರ್ಚ್‌ಗಳಲ್ಲಿ ಪ್ರತಿ 25 ವರ್ಷಗಳಿಗೊಮ್ಮೆ ಯೇಸುಕ್ರಿಸ್ತರ ಜನನವನ್ನು ಸ್ಮರಿಸುವ ನಿಟ್ಟಿನಲ್ಲಿ ಜ್ಯೂಬಿಲಿ ಆಚರಿಸುವ ಪರಂಪರೆ ನಡೆದು ಬಂದಿದೆ. ಅಂತೆಯೇ ಮೈಸೂರು ಧರ್ಮಕ್ಷೇತ್ರದಲ್ಲಿ ಜ್ಯೂಬಿಲಿ 2025ಕ್ಕೆ ಇದೇ ಡಿ.29ಕ್ಕೆ ಚಾಲನೆ ನೀಡಲಾಗುತ್ತಿದೆ.

ಮೈಸೂರಿನ ಸಂತ ಫಿಲೋಮಿನಾ ಚರ್ಚ್‌ನ ಸನ್ನಿತ್ರ ಹಾಲ್‌ನಲ್ಲಿ ಗುರುವಾರ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮೈಸೂರು ಧರ್ಮಕ್ಷೇತ್ರದ ಪ್ರೇಷಿತ ಆಡಳಿತಾಧಿಕಾರಿಗಳು ಹಾಗೂ ನಿವೃತ್ತ ಮಹಾ ಧರ್ಮಾಧ್ಯಕ್ಷರೂ ಆದ ಪೂಜ್ಯ ಡಾ.ಬರ್ನಾರ್ಡ್ ಮೊರಾಸ್ ಈ ವಿಷಯ ತಿಳಿಸಿದರು.

ಜ್ಯೂಬಿಲಿ 2025ರ ಉಲ್ಲೇಖವನ್ನು ಬೈಬಲ್‌ನಲ್ಲಿ ಕಾಣಬಹುದು. ಕ್ಯಾಥೋಲಿಕ್ ಚರ್ಚ್‌ನ ಇತಿಹಾಸದಲ್ಲಿ ಕ್ರಿ.ಶ.1300ರಿಂದಲೂ ಪ್ರತಿ 25 ವರ್ಷಗಳಿಗೊಮ್ಮೆ ಜ್ಯೂಬಿಲಿಯನ್ನು ಯೇಸುಕ್ರಿಸ್ತನ ಜನನದ ನೆನಪಿಗಾಗಿ ಆಚರಿಸುವ ಸಂಪ್ರದಾಯ ನಡೆದುಬಂದಿದೆ. ಡಿ.24ರಂದು ರೋಮ್‌ನಗರದಲ್ಲಿ ಸೇಂಟ್ ಪೀಟರ್ಸ್ ಬೆಸಿಲಿಕಾದ ಪವಿತ್ರ ಬಾಗಿಲನ್ನು ತೆರೆಯುವ ಮೂಲಕ ಪೋಪ್ ಫ್ರಾನ್ಸಿಸ್ ಅವರು 2025ರ ಜ್ಯೂಬಿಲಿ ವರ್ಷವನ್ನು ಉದ್ಘಾಟಿಸಿದರು. ಪೋಪ್ ಫ್ರಾನ್ಸಿಸ್ ಅವರು ಜ್ಯೂಬಿಲಿ 2025ಕ್ಕೆ 'ಭರವಸೆಯ ಯಾತ್ರಿಕರು' ಧ್ಯೇಯವಾಕ್ಯವನ್ನು ಘೋಷಿಸಿದ್ದಾರೆ ಎಂದು ಹೇಳಿದರು.

ಹವಾಮಾನ ಬದಲಾವಣೆ ಮತ್ತು ಯುದ್ಧಗಳು ಮುಕ್ತವಾಗಿ ಜಗತ್ತಿನಲ್ಲಿ ಶಾಂತಿ ಸ್ಥಾಪನೆಗೆ ಉತ್ತೇಜಿಸುವ ಉದ್ದೇಶದಿಂದ ಪೋಪ್ ಈ ಧ್ಯೇಯವಾಕ್ಯ ಆಯ್ಕೆ ಮಾಡಿದ್ದಾರೆ. ಪ್ರಪಂಚದಾದ್ಯಂತ ಎಲ್ಲಾ ಧರ್ಮಪ್ರಾಂತ್ಯಗಳಲ್ಲಿ ಜ್ಯೂಬಿಲಿ 2025ರ ಉದ್ಘಾಟನೆಗೆ ಡಿ.29 ಅನ್ನು ಪೋಪ್ ಅವರು ನಿಗದಿಪಡಿಸಿದ್ದಾರೆ. ಅಂತೆಯೇ ಮೈಸೂರು ಧರ್ಮಪ್ರಾಂತ್ಯದಲ್ಲೂ ಅಂದು ಸಂಜೆ 4ಕ್ಕೆ ಬನ್ನಿಮಂಟಪದ ಬೆಂಗಳೂರು–ಮೈಸೂರು ರಸ್ತೆಯಲ್ಲಿರುವ ದೀನರ ಮಾತೆಯ ದೇವಾಲಯದಲ್ಲಿ ಜ್ಯೂಬಿಲಿ ಉದ್ಘಾಟನೆಗೊಳ್ಳಲಿದೆ. ಬಳಿಕ ಸಂಜೆ 4.30ಕ್ಕೆ ದೀನರ ಮಾತೆಯ ದೇವಾಲಯದಿಂದ ಸಂತ ಫಿಲೋಮಿನಾ ಚರ್ಚ್‌ವರೆಗೆ ಮೆರವಣಿಗೆ ನಡೆಯಲಿದ್ದು, ಜ್ಯೂಬಿಲಿಗಾಗಿಯೇ ಸಿದ್ಧಪಡಿಸಿರುವ ವಿಶೇಷ ಜ್ಯೂಬಿಲಿ ಶಿಲುಬೆಯು ಇಡೀ ಮೆರವಣಿಗೆಯ ಕೇಂದ್ರ ಬಿಂದುವಾಗಿರಲಿದೆ. ಮರದಿಂದ ಸಿದ್ಧಪಡಿಸಿರುವ 8 ಅಡಿ ಎತ್ತರದ ಶಿಲುಬೆ ಇದಾಗಿದೆ ಎಂದು ವಿವರಿಸಿದರು.

ಇಡೀ ವರ್ಷ ಸಂತ ಫಿಲೋಮಿನಾ ಚರ್ಚ್‌ನಲ್ಲಿ ವಿಶೇಷ ಶಿಲುಬೆಯನ್ನು ಗೌರವಪೂರಕವಾಗಿ ಇಡಲಾಗುತ್ತದೆ. ಇದೇ ಶಿಲುಬೆಯನ್ನು ಧರ್ಮಪ್ರಾಂತ್ಯದ ಕ್ಯಾಥೋಲಿಕ ಚರ್ಚ್‌ಗಳಿಗೆ ಭಕ್ತಿಭಾವದಿಂದ ಕೊಂಡೊಯ್ಯಲಾಗುತ್ತದೆ. ಮೆರವಣಿಗೆಯಲ್ಲಿ ಭಕ್ತಿಗೀತೆಗಳನ್ನು ಹಾಡಲಾಗುವುದು. ಬಳಿಕ ಸಂತ ಫಿಲೋಮಿನಾ ಚರ್ಚ್‌ನಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಯಲಿದ್ದು, ತದನಂತರ ಸಂಜೆ 6ಕ್ಕೆ ಪವಿತ್ರ ಬಲಿಪೂಜೆ ನಡೆಯಲಿದೆ. ಮೈಸೂರು ಧರ್ಮ ಪ್ರಾಂತ್ಯದ ಎಲ್ಲಾ ನಾಲ್ಕು ಜಿಲ್ಲೆಗಳಿಂದ 5ರಿಂದ 6 ಸಾವಿರ ಜನರು ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ನಮ್ಮ ಕ್ರೈಸ್ತ ಬಾಂಧವರೊಂದಿಗೆ ಇತರ ಪಂಗಡದವರು ಬರಲು ಕರೆಕೊಟ್ಟಿದ್ದೇವೆ. ಇಚ್ಛಿಸಿದ್ದಲ್ಲಿ ಯಾವುದೇ ಮತದವರು ಭಾಗವಹಿಸಬಹುದು ಎಂದು ತಿಳಿಸಿದರು.

ಧರ್ಮಪ್ರಾಂತ್ಯದ ವಿವಿಧ ಚರ್ಚ್‌ಗಳು, ಸಂಸ್ಥೆಗಳು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಆಧ್ಯಾತ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ಆಯೋಜಿಸುವ ಮೂಲಕ ವರ್ಷವಿಡೀ ಜ್ಯೂಬಿಲಿ 2025 ಅನ್ನು ಆಚರಿಸಲು ಸಮಿತಿಯೊಂದನ್ನು ರಚಿಸಲಾಗಿದೆ. 2026ರ ಜ.6ರವರೆಗೆ ಜ್ಯೂಬಿಲಿಯನ್ನು ಆಚರಿಸಲಾಗುವುದು ಎಂದರು. ಮೈಸೂರು ಮೈಸೂರು ಧರ್ಮಕ್ಷೇತ್ರದ ಕುಲಪತಿ ರೆ.ಫಾ.ಜೋಸೆಫ್ ಪ್ಯಾಕಿರಾಜ್, ಕೋಶಾಧಿಕಾರಿ ರೆ.ಫಾ.ಸೆಬಾಸ್ಟಿನ್, ಸಂತ ಫಿಲೋಮಿನಾ ಚರ್ಚ್‌ನ ಪ್ರಧಾನ ಧರ್ಮಗುರು ರೆ.ಫಾ.ಸ್ಟೇನಿ ಡಿ.ಅಲ್ಮೆಡಾ, ಬನ್ನಿಮಂಟಪದ ಕ್ಯಾಥೋಲಿಕ್ ಕೇಂದ್ರದ ನಿರ್ದೇಶಕ ರೆ.ಡಾ.ಜೋಸೆಫ್ ಮರಿ ಗೋಷ್ಠಿಯಲ್ಲಿದ್ದರು.



ಮೈಸೂರಿನ ಸಂತ ಫಿಲೋಮಿನಾ ಚರ್ಚ್‌ನ ಸನ್ನಿತ್ರ ಹಾಲ್‌ನಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮೈಸೂರು ಧರ್ಮಕ್ಷೇತ್ರದ ಪ್ರೇಷಿತ ಆಡಳಿತಾಧಿಕಾರಿ ಪೂಜ್ಯ ಡಾ.ಬರ್ನಾರ್ಡ್ ಮೊರಾಸ್ (ಎಡದಿಂದ 3ನೇಯವರು) ಮಾತನಾಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಭೈರತಿ ರಣಗಲ್(ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಯುಐ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪುಷ್ಪ–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಪುಷ್ಪ–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುಐ (ಕ)	4 ಪ್ರದರ್ಶನಗಳು
ರಾಜಕಮಲ್	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಸಂಗಂ	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೇಬಿಜಾನ್ (ಹಿ)	4 ಪ್ರದರ್ಶನಗಳು
ಪ್ರಭಾ	
ಔಟ್ ಆಫ್ ಸಿಲಬಸ್(ಕ) + ಪುಷ್ಪ–2 (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಮ್ಯಾಕ್ಸ್ (ಕ): ಬೆ.9ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12ಕ್ಕೆ, ಸಂ.5.10ಕ್ಕೆ, ರಾ.7.40ಕ್ಕೆ, ಯುಐ (2024) (ಕ): ಮ.2.30ಕ್ಕೆ, ಬರೋಜ್(3ಡಿ) (ಮ): ರಾ.10.10ಕ್ಕೆ.
ಸ್ಕ್ರೀನ್ 2	ಯುಐ (2024) (ಕ): ಬೆ.9.40ಕ್ಕೆ, ಸಂ.4.25ಕ್ಕೆ, ಪುಷ್ಪಾ 2 (ಕ): ಮ.12.30ಕ್ಕೆ, ಬೇಬಿ ಜಾನ್ (ಹಿಂ): ರಾ.7.10ಕ್ಕೆ, ಮಾರ್ಕೋ (ಮ): ರಾ.10.30ಕ್ಕೆ.
ಸ್ಕ್ರೀನ್ 3	ಹರಿದಾಸರ ದಿನಚರಿ (ಕ): ಬೆ.10.50ಕ್ಕೆ, ಬೇಬಿ ಜಾನ್ (ಹಿಂ): ಮ.12.55ಕ್ಕೆ, ಸಂ.4.15ಕ್ಕೆ, ಯುಐ (2024) (ಕ): ರಾ.7.35ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.10.15ಕ್ಕೆ, ಮ.1.10ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಅಮರನ್ (ಕ): ಬೆ.10.30ಕ್ಕೆ, ರಾ.7.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಧೀರ ಭಗತ್ ರಾಯ್ (ಕ): ಸಂ.4.30ಕ್ಕೆ.
ಸ್ಕ್ರೀನ್ 2	ಭೈರತಿ ರಣಗಲ್ (ಕ): ಬೆ.10.40ಕ್ಕೆ, ಪುಷ್ಪಾ 2 (ಕ): ಮ.1.15ಕ್ಕೆ, ಸಂ.5.15ಕ್ಕೆ, ರಾ.9.15ಕ್ಕೆ
ಸ್ಕ್ರೀನ್ 3	ಪುಷ್ಪಾ 2 (ಕ): ಬೆ.11.30ಕ್ಕೆ, ರಾ.7.45ಕ್ಕೆ, ಪುಷ್ಪಾ 2 (ತೆ): ಸಂ.4ಕ್ಕೆ.
ಸ್ಕ್ರೀನ್ 4	ಪುಷ್ಪಾ 2 (ತೆ): ಬೆ.10.30ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಪುಷ್ಪಾ 2 (ಕ): ಮ.2.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೂಗೂರು ಬಳಿ ಬೋನ್‌ಗೆ ಬಿದ್ದ ಚಿರತೆ

ಆತಂಕಗೊಂಡಿದ್ದ ರೈತರು ನಿಟ್ಟುಸಿರು




ಮೈಸೂರು, ಡಿ.27(ಎಸ್‌ಬಿಡಿ)– ಮೈಸೂರು ಜಿಲ್ಲೆಯ ತಿ.ನರಸೀಪುರದ ಬಳಿ ಮೂರ್‍ನಾಲ್ಕು ವರ್ಷದ ಹೆಣ್ಣು ಚಿರತೆಯೊಂದು ಸೆರೆಯಾಗಿದೆ.

ತಿ.ನರಸೀಪುರ ತಾಲೂಕು ವಲಯ ಅರಣ್ಯ ವ್ಯಾಪ್ತಿಯ ಮೂಗೂರು ಹೋಬಳಿ ಹ್ಯಾಕನೂರು ಗ್ರಾಮದಲ್ಲಿ ಕಳೆದ 20 ದಿನಗಳಿಂದ ಚಿರತೆ ಹಾವಳಿ ಹೆಚ್ಚಾಗಿತ್ತು. ಚಿರತೆ ದಾಳಿಯಿಂದ ಅನೇಕ ಜಾನುವಾರುಗಳು ಬಲಿಯಾಗಿವೆ ಎಂದು ರೈತರು ಕಂಗಾಲಾಗಿದ್ದರು. ಜಮೀನಿನಲ್ಲಿ ಕೆಲಸ ಮಾಡುವಾಗ ಚಿರತೆ ಕಾಣಿಸಿದ್ದಾಗಿ ಹಲವರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರು.

ಈ ಹಿನ್ನೆಲೆಯಲ್ಲಿ ಸ್ಥಳ ಪರಿಶೀಲನೆ ನಡೆಸಿದ ಅರಣ್ಯ ಇಲಾಖೆ ಸಿಬ್ಬಂದಿ, ಹ್ಯಾಕನೂರು ಗ್ರಾಮದ ಖಾಸಗಿ ಜಮೀನಿನಲ್ಲಿ ಡಿ.20ರಂದು ಬೋನ್ ಇಟ್ಟಿದ್ದರು. ಅಂದಿನಿಂದ ಆ ಭಾಗದಲ್ಲಿ ಚಿರತೆ ಕಾಣಿಸಿಕೊಂಡಿರಲಿಲ್ಲ. ಆದರೆ ಗುರುವಾರ ಬೆಳಗ್ಗೆ ಮೂರ್‍ನಾಲ್ಕು ವರ್ಷದ ಹೆಣ್ಣು ಚಿರತೆ ಬೋನ್‌ನಲ್ಲಿ ಸೆರೆಯಾಗಿದೆ. ಪಶು ವೈದ್ಯಾಧಿಕಾರಿಗಳು ಚಿರತೆಯನ್ನು ಪರಿಶೀಲಿಸಿ ಅದು ಆರೋಗ್ಯವಾಗಿದೆ ಎಂದು ಖಚಿತ ಪಡಿಸಿದ್ದಾರೆ. ಸದ್ಯ ಆ ಚಿರತೆಗೆ ಮೈಕ್ರೋಚಿಪ್ ಅಳವಡಿಸಲಾಗಿದ್ದು, ಮೇಲಾಧಿಕಾರಿಗಳ ಆದೇಶ ಪಡೆದು ಅದನ್ನು ಸೂಕ್ತ ವನ್ಯಜೀವಿ ಧಾಮ ಅರಣ್ಯ ಪ್ರದೇಶಕ್ಕೆ ಬಿಡುಗಡೆಗೊಳಿಸಲಾಗುವುದು ಎಂದು ಮೈಸೂರು ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ಯಾಲೆಂಡರ್ ಬಿಡುಗಡೆ



ಮೈಸೂರಿನ ಸಿದ್ದಾರ್ಥನಗರದಲ್ಲಿರುವ ಕನಕ ಗುರುಪೀಠದಲ್ಲಿ ಮೈಸೂರು ತಾಲೂಕು ಕುರುಬರ ಸಂಘದ ವತಿಯಿಂದ ಪ್ರಕಟಿಸಿರುವ 2025ನೇ ಸಾಲಿನ ಕ್ಯಾಲೆಂಡರ್ ಅನ್ನು ಕನಕ ಗುರುಪೀಠದ ಶ್ರೀ ಶಿವಾನಂದಪುರಿ ಮಹಾ ಸ್ವಾಮೀಜಿ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಸಂಘದ ಗೌರವಾಧ್ಯಕ್ಷ ನಾಡನಹಳ್ಳಿ ಎಂ.ರವಿ, ಅಧ್ಯಕ್ಷ ಸಿ.ಬಸವರಾಜು, ಉಪಾಧ್ಯಕ್ಷ ಹೆಚ್.ಸಿ.ರಾಜು, ಪ್ರಧಾನ ಕಾರ್ಯದರ್ಶಿ ಪಿ.ಅಣ್ಣಯ್ಯ, ಕೇಬಲ್ ಪಾಪಣ್ಣ, ನಿರ್ದೇಶಕರಾದ ಕಾಳ ಮಾಯೀಗೌಡ, ಮೋಹನ್‌ಕುಮಾರ್, ಮಲ್ಲೇಶ್, ದೊಡ್ಡಯ್ಯ, ಸೋಮಣ್ಣ, ಮಹೇಶ, ರಂಗಸ್ವಾಮಿ, ಸಿ. ಪುಟ್ಟಸ್ವಾಮಿ, ಅಪ್ಪುಗೌಡ, ಮಾದೇಗೌಡ ಮತ್ತಿತರರು ಉಪಸ್ಥಿತರಿದ್ದರು.

WE ARE HIRING

- DUTY DOCTORS
- NURSING INCHARGE
- NURSES (Exp., or Freshers) for labour room
- OT STAFF
- ICU STAFF
- NICU STAFF
- MARKETING EXECUTIVE

Send your CV:
Email : smh.mys2025@gmail.com
Call : 97400 34020

NEWLY BUILT HOUSE FOR SALE

NORTH EAST CORNER
1200 sft (Approx)
2 BHK, Architecture House, East Facing Door, Granite Flooring Etc.
Price : 85 Lakhs (Slightly Negotiable)
Located At A Premium Residential Layout, Next To Srinagar, Off JP Nagar Mysore.
Contact : 90719 66999

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ ಮಂಡ್ಯ–571606, ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಹುಲಿಕೆರೆ ಗ್ರಾಮ, ಎಂಎನ್‌ಪಿಎಂ ಕಾಲೋನಿ, ಮನೆ ನಂ. 49/ಎ ರಲ್ಲಿ ವಾಸವಾಗಿರುವ ರಾಮಚಂದ್ರ ರವರ ಧರ್ಮಪತ್ನಿಯಾದ ಮಂಗಳ ರವರಿಗೆ ಸೇರಿದ ದಿನಾಂಕ 04/12/2004 ರ ನೋಂದಾಯಿತ ಕ್ರಯ ಪತ್ರಗಳು ದಸ್ತಾವೇಜು ಸಂಖ್ಯೆ ಎಸ್‌ಆರ್‌ಪಿ–1–01498–2004–05 ಮತ್ತು ದಿನಾಂಕ 18–11–2005, ಎಸ್‌ಆರ್‌ಪಿ–1–02482–2005–06 ದಿನಾಂಕ 24–12–2024 ರಂದು ಕಳೆದು ಹೋಗಿರುತ್ತವೆ. ಇದರ ಸಂಬಂಧ ದಿನಾಂಕ 24/12/2024 ರಂದು ಮಂಡ್ಯ ಪೊಲೀಸ್ ಠಾಣೆಗೆ ದೂರಿನ ಸಂಖ್ಯೆ 1399118/2024 ರಂತೆ ದೂರನ್ನು ದಾಖಲಿಸಿರುತ್ತಾರೆ. ಮತ್ತು ದಿನಾಂಕ 08.08.2016 ರ ನೋಂದಾಯಿತ ಕ್ರಯಪತ್ರದ ದಸ್ತಾವೇಜು ಸಂಖ್ಯೆ ಎಸ್‌ಆರ್‌ಪಿ–1–02192–2016–17 ದಿನಾಂಕ 26/12/2024 ರಂದು ಕಳೆದು ಹೋಗಿರುತ್ತದೆ. ಇದರ ಸಂಬಂಧ 26–12–2024 ರಂದು ದೂರಿನ ಸಂಖ್ಯೆ 1400310/2024 ರಂತೆ ದೂರನ್ನು ದಾಖಲಿಸಿರುತ್ತಾರೆ. ಸದರಿ ಕ್ರಯಪತ್ರವು ಯಾರಿಗಾದರೂ ದೊರಕಿದಲ್ಲಿ ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಸಾರ್ವಜನಿಕ ಪ್ರಕಟಣೆ ದಿನಾಂಕದಿಂದ 7 (ಏಳು) ದಿನಗಳ ಒಳಗಾಗಿ ತಲುಪಿಸತಕ್ಕದ್ದು. ಒಂದೊಮ್ಮೆ ಯಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ಕ್ರಯ ಪತ್ರವನ್ನು ದುರುಪಯೋಗ ಪಡಿಸಿಕೊಂಡಲ್ಲಿ ಸದರಿ ವ್ಯಕ್ತಿಗಳೇ ಹೊಣೆಗಾರರಾಗುತ್ತಾರೆ. ಹಾಗೂ ನಮ್ಮ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/– ಲೋಹಿತ್ ಎನ್, B.A., LL.B.,
ವಕೀಲರು, ಶ್ರೀ ಸಾಯಿ ಲಾ–ಅಸೋಸಿಯೇಟ್ಸ್
ನಂ. 2967/2, 14ನೇ ಮೇನ್, 2ನೇ ಕ್ರಾಸ್,
ಸರಸ್ವತಿಪುರಂ, ಮೈಸೂರು–570009.
ಮೊ: 9611113323
ದಿನಾಂಕ: 26/12/2024.
ಸ್ಥಳ: ಮೈಸೂರು

ಅತ್ಯುತ್ತಮ ವಾಣಿಜ್ಯ ಸ್ಥಳ ಮಾರಾಟಕ್ಕಿದೆ

5800 ಚದರ ಅಡಿ, ನಾರ್ತ್ ಫೇಸ್, ಸ್ಪಷ್ಟ ದಾಖಲಾತಿಯೊಂದಿಗೆ ಅತ್ಯುತ್ತಮ ವಾಣಿಜ್ಯ ಆಸ್ತಿ, ಫೈವ್ ಲೈಟ್ ವೃತ್ತದ ಬಳಿ, ಬೆಂಗಳೂರು ಮತ್ತು ನೀಲಗಿರಿ ರಸ್ತೆಗೆ – ಪ್ರಮುಖ ಲ್ಯಾಂಡ್‌ಮಾರ್ಕ್‌ಗಳು ಮತ್ತು ಸೌಕರ್ಯಗಳಿಗೆ ಹತ್ತಿರವಿರುತ್ತದೆ. ಆಸಕ್ತಿಯುಳ್ಳವರು ಸಂಪರ್ಕಿಸಿ:
9945399596

ಬೇಕಾಗಿದ್ದಾರೆ WANTED

ಪ್ರಸಿದ್ಧ ಸಸ್ಯಹಾರಿ ಹೋಟೆಲ್‌ಗೆ ಪುರಷರು ಹಾಗೂ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ

ಹುದ್ದೆ	ಅನುಭವ	ಸಂಬಳ
ಬ್ರಾಹ್ಮಣ ಅಯ್ಯಂಗಾರ್ ಕುಕ್ ದಕ್ಷಿಣ ಭಾರತಶೈಲಿ)	10ವರ್ಷ	25,000-50,000
ಮಹಿಳಾ ಕ್ಯಾಶಿಯರ್ (Billing Software)	2ವರ್ಷ	15,000-18,000
ಮಹಿಳಾ ಸರ್ವಿಸ್ ಜಾಬ್	2ವರ್ಷ	11,000-14,000
ಕೌಂಟರ್ ಸರ್ವಿಸ್ ಜಾಬ್	2ವರ್ಷ	13,000-15,000

ಸ್ಥಳ : ಗೋಕುಲಂ ವಿ.ವಿ. ಮೊಹಲ್ಲಾ, ಮೈಸೂರು
ವಿಶೇಷ ಸೂಚನೆ : ಕನ್ನಡ, ಇಂಗ್ಲಿಸ್, ಹಿಂದಿ ಮಾತನಾಡುವ ಅನುಭವವಿರಬೇಕು
9036990878, 9900961768, 8105292673

ಹೊಯ್ಸಳ ಕರ್ನಾಟಕ ಸಂಘ (ನೋಂ.)

ರಿ.ನಂ.ಮಿಸ್–ಸಿ 195 (ನಂ.419/43-44)
888, ನಾರಾಯಣಶಾಸ್ತ್ರಿ ರಸ್ತೆ, ಲಕ್ಷ್ಮೀಪುರಂ, ಮೈಸೂರು-570004

2023–24ನೇ ಸಾಲಿನ 63ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆ ಆಹ್ವಾನ ಪತ್ರಿಕೆ

ಮಾನ್ಯ ಸದಸ್ಯರೇ,
ಸಂಘದ 63ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ 29-12-2024ನೇ ಭಾನುವಾರ ಬೆಳಗ್ಗೆ 10–00 ಗಂಟೆಗೆ ಸರಿಯಾಗಿ ಸಂಘದ ಅಧ್ಯಕ್ಷರಾದ
ಶ್ರೀ ಕೆ. ಆರ್. ಸತ್ಯನಾರಾಯಣ
ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಸಭೆಯನ್ನು ಯಶಸ್ವಿಗೊಳಸಬೇಕೆಂದು ಕೋರಿದೆ.

ಸ್ಥಳ: ಹೊಯ್ಸಳ ಕರ್ನಾಟಕ ಸಂಘ
888, ನಾರಾಯಣಶಾಸ್ತ್ರಿ ರಸ್ತೆ, ಲಕ್ಷ್ಮೀಪುರಂ, ಮೈಸೂರು – 570 004.

ಸಹಿ/– ಕಾರ್ಯಕಾರಿ ಸಮಿತಿ ಅಪ್ಪಣೆ ಮೇರೆಗೆ
ಜಯಸಿಂಹ ಎನ್. ಎಸ್. ಗೌ|| ಕಾರ್ಯದರ್ಶಿ
ದಿನಾಂಕ: 30–11–2024, ಸ್ಥಳ : ಮೈಸೂರು

COMMERCIAL SPACE FOR RENT

1st Floor
25X30, 10X15
V V Mohalla, K.D.Road,
Near Bhuvan Chicken's, Mysuru
Contact:
90360 20074 / 96866 66800

ನಿವೇಶನ ಮಾರಾಟಕ್ಕಿದೆ

ಮೈಸೂರು ನಗರ, ವಿಜಯನಗರ 4ನೇ ಹಂತ SVEI ಪಬ್ಲಿಕ್ ಶಾಲೆ ಹತ್ತಿರ 30x40 ಅಳತೆಯ ಎರಡು ನಿವೇಶನಗಳು ಮಾರಾಟಕ್ಕಿದೆ
ಸಂಪರ್ಕಿಸಿ: ಬೀರೇಶ್
8095854538

MUDA APPROVED SITES FOR SALE

KBL SILICON CITY
30x40 W/F & 30x50 E/F
Near BEML, L&T, Infosys, Mysore
BANK LOAN AVAILABLE.
READY FOR REGISTRATION
9686573798, 9148434989

SITE FOR SALE

30X40 EAST FACING SITE FOR SALE
in PRAGATHI DREAMS in Paper Mill Circle, near KBL Silicon City and MMG Grand City
Price 48 lakh
Near Infosys and L&T
Call : 95915 44080 / 98440 96848

Exchange your old sofa set to brand new sofa set also repair done. contact

9591012944

ಬೇಕಾಗಿದ್ದಾರೆ

45 ವರ್ಷದೊಳಗಿನ B.Sc (Ag) ವಿದ್ಯಾರ್ಹತೆಯುಳ್ಳ, ಕಾಫಿ ಮತ್ತು ಅಡಿಕೆ ತೋಟದ ಕೆಲಸದ ಬಗ್ಗೆ ಅನುಭವವಿರುವ, ದಿನ ನಿತ್ಯದ ವ್ಯವಹಾರ ವಹಿವಾಟುಗಳನ್ನು ನಿಭಾಯಿಸಲು, ಸ್ವಂತ ಬೈಕ್ ಉಳ್ಳವರು ಹಾಗೂ ನಮ್ಮದೇ ವಸತಿ ಸೌಕರ್ಯದಲ್ಲಿ ವಾಸಿಸಲು ಸಿದ್ಧರಿರುವವರು
(ಉಚಿತ ವಸತಿ ಸೌಕರ್ಯ ಒದಗಿಸಲಾಗುವುದು),
4 Wheeler ಡ್ರೈವಿಂಗ್ ಬಲ್ಲವರು. ಕೆಲಸದ ಸ್ಥಳ: ಕೊಡಗು.
ಈ ಮೇಲಿನ ಹುದ್ದೆಗೆ ಅರ್ಹತೆಯುಳ್ಳ ಅಭ್ಯರ್ಥಿಗಳು ಈ ಕೆಳಕಂಡ ದೂರವಾಣಿ ಸಂಖ್ಯೆಗೆ ಸಂಪರ್ಕಿಸಿ ಹಾಗೂ ಅರ್ಜಿಗಳನ್ನು ವಾಟ್ಸಪ್ ಮೂಲಕ ಕಳುಹಿಸಿ.
9448283981 / 9448283983
email: technoresourceservices@gmail.com

Vee2 Developers — MUDA APPROVED

YEAR END DHAMAKA
₹20 Lakhs Only
(20 x 30 Site)
HERITAGE CITY
Uttanahalli, Mysuru
PRM/KA/RERA/1268/PR/160124/006555
READY FOR REGISTRATION
Available Plots 20x30 & 30x40
8055 004 400

ತಿದ್ದುಪಡಿ

ದಿನಾಂಕ 27-12–2024 ರಂದು ಮೈಸೂರು ಮಿತ್ರ ದಿನಪತ್ರಿಕೆಯಲ್ಲಿ ಕಾವೇರಿ ನೀರಾವರಿ ನಿಗಮ ನಿಯಮಿತ. ರವರ ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಪ್ರಕಟಣೆ ಸಂಖ್ಯೆ 13/2024–25) ಜಾಹೀರಾತಿನಲ್ಲಿ ಕೆ.ಡಬ್ಲ್ಯೂ–3 ಅನುಸಾರ ಎಂದು ತಪ್ಪಾಗಿ ಪ್ರಕಟವಾಗಿರುತ್ತದೆ ಅದು ಕೆ.ಡಬ್ಲ್ಯೂ–1 ಅನುಸಾರ ಎಂದು ಓದಿಕೊಳ್ಳುವುದು. ಉಳಿದಂತೆ ಸರಿಯಾಗಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಕಬಿನಿ ನಾಲೆಗಳ ವಿಭಾಗ, ನಂಜನಗೂಡು

ದಿ ಮೈಸೂರು ಸಿಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ಅ.,

ಸ್ಥಾಪನೆ :1916 ದೂರವಾಣಿ : 0821–2448947
ಚಾಮರಾಜ ಜೋಡಿ ರಸ್ತೆ, ಕೆ.ಆರ್. ಮೊಹಲ್ಲಾ, ಮೈಸೂರು–04

ಪ್ರಕಟಣೆ

ದಿನಾಂಕ: 26-12-2024


ಮೇಲ್ಕಂಡ ಸೊಸೈಟಿಯ ಆಡಳಿತ ಮಂಡಳಿಯ ಚುನಾವಣೆಯನ್ನು ದಿನಾಂಕ: 29-12-2024 ನೇ ಭಾನುವಾರದಂದು ಬೆಳಗ್ಗೆ 9–00 ಘಂಟೆಯಿಂದ ಸಂಜೆ 4–00 ಘಂಟೆಯವರೆವಿಗೆ, ಸೊಸೈಟಿಗೆ ಸೇರಿದ ಸಮುದಾಯ ಭವನ, ನಾಲಾ ಬೀದಿ, ಕೆ.ಆರ್.ಮೊಹಲ್ಲಾ, ಮೈಸೂರು.,ರಲ್ಲಿ ನಡೆಸಲು ನಿಗದಿಪಡಿಸಲಾಗಿರುತ್ತೆ.

ಆದುದರಿಂದ, ಮತದಾನ ಮಾಡಲು ಅರ್ಹತೆಯುಳ್ಳ ಸಂಘದ ಮಾನ್ಯ ಸದಸ್ಯರುಗಳು ತಪ್ಪದೇ ಬಂದು ಮತದಾನವನ್ನು ಮಾಡಬೇಕೆಂದು ಕೋರಲಾಗಿರುತ್ತೆ. ಮತದಾನದ ವೇಳೆ ಸೊಸೈಟಿಯಿಂದ ನೀಡಿರುವ ಭಾವಚಿತ್ರವನ್ನೊಳಗೊಂಡ ಗುರುತಿನ ಕಾರ್ಡನ್ನು ಕಡ್ಡಾಯವಾಗಿ ಹಾಜರುಪಡಿಸಬೇಕಾಗಿರುತ್ತೆ.

ಸೂಚನೆ: ಗುರುತಿನ ಕಾರ್ಡನ್ನು ತಹಲ್ವರೆವಿಗೂ ಪಡೆಯದೇ ಇರುವ ಮತದಾನ ಮಾಡಲು ಅರ್ಹರಾದ ಮಾನ್ಯ ಸದಸ್ಯರುಗಳು ಕಛೇರಿಯ ವ್ಯವಹಾರದ ವೇಳೆಯಲ್ಲಿ ಮೂರು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದೊಂದಿಗೆ ಸೊಸೈಟಿಗೆ ಆಗಮಿಸಿ, ಗುರುತಿನ ಕಾರ್ಡನ್ನು ಪಡೆಯಬೇಕೆಂದು ಈ ಮೂಲಕ ಕೋರಲಾಗಿದೆ.

ಸಹಿ/– ಬಿ.ಎಸ್.ಶ್ರೀನಾಥ್, ಕಾರ್ಯದರ್ಶಿ
ಮೊ :9945228842

ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ಶ್ರೀಯುತ ಕೆ. ಸದಾಶಿವಯ್ಯರವರು (ರಾಜು)
(ರೈಲ್ವೆ ಇಲಾಖೆ)

ನಿಧನ : 17–12–2024 ಮಂಗಳವಾರ ದೈವಾದೀನರಾಗಿದ್ದು, ತತ್ಸಂಬಂಧವಾಗಿ ಮೃತರ ವೈಕುಂಠ ಸಮಾರಾಧನೆ ಕಾರ್ಯವನ್ನು ದಿನಾಂಕ 28–12–2024 ನೇ ಶನಿವಾರ ಮಧ್ಯಾಹ್ನ 12:00 ಗಂಟೆಗೆ **ಕಟ್ಟೆಮನೆ ಒಕ್ಕಲಿಗರ ಶ್ರೀರಾಮ ಮಂದಿರ,** ಕೆ.ಆರ್. ಆಸ್ಪತ್ರೆ ರಸ್ತೆ, ಮಂಡಿ ಮೊಹಲ್ಲಾ ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಪತ್ನಿ ಶ್ರೀಮತಿ ಗೌರಮ್ಮ, ಮೃತರ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಕುಟುಂಬವರ್ಗದವರು ಮತ್ತು ಬಂಧುಮಿತ್ರರು

ಭೋಜನ : ಮಧ್ಯಾಹ್ನ 12:00 ಗಂಟೆಗೆ